ಸೋಮವಾರ, ಜೂನ್ 19, 2023 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಧನೆ

2023ನೇ ಸಾಲಿನ ಜೆಇಇ- ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಪಡೆದ ವಾವಿಲಾಲ ಚಿದ್ವಿಲಾಸ್ ರೆಡ್ಡಿಯನ್ನು ಪೋಷಕರು ಅಭಿನಂದಿಸಿದರು



OM SHRI GURUBASAVALINGAYA NAMAHA
HIREMATH SAMSTHAN VIDYAPEETH TRUST(R), BHALKI
Sri Channabasaveshwar Gurukul (Resi.) PU Science College, Kardyal - 585 413
TQ. BHALKI - DIST. BIDAR - KARNATAKA
GURUKUL STUDENTS MAKES A BIG SPECTACULAR ACHIEVEMENT IN
NEET RESULT-2023
OVER 200 STUDENTS OBTAINED ELIGIBILITY RANK FOR MBBS
CONGRATULATIONS TO THE NEET TOPPERS
VINITA MARKS 657
MANASAVINI MARKS 645
PRAKRUTI MARKS 624
SANTOSH MARKS 620
PRAJWAL MARKS 610
SOHAN MARKS 605
SIDDANTH MARKS 603
SUSHILKUMAR MARKS 600
MANISH MARKS 591
RUSHIKESH MARKS 585
CHETAN MARKS 581
SIDRAMESH MARKS 576
GNYANESHWAR MARKS 576
PRASAD MARKS 575
GAJANAND MARKS 573
MALIKARJUN MARKS 572
NAGARAJ MARKS 572
MAGI VISHVATEJ MARKS 571
SIDDLING MARKS 571
PRAKASH MARKS 571
RAHUL MARKS 571
SHIVSHANKAR MARKS 569
PRIYANKA MARKS 566
SHREEMA MARKS 564
SHREYASH MARKS 564
TUKARAM MARKS 563
SRUJWAL MARKS 563
SHRUTI MARKS 562
VISHWANATH MARKS 558
NIKHITA MARKS 555
VISHNUKANT MARKS 555
ANUSHREE MARKS 554
GAYATRI MARKS 554
ARJUN MARKS 554
SANDHYA MARKS 552
VACHANAMBIKA MARKS 552
BHOOMIKA MARKS 550
AKASH MARKS 550
ANUPRIYA MARKS 548
SRIGANGA MARKS 547
SHIVADARSHAN MARKS 546
ANAGHA MARKS 546
CHAITANYA MARKS 541
CHAITRA MARKS 541
SHILPA MARKS 537
RAHUL MARKS 534
NAGESHWARI MARKS 534
SHRAVAN MARKS 534
SUPRIT MARKS 531
DNYANESHWAR MARKS 530
SHIVAPRASAD MARKS 530
SACHIN MARKS 530
SHEKHAR MARKS 529
SHRUSTI MARKS 529
SWAPNIL MARKS 529
DEEPIKA MARKS 528
KASHINATH MARKS 527
MAHADEVI MARKS 523
AKANKSHA MARKS 522
SHIVA MARKS 522
PANKAJ MARKS 522
CHANNAVEER MARKS 521
SANGMESH MARKS 518
RAKSHITA MARKS 517
SUGANDHA MARKS 513
MAHESH MARKS 510
HARI OM MARKS 510
NAND KUMAR MARKS 509
VINAYAK MARKS 508
POOJA MARKS 508
PRAJVAL MARKS 508
PRATHAMESH MARKS 506
RADHIKA MARKS 506
SUMERA MUSKAAN MARKS 506
SOUMYA MARKS 506
GANESH MARKS 505
KEDARNATH MARKS 505
SHRUSTI MARKS 503
SHIVKUMAR MARKS 503
BHAVANI MARKS 503
SIDRAM MARKS 501
RADHIKA MARKS 500
DIKSHA MARKS 500
D VAISHNAVI MARKS 500
ANJANAYYA MARKS 495
MAHESH MARKS 494
VAISHNAVI MARKS 493
PRAJWAL MARKS 493
NAGARAJ MARKS 492
YOGITA MARKS 491
VAISHNAVI MARKS 487
AJIT MARKS 486
PRAGATI MARKS 485
DIVYA MARKS 484
MAMTA MARKS 484
RAMYA MARKS 484
GURUKIRAN MARKS 483
SAYED FAIZAN MARKS 482
SUMEET MARKS 480
AMULYA JAGATE MARKS 480
BASAVAKIRAN MARKS 480
VIJAYKUMAR MARKS 480
CONGRATULATIONS - FABULOUS PERFORMERS IN KCET 2023
VINAY 64TH RANK ENGINEERING
PRIYANKA 90TH RANK VET. SCIENCE
SANTOSH 140TH RANK VET. SCIENCE
SHWETA 212TH RANK VET. SCIENCE
PRIYANKA 460TH RANK VET. SCIENCE
PRAKURTI 497TH RANK VET. SCIENCE
VISHAL 564TH RANK VET. SCIENCE
SHRUTI 585TH RANK VET. SCIENCE
SHIVSHANKER 623RD RANK VET. SCIENCE
SHIVAKUMAR 703RD RANK VET. SCIENCE
DINESH 712TH RANK ENGINEERING
ADITYA 797TH RANK VET. SCIENCE
SUSHILKUMAR 894TH RANK VET. SCIENCE
BHARAT REDDY 926TH RANK VET. SCIENCE
PRASHANT 949TH RANK VET. SCIENCE
PRAJWAL 976TH RANK VET. SCIENCE
SIDDANT 997TH RANK VET. SCIENCE
OVER 200 STUDENTS SECURED BELOW 5000 STATE RANK FOR BNYS & VETERNARY SCIENCE
ADMISSION OPEN FOR LONG TERM NEET 2023-2024
CONTACT : 8147740402 - 7353304503 - Website: www.cbgurukul.in

ಸೋಮವಾರ, ಜೂನ್ 19, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 169 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಬಿಸಿಗಾಳಿ ನಿರ್ವಹಣೆಗೆ ಸಜ್ಜಾಗದ ಸರ್ಕಾರ

ಎಸ್‌ಎಚ್‌ಜಿ ಸಾಲ ಬಾಕಿ ₹2,650 ಕೋಟಿ 6

45 ದಿನ ಉರುಳಿದರೂ ನಿಲ್ಲದ ಹಿಂಸಾಚಾರ: 115 ಮಂದಿ ಸಾವು

ಜೆಇಇ- ಅಡ್ವಾನ್ಸ್‌ಡ್ 2023: ಫಲಿತಾಂಶ ಪ್ರಕಟ 11

ಮಣಿಪುರ: ಶಾಂತಿ ಸ್ಥಾಪನೆ ಮರೀಚಿಕೆ 11

ಜೂನ್ 3ನೇ ವಾರವಾದರೂ ರಾಜ್ಯ ಪ್ರವೇಶಿಸದ ಮುಂಗಾರು ಮಾರುತ

ಮಳೆ ಕೊರತೆ: ಬರದ ಭೀತಿ?

• ಎಸ್. ರವಿಪ್ರಕಾಶ್

ಬೆಂಗಳೂರು: ಜೂನ್ ಮೂರನೇ ವಾರಕ್ಕೆ ಕಾಲಿಟ್ಟರೂ ಮುಂಗಾರು ಮಳೆ ಆರಂಭವಾಗುವ ಲಕ್ಷಣಗಳು ಕಾಣಿಸುತ್ತಿಲ್ಲ. ರಾಜ್ಯದ 31 ಜಿಲ್ಲೆಗಳ 217 ತಾಲ್ಲೂಕುಗಳಲ್ಲಿ ಮಳೆಯ ತೀವ್ರ ಕೊರತೆ ಕಾಡಿದೆ. ಈ ವಾರವೂ ಮಳೆ ಬೀಳದೇ ಇದ್ದರೆ, ಬರದ ಛಾಯೆ ಆವರಿಸುವ ಆತಂಕ ಎದುರಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಭಾನುವಾರ ಬಿಡುಗಡೆ ಮಾಡಿರುವ ಮಾಹಿತಿ ಪ್ರಕಾರ, 11 ಜಿಲ್ಲೆಗಳಲ್ಲಿ ಮಳೆಯ ಕೊರತೆ ಇದ್ದರೆ, 20 ಜಿಲ್ಲೆಗಳಲ್ಲಿ ಅತ್ಯಲ್ಪ ಮಳೆಯಾಗಿದೆ. ಮುಂದಿನ ಎರಡು ವಾರಗಳಲ್ಲಿ ಉತ್ತಮ ಮಳೆಯಾಗಬಹುದು ಎಂಬ ಆಶಯ ವರದಿಯಲ್ಲಿದೆ.

20 ಜಿಲ್ಲೆಗಳಲ್ಲಿ ಮಳೆಯ ಕೊರತೆ ಪ್ರಮಾಣ ಶೇಕಡ 60ಕ್ಕೂ ಮೀರಿದೆ. 11 ಜಿಲ್ಲೆಗಳಲ್ಲಿ ಶೇ 29ರಿಂದ ಶೇ 59ರಷ್ಟು ಕೊರತೆ ಇದೆ. ಜೂನ್ 1ರಿಂದ ಈಚೆಗೆ ಸರಾಸರಿ 100 ಮಿ.ಮೀ ಮಳೆ ಆಗಬೇಕಿತ್ತು. ಆದರೆ, ಈವರೆಗೆ 30 ಮಿ.ಮೀ ಮಳೆಯಾಗಿದೆ. ಇದು ಕಳವಳಕಾರಿ ಸಂಗತಿ ಎನ್ನುತ್ತಾರೆ ತಜ್ಞರು.

ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಅತಿ ಹೆಚ್ಚು ಪ್ರಮಾಣದ ಮಳೆ ಬೀಳಬೇಕಿತ್ತು. ಆದರೆ, ಅಲ್ಲಿಯೇ ಅತ್ಯಲ್ಪ ಮಳೆಯಾಗಿದೆ. ಈ ಎರಡೂ ಪ್ರದೇಶಗಳಲ್ಲಿನ ಮಳೆಯ ಕೊರತೆಯ ಪರಿಣಾಮ ಇಡೀ ರಾಜ್ಯದ ಮೇಲಾಗುವುದು ನಿಶ್ಚಿತ. ಜಲಾಶಯಗಳಲ್ಲಿ ನೀರು ಬರಿದಾಗುವ ಸ್ಥಿತಿ ಬಂದಿದೆ. ನೆರೆಯ ತಮಿಳುನಾಡು, ಕಾವೇರಿ ನದಿಯ ನೀರಿಗೆ ಒತ್ತಡ ಹೇರುತ್ತಿರುವುದು ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

4ನೇ ಪುಟ ನೋಡಿ

3,029 ಕುಡಿಯುವ ನೀರಿನ ಕೊರತೆ ಇರುವ ಗ್ರಾಮಗಳು

610 ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ

414 ಹೊಸದಾಗಿ ಕೊರೆಯಿಸಿದ ಕೊಳವೆ ಬಾವಿಗಳು

144 ಬಾಡಿಗೆ ಆಧಾರದಲ್ಲಿ ಕೊಳವೆ ಬಾವಿಗಳಿಂದ ನೀರು ಪೂರೈಕೆ

(ಮಾಹಿತಿ- ಗ್ರಾಮೀಣಾಭಿವೃದ್ಧಿ ಇಲಾಖೆ)

ಔರಾದ್ ತಾಲ್ಲೂಕಿನ ಘಾಮಾ ತಾಂಡಾ ನಿವಾಸಿಗಳು ಜಂಬಗಿ ಗ್ರಾಮ ಪಂಚಾಯಿತಿ ಕಚೇರಿ ಎದುರು ಖಾಲಿ ಕೊಡಗಳೊಂದಿಗೆ ಪ್ರತಿಭಟನೆ ನಡೆಸಿದರು

ಪಂಚಾಯಿತಿಗೆ ಮುತ್ತಿಗೆ, ಪಿಡಿಒ ಮೇಲೆ ಹಲ್ಲೆ

ಔರಾದ್ (ಬೀದರ್ ಜಿಲ್ಲೆ): ಮುಂಗಾರು ವಿಳಂಬವಾಗಿರುವುದರಿಂದ ತೆಲಂಗಾಣದ ಗಡಿಗೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದ್ದು, ಸ್ಥಳೀಯರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಾಲ್ಲೂಕಿನ ಘಾಮಾ ತಾಂಡಾ ನಿವಾಸಿಗಳು ಜಂಬಗಿ ಗ್ರಾಮ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ವೇತಾ ಅವರ ಜತೆ ವಾಗ್ವಾದ ನಡೆಸಿ, ಹಲ್ಲೆ ನಡೆಸಿದ್ದಾರೆ.

ತೆಲಂಗಾಣ ಗಡಿಗೆ ಹೊಂದಿಕೊಂಡಿರುವ ಘಾಮಾ ತಾಂಡಾದ ಮಹಿಳೆಯರು ಶನಿವಾರ ಖಾಲಿ ಕೊಡ ಹಿಡಿದು ಪಂಚಾಯಿತಿ ಎದುರು ಪ್ರತಿಭಟನೆ ನಡೆಸಿದರು. ಕಚೇರಿಗೆ ಬೀಗ ಹಾಕಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು. ಈ ವೇಳೆ ಸ್ಥಳಕ್ಕೆ ಬಂದ ಪಿಡಿಒ ಜತೆ ವಾಗ್ವಾದ ನಡೆಸಿ ಕೈಕೈ ಮಿಲಾಯಿಸಿದರು. ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು.

4ನೇ ಪುಟ ನೋಡಿ

ಅಕ್ಕಿ ಖರೀದಿಗೆ ಕಸರತ್ತು

ನಿರ್ಧಾರ ಅಂತಿಮಗೊಳಿಸಲು ಉನ್ನತ ಮಟ್ಟದ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್ನ ಭಾಗ್ಯ' ಯೋಜನೆಯಡಿ ವಿತರಿಸಲು ಅಗತ್ಯವಿರುವ ಅಕ್ಕಿ ಖರೀದಿಗೆ ರಾಜ್ಯ ಸರ್ಕಾರ ಕಸರತ್ತು ಮುಂದುವರಿಸಿದ್ದು, ಅನ್ಯ ರಾಜ್ಯಗಳ ಪ್ರತಿಕ್ರಿಯೆಗಾಗಿ ಕಾಯುತ್ತಿದೆ. ಅಕ್ಕಿ ಖರೀದಿ ನಿರ್ಧಾರ ಅಂತಿಮಗೊಳಿಸಲು ಸೋಮವಾರ ಉನ್ನತ ಮಟ್ಟದ ಸಭೆ ನಡೆಯಲಿದೆ.

ತೆಲಂಗಾಣದಿಂದ ಅಕ್ಕಿ ಖರೀದಿಸಲು ಸರ್ಕಾರ ಪ್ರಯತ್ನಿಸಿತ್ತು. ಆದರೆ, ಅಲ್ಲಿ ದಾಸ್ತಾನು ಇಲ್ಲ ಎಂಬ ಉತ್ತರ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರಿಂದ ಬಂದಿತ್ತು. ಛತ್ತೀಸಗಢದಲ್ಲಿ 1.5 ಲಕ್ಷ ಟನ್ ಅಕ್ಕಿ ದಾಸ್ತಾನಿದೆ. ಅದನ್ನು ಪೂರೈಸಲು ಅಲ್ಲಿನ ರಾಜ್ಯ ಸರ್ಕಾರದ ಒಪ್ಪಿಗೆಗಾಗಿ ರಾಜ್ಯದ ಅಧಿಕಾರಿಗಳು ಕಾಯುತ್ತಿದ್ದಾರೆ.

'ಛತ್ತೀಸಗಢದಿಂದ ಅಕ್ಕಿ ಖರೀದಿಸುವ ಕುರಿತು ಶನಿವಾರದಿಂದಲೂ ಮಾತುಕತೆ ನಡೆಯುತ್ತಿದೆ.

ಮುಖ್ಯಾಂಶಗಳು

- ಛತ್ತೀಸಗಢ ಸರ್ಕಾರದ ಜೊತೆ ಅಕ್ಕಿ ಖರೀದಿಗೆ ಶನಿವಾರದಿಂದ ಮಾತುಕತೆ
- ಛತ್ತೀಸಗಢ ಒಪ್ಪಿದರೂ ಪೂರ್ಣ ಪ್ರಮಾಣದ ಅಕ್ಕಿ ಅಲ್ಲಿ ಇಲ್ಲ
- ಬಾಕಿ ಅಕ್ಕಿಗೆ ಬೇರೆ ಮೂಲ ಹುಡುಕುವುದು ಅನಿವಾರ್ಯ

ತನ್ನ ಬಳಿ ದಾಸ್ತಾನು ಇರುವ ಅಕ್ಕಿಯನ್ನು ಮಾರಾಟ ಮಾಡಲು ಅಲ್ಲಿನ ಸರ್ಕಾರ ಅಧಿಕೃತವಾಗಿ ಒಪ್ಪಿಗೆ ನೀಡಿದ ಬಳಿಕವಷ್ಟೇ ಮುಂದಿನ ನಿರ್ಧಾರ ಕೈಗೊಳ್ಳಲು ಸಾಧ್ಯ. ಅಕ್ಕಿಯ ದರ, ಸಾಗಣೆ ವೆಚ್ಚ ಸೇರಿದಂತೆ ಹಲವು ವಿಷಯಗಳಲ್ಲಿ ಇನ್ನಷ್ಟೇ ತೀರ್ಮಾನವಾಗಬೇಕಿದೆ' ಎಂದು ಅಕ್ಕಿ ಖರೀದಿಗೆ ಸಂಬಂಧಿಸಿದ ಪ್ರಕ್ರಿಯೆಯಲ್ಲಿ ನಿರತರಾಗಿರುವ ಅಧಿಕಾರಿಗಳು ತಿಳಿಸಿದ್ದಾರೆ.

ಛತ್ತೀಸಗಢ ಸರ್ಕಾರ ಅಕ್ಕಿ ಮಾರಾಟಕ್ಕೆ ಒಪ್ಪಿದರೆ ಸಾಗಣೆಗೆ ಯೋಜನೆ ರೂಪಿಸಬೇಕಿದೆ. ಅಲ್ಲಿಂದ ರಾಜ್ಯಕ್ಕೆ ಅಕ್ಕಿ ಸಾಗಿಸಲು ದೀರ್ಘ ಸಮಯ ಬೇಕಾಗುತ್ತದೆ. ಅದಕ್ಕೆ ತಕ್ಕಂತೆ ಅನ್ನಭಾಗ್ಯ ಯೋಜನೆ ಅನುಷ್ಠಾನದ ವೇಳಾಪಟ್ಟಿಯನ್ನು ಹೊಂದಾಣಿಕೆ ಮಾಡಬೇಕಾಗುತ್ತದೆ. ಛತ್ತೀಸಗಢ ಸರ್ಕಾರ 1.5 ಲಕ್ಷ ಟನ್ ಅಕ್ಕಿ ಪೂರೈಸಲು ಒಪ್ಪಿಕೊಂಡರೂ ಪೂರ್ಣ ಪ್ರಮಾಣದ ಬೇಡಿಕೆ ಈಡೇರಿದಂತಾಗುವುದಿಲ್ಲ. ಉಳಿದಂತೆ ಕೊರತೆಯಾಗುವ ಅಕ್ಕಿಯನ್ನು ಯಾವ ಮೂಲದಿಂದ ಖರೀದಿಸಬೇಕು ಎಂಬ ನಿರ್ಧಾರ ಆಗಬೇಕಾಗುತ್ತದೆ. ಈ ಎಲ್ಲವೂ ಸೋಮವಾರದ ಸಭೆಯಲ್ಲಿ ಚರ್ಚೆಗೆ ಬರಲಿವೆ ಎಂದು ಮೂಲಗಳು ತಿಳಿಸಿವೆ.

ಹಲವು ರಾಜ್ಯಗಳ ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿರುವ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರು, ರಾಜ್ಯಕ್ಕೆ ಅಕ್ಕಿ ಒದಗಿಸುವಂತೆ ಮನವಿ ಮಾಡಿದ್ದಾರೆ. ಸೋಮವಾರ ಕೆಲವು ರಾಜ್ಯಗಳಿಂದ ಪ್ರತಿಕ್ರಿಯೆ ಬರಬಹುದು ಎಂಬ ನಿರೀಕ್ಷೆಯಲ್ಲಿ ಇದ್ದಾರೆ.

ಮೊದಲ ದಿನ 55 ಸಾವಿರ ಗ್ರಾಹಕರ ನೋಂದಣಿ

'ಗೃಹ ಜ್ಯೋತಿ': ಕೈಕೊಟ್ಟ ಸರ್ವರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ 'ಗ್ಯಾರಂಟಿ' ಯೋಜನೆಗಳ ಪೈಕಿ 'ಗೃಹ ಜ್ಯೋತಿ'ಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಭಾನುವಾರದಿಂದ ಆರಂಭವಾಗಿದೆ. ಮೊದಲ ದಿನವೇ ಸರ್ವರ್ ಸಮಸ್ಯೆ ಕಾಣಿಸಿಕೊಂಡಿದೆ. ಇದರಿಂದ ಅರ್ಜಿ ಸಲ್ಲಿಸಲು ಜನರು ಕಷ್ಟಪಡಬೇಕಾಯಿತು.

ಗೃಹಬಳಕೆ ಗ್ರಾಹಕರಿಗೆ ತಿಂಗಳಿಗೆ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಪೂರೈಕೆಗೆ ಇಂಧನ ಇಲಾಖೆ ಆದೇಶ ಹೊರಡಿಸಿದೆ. ನಿಗದಿತ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಭಾನುವಾರದಿಂದ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಮೊದಲ ದಿನವೇ ಹಲವು ಜಿಲ್ಲೆಗಳಲ್ಲಿ ಸರ್ವರ್ ಸಮಸ್ಯೆಯಿಂದ ಅರ್ಜಿ ಸಲ್ಲಿಕೆಗೆ ತೊಡಕಾಗಿತ್ತು.

ಬೆಳಿಗ್ಗೆ ಪೋರ್ಟಲ್ ಚಾಲನೆಯಾದ ಕೆಲವೇ ನಿಮಿಷದಲ್ಲಿ ಸ್ಥಗಿತಗೊಂಡಿತು. ಅದಾದ ಮೇಲೆ ಪೋರ್ಟಲ್ ಸರಿಪಡಿಸಲಾಯಿತು. ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ ಸ್ಥಳೀಯ ಕಚೇರಿಗಳು, ಗ್ರಾಮ ಒನ್, ಬೆಂಗಳೂರು ಒನ್ ಮೂಲಕ ಭಾನುವಾರ ಸಂಜೆ 6 ಗಂಟೆ ವೇಳೆಗೆ ಒಟ್ಟು 55 ಸಾವಿರ ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ.

ಆಧಾರ್ ಸಂಖ್ಯೆ ಹಾಗೂ ವಿದ್ಯುತ್ ಖಾತೆ ಸಂಖ್ಯೆ (ಆರ್‌ಆರ್ ನಂಬರ್) ಹಾಗೂ ಮೊಬೈಲ್ ಸಂಖ್ಯೆಯನ್ನು ಹೊಂದಿಸಿಕೊಂಡು ತಾವೇ ಅರ್ಜಿ ಸಲ್ಲಿಕೆಗೆ ಮುಂದಾಗಿದ್ದ ಗ್ರಾಹಕರು ಸಮಸ್ಯೆಗೆ ಸಿಲುಕಿದ್ದರು. 'ಗೃಹ ಜ್ಯೋತಿ' ಯೋಜನೆಯ ಪ್ರಯೋಜನ ಪಡೆಯಲು ಮೊದಲ ದಿನವೇ ಅರ್ಜಿ ಸಲ್ಲಿಸಬೇಕೆಂಬ ಹುಮ್ಮಸ್ಸಿನಲ್ಲಿದ್ದ ಅನೇಕರಿಗೆ ನಿರಾಶೆಯಾಯಿತು.

ಬೆಂಗಳೂರಿನ ರಾಜಾಜಿನಗರದ ಬೆಂಗಳೂರು ಒನ್‌ಗೆ 'ಗೃಹ ಜ್ಯೋತಿ' ಯೋಜನೆಗೆ ಅರ್ಜಿ ಸಲ್ಲಿಸಲು ಗ್ರಾಹಕರು ಭಾನುವಾರ ಬಂದಿದ್ದರು – ಪ್ರಜಾವಾಣಿ ಚಿತ್ರ

ಅರ್ಜಿ ಸಲ್ಲಿಕೆ ಎಲ್ಲಿ?

ಸೇವಾ ಸಿಂಧು ಪೋರ್ಟಲ್ – https://sevasindhugs.karnataka.gov.in (ಮೊಬೈಲ್, ಕಂಪ್ಯೂಟರ್, ಲ್ಯಾಪ್‌ಟಾಪ್) ಅಥವಾ ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರ, ಗ್ರಾಮ ಪಂಚಾಯಿತಿ, ನಾಡಕಚೇರಿ ಅಥವಾ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ ಸ್ಥಳೀಯ ಕಚೇರಿಗಳಲ್ಲಿ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

6ನೇ ಪುಟ ನೋಡಿ

ಒಳ ಪುಟಗಳು

ರಾಜಸ್ಥಾನದ 3 ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ 11

ಪಬ್‌ಗಳ ಮೇಲೆ ದಾಳಿ: 87 ಯುವತಿಯರ ರಕ್ಷಣೆ 2B

ಬ್ಯಾಡ್ಮಿಂಟನ್: ಸಾತ್ವಿಕ್–ಚಿರಾಗ್ ದಾಖಲೆ

ಜಕಾರ್ತ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿಯು ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿ ಜಯಿಸಿ ಐತಿಹಾಸಿಕ ಸಾಧನೆ ಮಾಡಿತು. ಸೂಪರ್ 1000 ಟೂರ್ನಿಯಲ್ಲಿ ಪುರುಷರ ವಿಭಾಗದ ಡಬಲ್ಸ್ ಪ್ರಶಸ್ತಿ ಜಯಿಸಿದ ಭಾರತದ ಮೊದಲ ಜೋಡಿ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿಯು 21-17, 21-18 ರಿಂದ ಮಲೇಷ್ಯಾದ ಆ್ಯರನ್ ಚಿಯಾ ಮತ್ತು ಸೊಹ ವೂಯಿ ಯೀಕಾ ವಿರುದ್ಧ ಜಯಿಸಿತು.

ಸಾತ್ವಿಕ್ ಮತ್ತು ಚಿರಾಗ್ ಜೋಡಿಯು ವಿಶ್ವ ರ‍್ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿದೆ. ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಈ ಜೋಡಿಯು ಚಿನ್ನ ಜಯಿಸಿತ್ತು. ಹೋದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಸಾಧನೆ ಮಾಡಿತ್ತು. ಕಳೆದ ಎರಡು ವರ್ಷಗಳಿಂದ ಅಮೋಘ ಲಯದಲ್ಲಿರುವ ಈ ಜೋಡಿ ಇಲ್ಲಿಯೂ ಮಿಂಚಿತು.

ವಿವರ 12

ಚಿರಾಗ್ ಶೆಟ್ಟಿ ಹಾಗೂ ಸಾತ್ವಿಕ್ ಸಾಯಿರಾಜ್ –ಎಪಿ/ಪಿಟಿಐ ಚಿತ್ರ

ಗೀತಾ ಪ್ರೆಸ್‌ಗೆ ಗಾಂಧಿ ಶಾಂತಿ ಪ್ರಶಸ್ತಿ

ನವದೆಹಲಿ (ಪಿಟಿಐ): 2021ರ ಗಾಂಧಿ ಶಾಂತಿ ಪ್ರಶಸ್ತಿಗೆ ಗೋರಖಪುರದ ಪ್ರಕಾಶನ ಸಂಸ್ಥೆ 'ಗೀತಾ ಪ್ರೆಸ್' ಅನ್ನು ಆಯ್ಕೆ ಮಾಡಲಾಗಿದೆ. ಗಾಂಧಿ ಮಾರ್ಗದ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿವರ್ತನೆ ತರುವಲ್ಲಿ ಸಂಸ್ಥೆಯ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಪ್ರಶಸ್ತಿ ಆಯ್ಕೆ ಮಂಡಳಿಯು ಗೀತಾ ಪ್ರೆಸ್ ಅನ್ನು ಪ್ರಶಸ್ತಿಗೆ ಅವಿರೋಧವಾಗಿ ಆಯ್ಕೆ ಮಾಡಿತು. ಗಾಂಧಿ ಅವರ ಆದರ್ಶಗಳಾದ ಶಾಂತಿ, ಸೌಹಾರ್ದಕ್ಕೆ ಉತ್ತೇಜನ ನೀಡುವಲ್ಲಿ ಗೀತಾ ಪ್ರೆಸ್ ವಹಿಸಿರುವ ಪಾತ್ರವನ್ನು ಮೋದಿ ಅವರು ಈ ವೇಳೆ ನೆನಪಿಸಿಕೊಂಡರು. ಸಂಸ್ಥೆಯು 100 ವರ್ಷಗಳನ್ನು ಪೂರೈಸಿದ ವರ್ಷವೇ ಗಾಂಧಿ ಶಾಂತಿ ಪ್ರಶಸ್ತಿಗೆ ಆಯ್ಕೆ ಆಗಿದೆ. ಸಮುದಾಯ ಸೇವೆಯಲ್ಲಿ ಗೀತಾ ಪ್ರೆಸ್ ಕೈಗೊಂಡಿದ್ದ ಕೆಲಸಗಳಿಗೆ ಸಿಕ್ಕ ಮನ್ನಣೆ ಇದು ಎಂದು ಮೋದಿ ಹೇಳಿದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

1923ರಲ್ಲಿ ಗೀತಾ ಪ್ರೆಸ್ ಸ್ಥಾಪಿಸಲಾಯಿತು. ಈ ವರೆಗೂ ಸಂಸ್ಥೆಯು 14 ಭಾಷೆಗಳಲ್ಲಿ 41.7 ಕೋಟಿ ಪುಸ್ತಕಗಳನ್ನು ಪ್ರಕಟಿಸಿದೆ. ಗೀತಾ ಪ್ರೆಸ್‌ನ ಸ್ಥಾಪಕ ಹನುಮಾನ್ ಪ್ರಸಾದ್ ಪೋದ್ದಾರ್ ಅವರು ರಾಮಮಂದಿರ ಚಳವಳಿಯಲ್ಲಿ 1949ರಿಂದಲೇ ಸಕ್ರಿಯವಾಗಿ ತೊಡಗಿಕೊಂಡಿದ್ದರು.

ಮಹಾತ್ಮ ಗಾಂಧಿ ಅವರ 125ನೇ ಜಯಂತಿ ಸ್ಮರಣಾರ್ಥವಾಗಿ 1995ರಲ್ಲಿ ಅಂದಿನ ಸರ್ಕಾರವು ಗಾಂಧಿ ಶಾಂತಿ ಪ್ರಶಸ್ತಿಯನ್ನು ಸ್ಥಾಪಿಸಿತ್ತು. ಈ ಪ್ರಶಸ್ತಿಯು ₹1 ಕೋಟಿ ನಗದು, ಸ್ಮರಣಿಕೆ, ಫಲಕ ಒಳಗೊಂಡಿದೆ.

11ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸೋಮವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ: ಭಾಗಶಃ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಗುಡುಗು ಸಮೇತ ಮಳೆ ಸಾಧ್ಯತೆ

ಮುನ್ಸೂಚನೆ: ಮಂಗಳವಾರ 28° 20° | ಬುಧವಾರ 29° 20° | ಗುರುವಾರ 28 20°

‘ಶಕ್ತಿ’ ಯೋಜನೆ ಶಾಶ್ವತ: ದಿನೇಶ್ ಗೂಳಿಗೌಡ

ಬೆಂಗಳೂರು: ಸ್ತ್ರೀ ಸಬಲೀಕರಣಕ್ಕೆ ಶಕ್ತಿ ತುಂಬಿದ ಉಚಿತ ಪ್ರಯಾಣ ಯೋಜನೆಯು ಮಾತೆಯರ ಪಾಲಿನ ಶಾಶ್ವತ ಯೋಜನೆ. ಈ ಯೋಜನೆ ಐದಲ್ಲ, ಹತ್ತು ವರ್ಷಗಳ ಬಳಿಕವೂ ಮುಂದುವರಿಯಲಿದೆ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಈ ಕುರಿತು ಭಾನುವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಮಹಿಳೆಯರು ಊಹಾಪೋಹಗಳಿಗೆ, ವಿರೋಧ ಪಕ್ಷಗಳ ಮಾತಿಗೆ ಕಿವಿ ಕೊಡಬಾರದು. ನೂಕು ನುಗ್ಗಲು ಮಾಡಿಕೊಳ್ಳದೇ ಸಾವಧಾನವಾಗಿ ‘ಶಕ್ತಿ’ ಯೋಜನೆಯನ್ನು ಬಳಸಿಕೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ. ಶಕ್ತಿ ಯೋಜನೆಯಿಂದ ಎಲ್ಲ ವರ್ಗದ ಮಹಿಳೆಯರಿಗೆ ಅನುಕೂಲವಾಗಿದೆ. ಸಿದ್ಧ ಉಡುಪು ಕೈಗಾರಿಕೆಗಳಿಗೆ ಹೋಗುವವರು, ಮನೆ ಕೆಲಸಕ್ಕೆ ಹೋಗುವವರು, ಮಹಿಳಾ ಪೌರಕಾರ್ಮಿಕರು, ವಿದ್ಯಾರ್ಥಿನಿಯರು, ಗ್ರಾಮೀಣ ಭಾಗದಲ್ಲಿ ಕೃಷಿ ಚಟುವಟಿಕೆಗೆ ತೆರಳುವವರು ಮಾತ್ರವಲ್ಲ ಧಾರ್ಮಿಕ ಕೇಂದ್ರಗಳಿಗೆ ತೆರಳುವವರಿಗೆ, ತವರು ಮನೆಗೆ ಹೋಗುವವರಿಗೆ ಅನುಕೂಲವಾಗಿದೆ ಎಂದು ತಿಳಿಸಿದ್ದಾರೆ.

ಮಧ್ಯಪ್ರದೇಶ, ಗುಜರಾತ್, ಅಯೋಧ್ಯಾ-ಕಾಶಿ-ಗಯಾ, ಚಾರಧಾಮ್ ಯಾತ್ರಾ ಮುಂತಾದ ಪ್ರವಾಸಗಳ ಅದ್ಭುತ ಯಶಸ್ಸಿಗೆ ಕಾರಣರಾದ ನಮ್ಮ ಎಲ್ಲ ಹೆಮ್ಮೆಯ ಯಾತ್ರಾರ್ಥಿಗಳಿಗೆ ನಮ್ಮ ಸಂಸ್ಥೆಯ ಪರವಾಗಿ ಅನಂತಾನಂತ ಧನ್ಯವಾದಗಳು. – ಕೆ. ನಾಗರಾಜ ಅಡಿಗ, ಸಂಸ್ಥಾಪಕರು,

ಯಶಸ್ವಿ 29ನೇ ವರ್ಷದಲ್ಲಿ

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ ‘ಅನುಭವಿ ಸೇವಾ ಪೂರೈಕೆದಾರ’ ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ

ಅಡಿಗಾಸ್ ಯಾತ್ರಾ®

ಸ್ಥಳ, ಸಮಯ, ಹಣಕ್ಕೆ ಅಧಿಕ ಮೌಲ್ಯ

ಬಸವನಗುಡಿ: ☎: 080-26616678 9449478944 | ಮಲ್ಲೇಶ್ವರಂ: ☎: 080-23346678 7483366378 | ಹುಬ್ಬಳ್ಳಿ: ☎: 0836-2256678 8095800401

email: care@adigasyatra.com website: www.adigasyatra.com

500ಕ್ಕೂ ಅಧಿಕ ವೈವಿಧ್ಯಮಯ ಪ್ರವಾಸಗಳು

ಕಾಶ್ಮೀರ, ಹಿಮಾಚಲ, ಸಿಕ್ಕಿಂ, ನಾರ್ತ್ ಈಸ್ಟ್, ಉತ್ತರಾಖಂಡ್, ಚಾರಧಾಮ್, ಅಮರನಾಥ, ನೇಪಾಳ, ಅಂಡಮಾನ್, ಶ್ರೀಲಂಕಾ, ಗುಜರಾತ್, ರಾಜಸ್ಥಾನ, ಒಡಿಶಾ, ಕಾಶಿ-ಗಯಾ, ಉಜ್ಜಯನಿ-ಓಂಕಾರೇಶ್ವರ

ಗ್ರಾಹಕಾನುಕೂಲಿತ 3 ದಿನಗಳಿಂದ-ಗರಿಷ್ಠ 28 ದಿನಗಳವರೆಗಿನ ಪ್ರವಾಸಗಳು

LTC/LFC Facilities Available

ಸುಲಭ ಕಂತುಗಳಲ್ಲಿ ಪ್ರವಾಸ

GROUP, CUSTOMISED & HONEYMOON TOUR PACKAGES

ಅಮರನಾಥ ಯಾತ್ರಾ

ವಿಮಾನ & ಹೆಲಿಕಾಪ್ಟರ್‌ನಲ್ಲಿ

7022259008

ಜುಲೈ 20 ರಿಂದ ಟಿಕೆಟ್ ಲಭ್ಯ

ಅಮರನಾಥ–ವೈಷ್ಣೋದೇವಿ–ಅಮೃತಸರ್ 5/7/9 ದಿನಗಳು

ಶಾರದಾ ಮಂದಿರ ದರ್ಶನ–3 ದಿನಗಳು

ಗ್ರೂಪ್ ಪ್ರವಾಸಗಳು

ಶುದ್ಧ ಸಸ್ಯಹಾರಿ ಉಟೋಪಹಾರ, A/C ಬಸ್, A/C ರೂಮನಲ್ಲಿ ವಸತಿ

ರೈಲು/ವಿಮಾನ ಪ್ರಯಾಣ, ಟೂರ್ ಮ್ಯಾನೇಜರ್‌ನೊಂದಿಗೆ ಗ್ರೂಪ್ ಪ್ರವಾಸಗಳು

ಚಾರಧಾಮ್ ಯಾತ್ರಾ

By Train 18 Days & By Flight 14 Days

ಗಂಗೋತ್ರಿ, ಯಮುನೋತ್ರಿ, ಬದರಿನಾಥ, ಕೇದಾರನಾಥ, ಹರಿದ್ವಾರ, ಋಷಿಕೇಷ,

DEP Date: July 2, 16, Aug 6, 20, 27. Sep 1, 20, 24. Oct 1, 8, 15, 22.

ಕಾಶಿ ಯಾತ್ರಾ

ಅಯೋಧ್ಯಾ–ಕಾಶಿ–ಗಯಾ

By Train 13 Days & By Flight 9 Days

ನೈಮಿಶಾರಣ್ಯ, ಅಯೋಧ್ಯಾ, ಪ್ರಯಾಗರಾಜ್, (ತ್ರಿವೇಣಿ ಸಂಗಮ), ಚಿತ್ರಕೂಟ, ವಾರಣಾಸಿ, ಸಾರನಾಥ ಗಯಾ, ಭೋಧಗಯಾ,

DEP DATES: July 5, 19. Aug 2, 16. Sep, 6, 20. Oct 4, 18. Nov 1, 15. Dec 6, 20.

ಕಾಶಿ–ಗಯಾ ಯಾತ್ರಾ

By Train 10 Days & By Flight 6 Days

ಪ್ರಯಾಗರಾಜ್, (ತ್ರಿವೇಣಿ ಸಂಗಮ), ಗಯಾ, ಭೋಧಗಯಾ, ವಾರಣಾಸಿ, ಸಾರನಾಥ

DEP DATES: July 13, 20. Aug 10, 24. Sep, 17, 14, 28. Oct 12, 26. Nov 9, 23. Dec 14.

ಹಿಮಾಲಯ

ಆಗ್ರಾ–ಜೈಪುರ್–ಮನಾಲಿ

By Train 17 Days & By Flight 14 Days

ನವದೆಹಲಿ, ಜೈಪುರ್, ಫತೇಪುರ್, ಸಿಕ್ರಿ, ಆಗ್ರಾ, ಮಥುರಾ, ಬೃಂದಾವನ, ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಅಟಲ್ ಟನಲ್, ಸೊಲಾಂಗ್ ವ್ಯಾಲಿ, ಚಂಡೀಗಢ,

DEP DATES: Aug 9, 23. Sep 13, 27. Oct 4, 18. Nov 8, 22. Dec 6, 20.

ಶಿಮ್ಲಾ–ಮನಾಲಿ–ವೈಷ್ಣೋದೇವಿ

By Train 17 Days & By Flight 14 Days

ನವದೆಹಲಿ, ಕುರುಕ್ಷೇತ್ರ, ಚಂಡೀಗಢ, ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಬೈಜನಾಥ, ಕಾಂಗ್ರಾ, ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಕಟ್ರಾ, ವೈಷ್ಣೋದೇವಿ, ವಾಘಾ ಬಾರ್ಡರ್, ಅಮೃತಸರ್

DEP DATES: Aug 7, 21, 28. Sep 4, 11, 25. Oct 2, 9, 16. Nov 13, 27. Dec 11.

ಶಕ್ತಿಪೀಠ–ಹಿಮಾಚಲ

By Train 16 Days & By Flight 13 Days

ನವದೆಹಲಿ, ಕುರುಕ್ಷೇತ್ರ, ಚಂಡೀಗಢ, ಡಾಲ್‌ಹೌಸಿ, ಖಜ್ಜಿಯರ್, ಧರ್ಮಶಾಲಾ, ನೈನಾದೇವಿ, ಮಾನಸ ದೇವಿ, ಭದ್ರಕಾಳಿ, ಕಾಂಗ್ರಾ, ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಕಟ್ರಾ, ವೈಷ್ಣೋದೇವಿ, ವಾಘಾ ಬಾರ್ಡರ್, ಅಮೃತಸರ್

DEP DATES: Aug 7, 21, 28. Sep 4, 11, 25. Oct 2, 9, 16. Nov 13, 27. Dec 11.

ಕಾಶ್ಮೀರ–ವೈಷ್ಣೋದೇವಿ

By Train 14 Days & By Flight 8 Days

ಜಮ್ಮು, ಪಹಲ್ಗಾಮ್, ಸೋನ್‌ಮಾರ್ಗ್, ಶ್ರೀನಗರ, ಗುಲ್ಮಾರ್ಗ್, ಕಟ್ರಾ, ವೈಷ್ಣೋದೇವಿ

DEP DATES: Aug 9, 23, 30. Sep 6, 13, 27. Oct 4, 11, 18. Nov 15, 29. Dec 13.

ಪೂರ್ವ & ಈಶಾನ್ಯ

ಪೂರ್ವ ಭಾರತ ಪ್ರವಾಸ

By Train 6/9/16 Days & By Flight 4/6/13 Days

ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಕೋನಾರ್ಕ್, ಹೌರಾ, ಕಲ್ಕತ್ತಾ, ಗಂಗಾ ಸಾಗರ, ಹೌರಾ, ಮಿರಿಕ್, ಡಾರ್ಜಿಲಿಂಗ್, ತ್ಸಾಂಗೋ ಸರೋವರ, ಗ್ಯಾಂಗಟಿಕ್, ನವಜಲಪುರಿ, ಚಿಲ್ಕಾ ಲೇಕ್, ದಕ್ಷಿಣೇಶ್ವರಿ,

DEP DATES: Aug 2, 16. Sep 6, 20. Oct 4, 18. Nov 1, 15, 22. Dec 6, 13.

ಅಸ್ಸಾಂ–ಅರುಣಾಚಲ–ಮೇಘಾಲಯ

By Train 18 Days & By Flight 13 Days

ಗುವಾಹತಿ, ತೇಜ್‌ಪುರ್, ನಾಗಾಂವ್, ಮಹಾ ಮೃತ್ಯುಂಜಯ ಬಾಂಡಿಲ್ಲಾ, ತವಾಂಗ್, ಸೆಲಾಪಾಸ್, ಕಾಜೀರಂಗ ನ್ಯಾಶನಲ್ ಪಾರ್ಕ, ಚಿರಾಪೂಂಜಿ, ಶಿಲ್ಲಾಂಗ್

DEP DATES: Oct 20, Nov 3, 17.

ಮಧ್ಯಪ್ರದೇಶ

ಉಜ್ಜಯಿನಿ–ಓಂಕಾರ–ಭೋಪಾಲ್

By Train 9 Days & By Flight 6 Days

ಭೋಪಾಲ್, ಸಾಂಚಿ, ಇಂದೋರ್, ಉಜ್ಜಯನಿ, ಮಹೇಶ್ವರ, ಮಾಂಡು, ಓಂಕಾರೇಶ್ವರ,

DEP DATES: Aug 15, 29, Sep 5, 19. Oct 3, 17, 31. Nov 7, 21, Dec 5, 19

ಮಧ್ಯಪ್ರದೇಶ ಪ್ರವಾಸ

By Train 15 Days & By Flight 10 Days

ಗ್ವಾಲಿಯರ್, ಭೋಪಾಲ್, ಸಾಂಚಿ, ಇಂದೋರ್, ಮಹೇಶ್ವರ, ಮಾಂಡು ಓಂಕಾರೇಶ್ವರ, ಜಬಲ್‌ಪುರ್, ಬೇಡಾಘಾಟ್, ಪಾಚ್‌ಮಾರಿ

DEP DATES: Aug 8, 22. Sep 5, 19. Oct 3, 17, 31. Nov 7, 21, Dec 5, 19

ಗುಜರಾತ್–ರಾಜಸ್ಥಾನ

ರಾಜಸ್ಥಾನ ವಿಶೇಷ ಪ್ರವಾಸ

By Train 14 Days & By Flight 10 Days

ಜೋಧಪುರ, ಜೈಸಲ್ಮೇರ್, ಸ್ಯಾಮ್‌ಸ್ಯಾಂಡ್ ಡ್ಯೂನ್ಸ್, ಬಿಕಾನೇರ್, ಕರುಣಿಮಾತಾ, ಪುಷ್ಕರ್, ಚಿತ್ತೋರಗಢ, ಉದಯಪುರ, ಜೈಪುರ

DEP DATES: Sep 7, 21. Oct 5, 12, 26. Nov 2, 16, 23. Dec 7, 14

ಗುಜರಾತ್ ವಿಶೇಷ ಪ್ರವಾಸ

By Train 12 Days & By Flight 9 Days

ಅಹಮದಾಬಾದ, ಕೆವಡಿಯಾ, ಸರ್ದಾರರ ಪ್ರತಿಮೆ, ಭಾವನಗರ, ನಿಷ್ಕಳಂಕ ಮಹಾದೇವ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್‌ದ್ವಾರಕ ನಾಗೇಶ್ವರ್ ದ್ವಾರಕ, ಮಾತೃಗಯಾ (ಸಿದ್ದಪುರ) ಮೊಧೆರಾ

DEP DATES: Aug 13, 27. Sep 10, 24. Oct 1, 15, 29. Nov 12, 19. Dec 3, 10

ಪಂಚ ದ್ವಾರಕಾ ಯಾತ್ರಾ

By Train 13 Days & By Flight 10 Days

ಅಹಮದಾಬಾದ, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್‌ದ್ವಾರಕ, ನಾಗೇಶ್ವರ್ ದ್ವಾರಕ, ಮಾತೃಗಯಾ (ಸಿದ್ದಪುರ) ಮೊಧೆರಾ, ಕಂಕ್ರೋಲಿ, ನಾಥ್‌ದ್ವಾರ, ಉದಯಪುರ, ಡಾಕೋರೆ

DEP DATES: Sep 13, 17. Oct 8, 22. Nov 5, 26. Dec 10

ಕಚ್–ಸೌರಾಷ್ಟ್ರ–ಗಿರ್

By Train 16 Days & By Flight 13 Days

ಅಹಮದಾಬಾದ, ಕೆವಡಿಯಾ, ಸರ್ದಾರರ ಪ್ರತಿಮೆ, ಭಾವನಗರ, ನಿಷ್ಕಳಂಕ ಮಹಾದೇವ್, ಸೋಮನಾಥ, ಗಿರ್ ನ್ಯಾಷನಲ್ ಪಾರ್ಕ್, ವೀರಾವಲ್, ಪೋರಬಂದರ್, ಬೆಟ್‌ದ್ವಾರಕ, ನಾಗೇಶ್ವರ್ ದ್ವಾರಕ, ನಾರಾಯಣ ಸರೋವರ, ಕೋಟೇಶ್ವರ್, ಮಾಂಡ್ವಿ ಬೀಚ್, ಭುಜ್, ರನ್ ಆಫ್ ಕಛ, ಧೋರ್ಡೊ, ದಸಾಡ, ಮೊಧೆರಾ, ಪಟಾನ್

DEP DATES: Nov 5, 12, 19, 26. Dec 10, 17

ಶಸ್ತ್ರಚಿಕಿತ್ಸಕರು, ಶುಶ್ರೂಷಕರಿಂದ ಆರೋಗ್ಯ ಜಾಗೃತಿ ಜಾಥಾ

ವೈದ್ಯಕೀಯ ಪ್ರವಾಸೋದ್ಯಮದಲ್ಲಿ ವಿಶಿಷ್ಟ ಸ್ಥಾನ: ಡಾ. ವೆಂಕಟೇಶ್

ಪ್ರಜಾವಾಣಿ ವಾರ್ತೆ

ಜಾಥಾದಲ್ಲಿ ಶಸ್ತ್ರಚಿಕಿತ್ಸಕರು ಹಾಗೂ ವೈದ್ಯಕೀಯ ಸಿಬ್ಬಂದಿ ಜಾಗೃತಿ ಮೂಡಿಸಿದರು

ಬೆಂಗಳೂರಿನ: ‘ಇಲ್ಲಿನ ಆಸ್ಪತ್ರೆಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆಯಿಂದ ಸಂಕೀರ್ಣ ಶಸ್ತ್ರಚಿಕಿತ್ಸೆಗಳೂ ಸುಲಭವಾಗುತ್ತಿವೆ. ಇದರಿಂದಾಗಿ ಬೆಂಗಳೂರು ವೈದ್ಯಕೀಯ ಪ್ರವಾಸೋದ್ಯಮದಲ್ಲಿ ಜಗತ್ತಿನಲ್ಲಿಯೇ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ’ ಎಂದು ಬೆಂಗಳೂರು ಸರ್ಜಿಕಲ್ ಸೊಸೈಟಿ (ಎಎಸ್‌ಐಸಿಸಿ) ಅಧ್ಯಕ್ಷ ಡಾ. ವೆಂಕಟೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಶ್ವ ಶಸ್ತ್ರಚಿಕಿತ್ಸಕರ ದಿನದ ಪ್ರಯುಕ್ತ ಎಎಸ್‌ಐಸಿಸಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಆರೋಗ್ಯ ಜಾಗೃತಿ ಜಾಥಾಗೆ ಚಾಲನೆ ನೀಡಿ, ಮಾತನಾಡಿದರು.

‘ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆ ಸೇರಿ ವಿವಿಧ ರೋಗಗಳಿಗೆ ಶಸ್ತ್ರಚಿಕಿತ್ಸೆ ಅತ್ಯಗತ್ಯ. ಇಲ್ಲಿನ ವೈದ್ಯರು ಶಸ್ತ್ರಚಿಕಿತ್ಸೆಗಳಲ್ಲಿ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಲ್ಲಿ ಮುಂಚೂಣಿಯಲ್ಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯಕೀಯ ಕಾಲೇಜುಗಳು ಇರುವುದರಿಂದ ಉತ್ತಮ ಗುಣಮಟ್ಟದ ವೈದ್ಯಕೀಯ ಸೇವೆ ಹಾಗೂ ತರಬೇತಿ ನೀಡಲು ಸಾಧ್ಯವಾಗುತ್ತಿದೆ. ಶಸ್ತ್ರಚಿಕಿತ್ಸೆ ಬಗ್ಗೆ ಯುವ ವೈದ್ಯರಿಗೆ ಹೆಚ್ಚಿನ ತರಬೇತಿ ಅತ್ಯಗತ್ಯ. ಈ ಬಗ್ಗೆ ನಮ್ಮ ಸೊಸೈಟಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ’ ಎಂದು ಹೇಳಿದರು.

ಎಎಸ್‌ಐಸಿಸಿ ಕಾರ್ಯದರ್ಶಿ ಡಾ. ಮನೀಶ್ ಜೋಶಿ, ‘ವೈದ್ಯರು ಶಸ್ತ್ರಚಿಕಿತ್ಸೆ ಕೊಠಡಿಗೆ ಬಂದಾಗ ಎಲ್ಲ ಸಂಕಷ್ಟಗಳನ್ನು ಮರೆತು, ವ್ಯಕ್ತಿಯ ಪ್ರಾಣ ಹಾಗೂ ಅವರ ಕುಟುಂಬದ ಸಂಕಷ್ಟ ದೂರ ಮಾಡಲು ಶ್ರಮಿಸುತ್ತಾರೆ. ರೋಗಿಯು ಗುಣಮುಖಗೊಂಡು, ಇಡೀ ಕುಟುಂಬ ನಗುಮೊಗದಿಂದ ನಮ್ಮನ್ನು ನೋಡಿದಾಗ ನಾವು ಕಲಿತ ವಿದ್ಯೆಗೆ ನ್ಯಾಯ ಒದಗಿಸಿದ ಸಂತೃಪ್ತಿ ದೊರೆಯಲಿದೆ. ಜನರು ಆರೋಗ್ಯ ಕಾಪಾಡಿಕೊಳ್ಳಲು ಪ್ರತಿನಿತ್ಯ ಒಂದು ಗಂಟೆ ವಾಕಿಂಗ್ ಮಾಡಬೇಕು’ ಎಂದರು.

ಸರ್ಜಿಕಲ್ ಸೊಸೈಟಿ ಇಂಡಿಯಾದ ಅಧ್ಯಕ್ಷ ಡಾ.ರಾಜಶೇಖರ್ ಸಿ., ‘ಪ್ರತಿನಿತ್ಯ ಶಸ್ತ್ರಚಿಕಿತ್ಸೆ ನಡೆಸುವ ವೈದ್ಯರು ಸಹ ಮಾನಸಿಕವಾಗಿ ಕುಗ್ಗಿರುತ್ತಾರೆ. ನಡಿಗೆಯ ಅಭ್ಯಾಸದಿಂದ ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲೂ ಸಾಧ್ಯ’ ಎಂದರು.

ಜಾಗೃತಿ ಜಾಥಾದಲ್ಲಿ ಶಸ್ತ್ರಚಿಕಿತ್ಸಕರು, ಶುಶ್ರೂಷಕರು ಹಾಗೂ ವೈದ್ಯಕೀಯ ಸಿಬ್ಬಂದಿ ಸೇರಿ 500ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಸೇಂಟ್ ಮಾರ್ಥಾಸ್ ಆಸ್ಪತ್ರೆಯಿಂದ ಸ್ವಾತಂತ್ರ್ಯ ಉದ್ಯಾನದ ವರೆಗೆ 5 ಕಿ.ಮೀ ಜಾಥಾ ನಡೆಸಿದರು.

ಇತಿಹಾಸ ಅಧ್ಯಯನ: ದೇಶಾಭಿಪ್ರಾಯ ಮುಖ್ಯವಾದದ್ದು–ಪ್ರೊ.ನಾಗರಾಜು

ಪ್ರಜಾವಾಣಿ ವಾರ್ತೆ

ಪ್ರೊ.ಎಸ್ ನಾಗರಾಜು ಉಪನ್ಯಾಸ ನೀಡಿದರು. ದಿ ಮಿಥಿಕ್ ಸೊಸೈಟಿಯ ಆಡಳಿತ ಮಂಡಳಿ ಸದಸ್ಯ ಪ್ರೊ. ಎಂ.ಜಿ. ಚಂದ್ರಕಾಂತ್ ಇದ್ದಾರೆ.

ಬೆಂಗಳೂರು: ‘ಭಾರತೀಯ ಮತ್ತು ಪಾಶ್ಚಾತ್ಯ ಇತಿಹಾಸ ಅಧ್ಯಯನದ ಪರಿಕಲ್ಪನೆಗಳು ಒಂದಕ್ಕೊಂದು ಪೂರಕವಾಗಿಲ್ಲ’ ಎಂದು ಇತಿಹಾಸಕಾರ ಪ್ರೊ.ಎಸ್. ನಾಗರಾಜು ಅವರು ಹೇಳಿದರು.

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರೊ. ಕೆ.ಟಿ. ಪಾಂಡುರಂಗಿ ಮತ್ತು ಆರ್. ನರಸಿಂಹಾಚಾರ್ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ‘ಭಾರತೀಯ ಮತ್ತು ಪಾಶ್ಚಾತ್ಯ ಇತಿಹಾಸ; ಅಧ್ಯಯನದಲ್ಲಿ ಭೇದ ಅಭೇದಗಳು’ ವಿಷಯದ ಬಗ್ಗೆ ಮಾತನಾಡಿದರು.

‘ಪಾಶ್ಚಾತ್ಯ ಇತಿಹಾಸಕಾರರು ಕಾಲ ಮತ್ತು ದೇಶಕ್ಕೆ ಹೆಚ್ಚಿನ ಗಮನವನ್ನು ನೀಡಿದರು. ಆದರೆ, ಭಾರತೀಯ ಇತಿಹಾಸಕಾರರು ಸಾಂಸ್ಕೃತಿಕ ಐಕ್ಯತೆಯಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಿದರು. ಈ ಕಾರಣದಿಂದ ಇತಿಹಾಸದ ರಚನೆ ಅನೇಕ ವೇಳೆ ವೈಯಕ್ತಿಕ ದೃಷ್ಟಿಕೋನದಿಂದ ಕೂಡಿರುತ್ತದೆ. ಆದರೂ ಇತಿಹಾಸದ ಅಧ್ಯಯನದಲ್ಲಿ ವೈಯಕ್ತಿಕ ಅಭಿಪ್ರಾಯಕ್ಕಿಂತ ದೇಶಾಭಿಪ್ರಾಯ ಮುಖ್ಯವಾದದ್ದು’ ಎಂದು ಹೇಳಿದರು.

‘ಋಗ್ವೇದದಲ್ಲಿ ಧೂಮಕೇತುಗಳು’ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದ ಡೀನ್ ಪ್ರೊ.ವೀರನಾರಾಯಣ ಎನ್.ಕೆ. ಪಾಂಡುರಂಗಿ, ‘ಪ್ರಾಚೀನ ಕಾಲದ ಸಾಹಿತ್ಯ ಮಾಹಿತಿಯ ಕಣಜವಾಗಿದೆ. ಅದರ ವೈಜ್ಞಾನಿಕ ಅಧ್ಯಯನದಿಂದ ಅನೇಕ ವಿಷಯಗಳು ನಮಗೆ ದೊರೆಯುತ್ತದೆ. ವೇದಗಳ ಅಧ್ಯಯನದಿಂದ ಗತಕಾಲದ ಇತಿಹಾಸದ ಅನೇಕ ಆಯಾಮಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಋಗ್ವೇದದಲ್ಲಿ ಧೂಮಕೇತುಗಳ ಕುರಿತು ಹೆಚ್ಚಿನ ವಿವರಗಳು ದೊರೆಯುತ್ತವೆ’ ಎಂದು ಅವರು ತಿಳಿಸಿದರು.

‘ಕನ್ನಡದ ಬದುಕಿಗೆ ಭಾಷಾ ಯೋಜನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗರ್ಭದಿಂದ ಗೋರಿವರೆಗೆ ಕನ್ನಡವನ್ನೇ ನಂಬಿ ಅತ್ಯುತ್ತಮ ಬದುಕು ನಡೆಸಲು ಸರ್ಕಾರವು ‘ನುಡಿಹಮ್ಮುಗೆ’ (ಭಾಷಾ ಯೋಜನೆ) ರೂಪಿಸುವ ಕೆಲಸ ಮಾಡಬೇಕು’ ಎಂದು ಬರಹಗಾರ ಹಾಗೂ ಬನವಾಸಿ ಬಳಗದ ಸದಸ್ಯ ಆನಂದ್ ಜಿ. ಆಗ್ರಹಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಭಾನುವಾರ ಹಮ್ಮಿಕೊಂಡ ‘ಕನ್ನಡದ ನಾಳೆಗಳಿಗಾಗಿ ಮಾತುಕತೆ: ಮಾಲಿಕೆ-1’ರಲ್ಲಿ ಮಾತನಾಡಿದರು. ‘ಭಾಷೆಯನ್ನು ಬೆಳೆಸಲು ಭಾಷಾ ಯೋಜನೆ ಅಗತ್ಯ. ಅದನ್ನು ಕನ್ನಡದ ಸಾಂವಿಧಾನಿಕ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಹಾಗೂ ವ್ಯಕ್ತಿಗಳು ಸೇರಿ ಮಾಡಬೇಕು’ ಎಂದರು.

‘ಅನಿಯಂತ್ರಿತ ವಲಸೆಯಿಂದಾಗಿ ಕನ್ನಡ ನುಡಿಗೆ ಸವಾಲು ಎದುರಾಗಿದೆ. ನಮ್ಮ ಪೂರ್ವಿಕರು ನಮ್ಮ ತಲೆಮಾರಿಗೆ ವರ್ಗಾಯಿಸಿದ ಕನ್ನಡ ನುಡಿಯನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವಲ್ಲಿ ವಿಫಲರಾಗುತ್ತಿದ್ದೇವೆ’ ಎಂದರು.

ಅರ್ಥಶಾಸ್ತ್ರಜ್ಞ ನವೀನ್ ಕೃಷಿ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಪದಾಧಿಕಾರಿಗಳಾದ ಎಲ್. ಹರ್ಷ, ಹಂ.ಗು.ರಾಜೇಶ್ ಹಾಗೂ ಮಾಗಡಿ ಗಿರೀಶ್ ಇದ್ದರು.

ಬಿಇಎಲ್ ನಿರ್ದೇಶಕರಾಗಿ ಸುರೇಶ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ (ಬಿಇಎಲ್) ನಿರ್ದೇಶಕರಾಗಿ (ಮಾರ್ಕೆಟಿಂಗ್) ಕೆ.ವಿ. ಸುರೇಶ್ ಕುಮಾರ್ ಅಧಿಕಾರ ವಹಿಸಿಕೊಂಡರು.

ಇಲ್ಲಿವರೆಗೆ ಬಿಇಎಲ್‌ನ ಉತ್ಪನ್ನ ಅಭಿವೃದ್ಧಿ ಮತ್ತು ನಾವೀನ್ಯ ಕೇಂದ್ರದ ಪ್ರಧಾನ ವ್ಯವಸ್ಥಾಪಕರಾಗಿದ್ದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ಸ್ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವೀಧರರಾಗಿರುವ ಸುರೇಶ್ ಕುಮಾರ್ 1989ರಿಂದ ಬಿಇಎಲ್‌ನ ಅನೇಕ ಘಟಕಗಳಲ್ಲಿ ಬಹು ತಂತ್ರಜ್ಞಾನಗಳಲ್ಲಿ ಕೆಲಸ ಮಾಡಿದ್ದರು.

ಪರಿಕಲ್ಪನೆ, ವಿನ್ಯಾಸ, ಅಭಿವೃದ್ಧಿ, ಸ್ಥಾಪನೆ, ಕಾರ್ಯಾರಂಭ, ಕ್ಷೇತ್ರ ಪ್ರಯೋಗಗಳು ಮತ್ತು ವ್ಯವಸ್ಥೆಗಳ ಇಂಡಕ್ಷನ್ ಸೇರಿದಂತೆ ಉತ್ಪನ್ನ ಅಭಿವೃದ್ಧಿಯ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಬಿಇಎಲ್‌ನಲ್ಲಿ ಬಳಸಲಾಗುವ ತಂತ್ರಜ್ಞಾನ ಮಾಡ್ಯೂಲ್‌ಗಳ ಆಂತರಿಕ ಅಭಿವೃದ್ಧಿಗಾಗಿ 500 ಎಂಜಿನಿಯರ್‌ಗಳ ತಂಡಕ್ಕೆ ಮಾರ್ಗದರ್ಶನ ನೀಡಿದ್ದರು. ಐಎಎಫ್ ಯುದ್ಧ ವಿಮಾನಕ್ಕೆ ಅತ್ಯಾಧುನಿಕ ವಾಯುಗಾಮಿ ಇಡಬ್ಲ್ಯು ಸಿಸ್ಟಂ ಅಳವಡಿಸಲು ಸುರೇಶ್ ಕಾರಣರಾಗಿದ್ದರು. ಭಾರತೀಯ ಸೇನೆ, ಅರೆಸೇನಾ ಪಡೆಗಳಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಲು, ನೌಕಾಪಡೆ ಮತ್ತು ಐಎಎಫ್‌ನ ಹೆಲಿಕಾಪ್ಟರ್, ವಿಮಾನಗಳಲ್ಲಿ ಇಡಬ್ಲ್ಯು ಸಿಸ್ಟಂಗಳನ್ನು ಅಭಿವೃದ್ಧಿಪಡಿಸಿದ್ದರು.

ಶಿವಮೂರ್ತಿ ಶರಣರ ಜಾಮೀನು ಅರ್ಜಿ ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ಚಿತ್ರದುರ್ಗ ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಶರಣರು ಜಾಮೀನು ಕೋರಿ ಸಲ್ಲಿಸಿರುವ ಅರ್ಜಿ ಸೋಮವಾರ (ಜೂ.19) ಹೈಕೋರ್ಟ್‌ನಲ್ಲಿ ವಿಚಾರಣೆಗೆ ನಿಗದಿಯಾಗಿದೆ.

ಈ ಕುರಿತಂತೆ ಶಿವಮೂರ್ತಿ ಶರಣರು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು (ಸಿ ಆರ್ ಎಲ್ ಪಿ 5031/2023) ನ್ಯಾಯಮೂರ್ತಿ ಪಿ.ಎಂ.ನವಾಜ್ ಅವರ ಏಕಸದಸ್ಯ ನ್ಯಾಯಪೀಠ ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ.

ಶಿವಮೂರ್ತಿ ಶರಣರ ಪರವಾಗಿ ಸಂದೀಪ್ ಎಸ್.ಪಾಟೀಲ ವಕಾಲತ್ತು ವಹಿಸಿದ್ದಾರೆ.

ಪ್ರಕರಣವೇನು?: ಪ್ರೌಢಶಾಲೆಯಲ್ಲಿ ಓದುತ್ತಿದ್ದ ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಶಿವಮೂರ್ತಿ ಶರಣರನ್ನು ಪೊಲೀಸರು 2022ರ ಸೆಪ್ಟೆಂಬರ್ 1ರಂದು ಬಂಧಿಸಿದ್ದು ಅಂದಿನಿಂದಲೂ ಅವರು ಚಿತ್ರದುರ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರ ವಿರುದ್ಧ ಪೋಕ್ಸೊ, ಅತ್ಯಾಚಾರ, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ವಿವಿಧ ಕಲಂಗಳಡಿಯಲ್ಲಿ ಗುರುತರ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿದೆ.

ಸೌಂಡ್ ಎಂಜಿನಿಯರಿಂಗ್ ಕೋರ್ಸ್‌ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾ ಸಾಕೇತ ಕೇಂದ್ರವು ಆರು ತಿಂಗಳ ಉಚಿತ ಸೌಂಡ್ ಎಂಜಿನಿಯರಿಂಗ್ ಕೌಶಲ ತರಬೇತಿ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ.

ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಜುಲೈನಲ್ಲಿ ಕೋರ್ಸ್ ಪ್ರಾರಂಭವಾಗಲಿದೆ. 50 ಅಭ್ಯರ್ಥಿಗಳಿಗೆ ಅವಕಾಶವಿದ್ದು, ಆರ್ಥಿಕವಾಗಿ ಹಿಂದುಳಿದವರಿಗೆ ಆದ್ಯತೆ ನೀಡಲಾಗುತ್ತದೆ. ಮಾರತ್ತಹಳ್ಳಿಯ ಇನ್ನೋವೇಟಿವ್ ಫಿಲ್ಮ್ ಅಕಾಡೆಮಿಯಲ್ಲಿ ತರಬೇತಿ ನಡೆಯಲಿದೆ.

ಕನಿಷ್ಠ ವಿದ್ಯಾರ್ಹತೆ ಎಸ್ಸೆಸ್ಸೆಲ್ಸಿ ನಿಗದಿಪಡಿಸಲಾಗಿದ್ದು, ಕೋರ್ಸ್ ಮುಗಿದ ಬಳಿಕ ಪ್ರಮಾಣ ಪತ್ರವನ್ನೂ ನೀಡಲಾಗುತ್ತದೆ. ಉದ್ಯೋಗ ಹೊಂದಲು ಅಗತ್ಯ ಬೆಂಬಲ ನೀಡಲಾಗುವುದು.

ಆಸಕ್ತರು 9483518012 ಅಥವಾ 9448079079ಕ್ಕೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

BUSINESS

Business to Business

Finance

WE ARRANGE Loans for Mortgage, Purchase, Construction, Project, Takeover of Loans from Reputed Bank. T&C Apply. Contact: 9353705002.

Business Offers

Finance

NRI'S INVESTMENT And Finance Now funds are Available on Lowinterest against properties mortgage Land/Building, Land development/ projects Contract-7204995189

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

JOB OPPORTUNITIES

General

AMAZING OPPORTUNITY, Retired, VRS, Business/ Professionals, Senior Citizens, Earn Lakhs. International Recognition. SUPERB RETIRED LIFE CAREER. 97400-90431/ 97400-76517

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 9886641282/ 8197350600

Teachers/ Professors

WANTED ENGLISH medium teachers for taking classes for nursery primary and High school, peon's. Contact personally with resume, original documents. Manjula Nadgir Memorial English School, Near Modi Hospital, Rajajinagar, Bangalore – 560 010. Ph: 23387333, 8867065525

RENTAL PROPERTIES

Accommodation Available

General

RENT ONLY NH44 8 kms from Devanahalli, 1 acre land with service road No petrol bunk. 9845885487

DH ಪ್ರಜಾವಾಣಿ JOB CORNER

BOOK JOB ADS ON WEEKDAY + SUNDAY

@803/-* Per Sqcm Single Column

@825/-* Per Sqcm Multi Column

conditions apply*

For more information Contact: 9845114560 : 9731810277 9901641752 : 9886213331 080 - 45557163 / 164

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.

ಹನುಮಗಿರಿ: ಬೆಳಗದ ಬೀದಿ ದೀಪ

ಹನುಮಗಿರಿ ಮುಖ್ಯರಸ್ತೆಯಲ್ಲಿರುವ ಬೀದಿ ದೀಪದ ಕಂಬಗಳು.

ಇಟ್ಟಮಡು ಮುಖ್ಯರಸ್ತೆಯಿಂದ ಸಪ್ತಗಿರಿ ಲೇಔಟ್ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯ ರಸ್ತೆಯಲ್ಲಿನ ಬೀದಿ ದೀಪಗಳು ಬೆಳಗುತ್ತಿಲ್ಲ. ಮಾರ್ಸ್ ಮೌಂಟ್ ಅಪಾರ್ಟ್‌ಮೆಂಟ್ ಸಮುಚ್ಚಯ ದಾಟಿದ ಬಳಿಕ ರಸ್ತೆಯ ಒಂದು ಬದಿಗೆ ಅಳವಡಿಸಲಾಗಿದ್ದ ಅಷ್ಟೂ ಸೋಲಾರ್ ಲೈಟ್‌ಗಳು ಕೆಟ್ಟು ಹೋಗಿವೆ. ದಿ ಪ್ರೊಮೊಂಟ್ ಟಾಟಾ ಹೌಸಿಂಗ್ ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರವೇಶದ್ವಾರದವರೆಗೂ ರಸ್ತೆ ಕತ್ತಲುಮಯ ಆಗಲಿದೆ. ಇದರಿಂದಾಗಿ, ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಭಯದಲ್ಲಿ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆ ವಾಹನಗಳು ವೇಗವಾಗಿ ಬರಲಿದ್ದು, ರಸ್ತೆ ತಿರುವು ಇರುವುದರಿಂದ ಅಪಘಾತವಾಗುವ ಸಾಧ್ಯತೆಯೂ ಇದೆ. ಈ ಬಗ್ಗೆ ಶಾಸಕ ಮುನಿರತ್ನ ಅವರ ಗಮನಕ್ಕೂ ತರಲಾಗಿತ್ತು. ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ಬೀದಿ ದೀಪ ಸಮಸ್ಯೆ ನಿವಾರಿಸಬೇಕು.

ನಾಗರಾಜ್, ಸಪ್ತಗಿರಿ ಲೇಔಟ್

ಹಲಸೂರು: ರಸ್ತೆಗೆ ಡಾಂಬರು ಹಾಕಿ

ಹಲಸೂರಿನ ಜೋಗುಪಾಳ್ಯದ 9ನೇ ಅಡ್ಡರಸ್ತೆಯು ಸಂಪೂರ್ಣ ಹಾಳಾಗಿದೆ. ಮಳೆ ಬಂದರೆ ರಸ್ತೆಯೆಲ್ಲ ಕೆಸರು ಗದ್ದೆಯಾಗುತ್ತದೆ. ಸದ್ಯ ಈ ರಸ್ತೆಗೆ ಅಲ್ಲಲ್ಲಿ ಡಾಂಬರಿನ ತೇಪೆ ಹಾಕುವ ಕೆಲಸ ಮಾಡಲಾಗಿದೆ. ಆದರೆ, ರಸ್ತೆಯನ್ನು ಸಂಪೂರ್ಣ ಡಾಂಬರೀಕರಣ ಮಾಡಬೇಕು. ಸಂಬಂಧಪಟ್ಟ ಬಿಬಿಎಂಪಿ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಕೃಷ್ಣೋಜಿರಾವ್, ಸ್ಥಳೀಯ ನಿವಾಸಿ

ಹಲಸೂರಿನ ಜೋಗುಪಾಳ್ಯದ ರಸ್ತೆಯ ದುಃಸ್ಥಿತಿ.

ದುರಸ್ತಿ ಕಾಣದ ರಸ್ತೆ

ವಾರ್ಡ್ ಸಂಖ್ಯೆ 85ರ ದೊಡ್ಡನೆಕ್ಕುಂದಿ ವಿನಾಯಕ ಲೇಔಟ್ 8ನೇ ಮುಖ್ಯರಸ್ತೆಯು ಗುಂಡಿಗಳಿಂದ ಕೂಡಿದ್ದು, ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ರಸ್ತೆ ದುರಸ್ತಿ ಮಾಡುವುದಕ್ಕಾಗಿ ಮೂರು ತಿಂಗಳ ಹಿಂದೆಯೇ ಬಿಬಿಎಂಪಿಯವರು ಅಗೆದು ಹೋಗಿದ್ದಾರೆ. ಈ ಸಂಬಂಧ ಸ್ಥಳೀಯ ಎಂಜಿನಿಯರ್‌ಗೆ ಪ್ರಶ್ನಿಸಿದರೆ ಅವರು ಜಲಮಂಡಳಿಯತ್ತ ಬೆರಳು ಮಾಡುತ್ತಿದ್ದಾರೆ. ಜಲಮಂಡಳಿಯವರು ಪೈಪು ಹಾಕಲು ತಡ ಮಾಡುತ್ತಿರುವುದರಿಂದ ನಾವು ಕೆಲಸ ಸ್ಥಗಿತಗೊಳಿಸಿದ್ದೇವೆ. ಒಂದು ವೇಳೆ ನಾವು ರಸ್ತೆಗೆ ಡಾಂಬರು ಹಾಕಿದರೆ ಜಲಮಂಡಳಿಯವರು ಮತ್ತೆ ರಸ್ತೆ ಅಗೆದು ಹಾಳು ಮಾಡುತ್ತಾರೆ ಎನ್ನುವುದು ಅವರ ವಾದ. ಬಿಬಿಎಂಪಿ ಮತ್ತು ಜಲಮಂಡಳಿ ಇಲಾಖೆಯ ಜಟಾಪಟಿಯಲ್ಲಿ ರಸ್ತೆ ದುರಸ್ತಿ ಯಾಗುತ್ತಿಲ್ಲ.

ಪ್ರಭಾಕರ್, ವಿನಾಯಕ ಲೇಔಟ್



ನಾಗರಬಾವಿಯ 9ನೇ ಬ್ಲಾಕ್‌ನಲ್ಲಿರುವ ರಾಜಕಾಲುವೆಯಲ್ಲಿರುವ ಹೂಳು

ರಾಜಕಾಲುವೆ ಸ್ವಚ್ಛಗೊಳಿಸಿ

ನಾಗರಬಾವಿಯ 9ನೇ ಬ್ಲಾಕ್‌ನ 2ನೇ ಹಂತದ 14ನೇ ಕ್ರಾಸ್‌ನಲ್ಲಿರುವ ರಾಜಕಾಲುವೆಯಲ್ಲಿ ಹೂಳು ತುಂಬಿಕೊಂಡು ಗಬ್ಬೆದ್ದು ನಾರುತ್ತಿದೆ. ಕಟ್ಟಡ ತ್ಯಾಜ್ಯ ಸೇರಿ ವಿವಿಧ ಬಗೆಯ ಅನುಪಯುಕ್ತ ವಸ್ತುಗಳನ್ನು ಸುರಿಯಲಾಗುತ್ತಿದೆ. ಇದರಿಂದ, ಕಾಲುವೆ ಕಟ್ಟಿಕೊಂಡು ನೀರು ಸರಾಗವಾಗಿ ಹರಿಯುತ್ತಿಲ್ಲ. ದುರ್ವಾಸನೆ ಬೀರುತ್ತಿದ್ದು, ಸಾಂಕ್ರಾಮಿಕ ರೋಗ ಹರಡುವ ಭೀತಿ ಶುರುವಾಗಿದೆ. ರಾಜಕಾಲುವೆಗೆ ದೊಡ್ಡದಾಗಿ ತಡೆಗೋಡೆ ನಿರ್ಮಿಸಬೇಕು.

ಕೆ.ಎಂ. ಮುಕುಂದ, ಸ್ಥಳೀಯ ನಿವಾಸಿ

ಕಸ ತೆರವುಗೊಳಿಸಿ

ಎಇಸಿಎಸ್ ಬಡಾವಣೆಯ 1ನೇ ಮುಖ್ಯರಸ್ತೆಯಲ್ಲಿ ಹಾಕಿರುವ ಕಸವನ್ನು ತೆರವು-ಗೊಳಿಸಬೇಕು. ತೆಂಗಿನ ಗರಿ, ಮರದ ಕೊಂಬೆಗಳು ಸೇರಿ ಮನೆಯ ತ್ಯಾಜ್ಯವನ್ನೆಲ್ಲ ರಸ್ತೆಯಲ್ಲಿ ಹಾಕಿರುವುದರಿಂದ ಗಬ್ಬೆದ್ದು ನಾರುತ್ತಿದೆ. ಇದರಿಂದ ಸೊಳ್ಳೆಗಳು ಉತ್ಪತ್ತಿಯಾಗುತ್ತಿದ್ದು, ಸಾಂಕ್ರಾಮಿಕ ರೋಗ ಹರಡುವ ಭೀತಿ ಶುರುವಾಗಿದೆ. ಬಿಬಿಎಂಪಿ ಕಸ ಎತ್ತುವ ಲಾರಿಯ ಸಿಬ್ಬಂದಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ. ಕೂಡಲೇ ಕಸವನ್ನು ತೆರವುಗೊಳಿಸಿ ಬಡಾವಣೆಯ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ವೆಂಕಟೇಶ್ ಶೆಟ್ಟಿ, ಸ್ಥಳೀಯ ನಿವಾಸಿ

ಎಇಸಿಎಸ್ ಲೇಔಟ್ ಒಂದನೇ ಮುಖ್ಯರಸ್ತೆಯಲ್ಲಿ ಹಾಕಿರುವ ಕಸ

ಹುರಳಿಚಿಕ್ಕನಹಳ್ಳಿ: ತ್ಯಾಜ್ಯ ವಿಲೇವಾರಿ ಘಟಕದ ಕಾಮಗಾರಿ ವಿಳಂಬ

ಹೆಸರುಘಟ್ಟ: ಉಸಿರುಗಟ್ಟಿಸುತ್ತಿದೆ ಕಸ

• ಬೈಲಮೂರ್ತಿ ಜಿ.

ಹೆಸರುಘಟ್ಟ ಮುಖ್ಯ ರಸ್ತೆಯ ಸುಭಾಷ್ ನಗರದಲ್ಲಿ ತ್ಯಾಜ್ಯ

ಪ್ರಜಾವಾಣಿ ವಿಶೇಷ

ಹೆಸರಘಟ್ಟ: ಹುರಳಿಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಸದ ಸಮಸ್ಯೆ ಪರಿಹಾರಕ್ಕಾಗಿ ಬಜ್ಜಪ್ಪ ಲೇಔಟ್‌ನಲ್ಲಿ ನಿರ್ಮಾಣವಾಗುತ್ತಿರುವ ಘನ ತ್ಯಾಜ್ಯ ವಿಲೇವಾರಿ ಘಟಕ ಕಾಮಗಾರಿ ವರ್ಷದಿಂದ ಕುಂಟುತ್ತಾ ಸಾಗುತ್ತಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತ್ಯಾಜ್ಯದ ಸಮಸ್ಯೆ ನಾಗರಿಕರ ಉಸಿರು-ಗಟ್ಟಿಸುತ್ತಿದೆ.

ಹೆಸರುಘಟ್ಟಕ್ಕೆ ಹೊಂದಿಕೊಂಡಿರುವ ಹುರುಳಿಚಿಕ್ಕನಹಳ್ಳಿ ಗ್ರಾಮ ಮತ್ತು ಸುತ್ತಮುತ್ತ ಪ್ರದೇಶಗಳು ಈಗ ಹಳ್ಳಿಯಾಗಿ ಉಳಿದಿಲ್ಲ. ರಿಯಲ್ ಎಸ್ಟೇಟ್ ಉದ್ಯಮ ಜೋರಾಗಿ ನಡೆಯುತ್ತಿರುವು ದರಿಂದ ಹೊಸ ಬಡಾವಣೆಗಳು ತಲೆ ಎತ್ತಿವೆ. ನಗರದ ಜನರನ್ನು ತನ್ನತ್ತ ಸೆಳೆಯುತ್ತಿದೆ. ಈ ಪ್ರದೇಶದಲ್ಲಿ ಜನಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಕಸದ ಸಮಸ್ಯೆಯೂ ಬೆಟ್ಟದಂತಾಗಿದೆ.

ಕಸದ ಸಮಸ್ಯೆ ನಿವಾರಣೆಗೆಂದು ವರ್ಷದ ಹಿಂದೆ ಗ್ರಾಮ ಪಂಚಾಯಿತಿ ವತಿಯಿಂದ ತರಬನಹಳ್ಳಿ ಸರ್ವೆ ನಂ. 26ರ ಬಜ್ಜಪ್ಪ ಲೇಔಟ್‌ನಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ಕಾಮಗಾರಿ ಆರಂಭವಾಯಿತು. ಆದರೆ, ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ.

ಹೆಸರುಘಟ್ಟ ಮುಖ್ಯ ರಸ್ತೆಯ ಗಿರಿಯಪ್ಪ ಕಲ್ಯಾಣ ಮಂಟಪ, ಸುಭಾಷ್ ನಗರ ಸೇರಿದಂತೆ ಸುತ್ತಮುತ್ತ ಪ್ರದೇಶಗಳ ರಸ್ತೆಯ ಆಸುಪಾಸಿನಲ್ಲಿ ಕಸದ ರಾಶಿಯೇ ಬಿದ್ದಿದ್ದು, ದುರ್ನಾತ ಬೀರುತ್ತಿದೆ. ವಾಹನ ಸವಾರರು, ಪಾದಚಾರಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಬಂದೊದಗಿದೆ.

‘ಕೆಲವೊಮ್ಮೆ ಕಸದ ರಾಶಿಯಲ್ಲಿ ಸತ್ತ ನಾಯಿಗಳು ಮತ್ತು ಹಂದಿಗಳನ್ನೂ ತಂದು ಹಾಕಲಾಗುತ್ತದೆ. ದುರ್ವಾಸನೆಯಿಂದ ರಸ್ತೆಯಲ್ಲಿ ಓಡಾಡಲು ಕಷ್ಟವಾಗುತ್ತದೆ. ಅಧಿಕಾರಿಗಳು ಗಮನಹರಿಸುತ್ತಿಲ್ಲ. ಮಳೆಗಾಲ ಆರಂಭವಾಗಿದೆ. ಕಸ ಹೀಗೇ ಇದ್ದರೆ ಕೊಳೆಯಲಾರಂಭಿಸುತ್ತದೆ. ಜನರಿಗೆ ಸಾಂಕ್ರಾಮಿಕ ರೋಗದ ಭೀತಿ ಎದುರಾಗಿದೆ. ಅಧಿಕಾರಿಗಳು ಜಾಣ ಮೌನ ಅನುಸರಿಸುತ್ತಿರುವುದು ಸರಿಯಲ್ಲ’ ಎಂದು ಸ್ಥಳೀಯರು ದೂರುತ್ತಾರೆ.

‘ಜನರು ಎಲ್ಲೆಂದರಲ್ಲಿ ಕಸ ಹಾಕುತ್ತಿದ್ದಾರೆ. ಈ ಸಮಸ್ಯೆ ನಿವಾರಣೆಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತರಬನಹಳ್ಳಿ ಗ್ರಾಮದ ಬಜ್ಜಪ್ಪ ಲೇಔಟ್‌ನಲ್ಲಿ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ಮಾಡಲಾಗುತ್ತಿದೆ’ ಎಂದು ಹುರಳಿಚಿಕ್ಕನಹಳ್ಳಿ ಗ್ರಾ.ಪಂ. ಪಿಡಿಒ ರವೀನ ತಿಳಿಸಿದರು.

ಗ್ರಾ.ಪಂ ವ್ಯಾಪ್ತಿಯಲ್ಲಿ ಜನಸಂಖ್ಯೆ ಹೆಚ್ಚಾಗಿದ್ದು, ಕಸದ ಸಮಸ್ಯೆಯೂ ಹೆಚ್ಚಾಗಿದೆ. ತ್ಯಾಜ್ಯ ಘಟಕ ಕಾಮಗಾರಿ ವಿಳಂಬವಾಗಿದೆ. ಕಾಮಗಾರಿ ಬೇಗ ಮುಗಿಸುವುದಕ್ಕೆ ಕ್ರಮ ಕೈಗೊಳ್ಳಲಾಗುವುದು

ರಘು, ಹುರಳಿಚಿಕ್ಕನಹಳ್ಳಿ ಗ್ರಾ.ಪಂ. ಅಧ್ಯಕ್ಷ

ಪಂಚಾಯಿತಿ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ದಿನೇ ದಿನೇ ಹೆಚ್ಚುತ್ತಿದೆ. ಅದರ ನಿವಾರಣೆಗೆ ತ್ಯಾಜ್ಯ ವಿಲೇವಾರಿ ಘಟಕವನ್ನು ನಿರ್ಮಾಣ ಮಾಡಲಾಗುತ್ತಿದೆ

ಹೇಮಚಂದ್ರ, ಸದಸ್ಯ, ಹುರಳಿಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ

ಗ್ರಾಮವು ನಗರ ಪ್ರದೇಶಕ್ಕೆ ಹೊಂದಿಕೊಂಡಿದ್ದು, ಕಸದ ಸಮಸ್ಯೆಯಿಂದ ಜನರಿಗೆ ರೋಗ ರುಜಿನಗಳು ಉಂಟಾಗುತ್ತಿವೆ. ಆದಷ್ಟು ಬೇಗ ಕಸದ ಸಮಸ್ಯೆಗೆ ಮುಕ್ತಿ ನೀಡಬೇಕು

ಕಾಂತರಾಜು, ಸ್ಥಳೀಯ ನಿವಾಸಿ

ಮೂವರಿಗೆ ಗುಲಬರ್ಗಾ ವಿ.ವಿ. ಗೌರವ ಡಾಕ್ಟರೇಟ್

ಕಲಬುರಗಿ: ಗುಲಬರ್ಗಾ ವಿಶ್ವವಿದ್ಯಾಲಯವು ಕಲಬುರಗಿಯ ಶಿಲ್ಪ ಕಲಾವಿದ ಮಾನಯ್ಯ ಬಡಿಗೇರ, ಬೀದರ್ ಜಿಲ್ಲೆ ಬಸವ ಕಲ್ಯಾಣದ ಸಾಹಿತಿ ತಾತ್ಯಾರಾವ್ ಕಾಂಬಳೆ ಹಾಗೂ ಬೆಂಗಳೂರು ಮೂಲದ ವಿಜ್ಞಾನಿ ಶ್ರೀನಾಥ ಡಿ.ಎನ್. ಅವರಿಗೆ ಗೌರವ ಡಾಕ್ಟರೇಟ್ ಘೋಷಿಸಿದೆ.

‘ಇದೇ 19ರಂದು ವಿ.ವಿ. ಆವರಣದಲ್ಲಿ ನಡೆಯಲಿರುವ 41ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿ.ವಿ. ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗಣ್ಯರಿಗೆ ಡಾಕ್ಟರೇಟ್ ಪದವಿಗಳನ್ನು ಪ್ರದಾನ ಮಾಡುವರು. ಒಟ್ಟಾರೆ 14 ಗಣ್ಯರ ಹೆಸರುಗಳನ್ನು ಗೌರವ ಡಾಕ್ಟರೇಟ್ ಪದವಿಗೆ ಸಿಂಡಿಕೇಟ್ ಸಭೆ ಶಿಫಾರಸು ಮಾಡಿತ್ತು. ಅದರಲ್ಲಿ ಮೂವರಿಗೆ ನೀಡಲು ರಾಜ್ಯಪಾಲರು ಅನುಮೋದನೆ ನೀಡಿದ್ದಾರೆ’ ಎಂದು ವಿಶ್ವ-ವಿದ್ಯಾಲಯದ ಕುಲಪತಿ ಪ್ರೊ. ದಯಾನಂದ ಅಗಸರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ತಾತ್ಯಾರಾವ್ ಕಾಂಬಳೆ

ಶ್ರೀನಾಥ ಡಿ.ಎನ್.



ಮಾನಯ್ಯ ಬಡಿಗೇರ

ಉಡುಪಿ ಮುಚ್ಲಕೋಡಿನ ದೇವಸ್ಥಾನದ ಬಾವಿಗೆ ಬಿದ್ದಿದ್ದ ಬೆಕ್ಕಿನ ಮರಿಯನ್ನು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಬಾವಿಗಿಳಿದು ರಕ್ಷಿಸಿದರು

ಬಾವಿಗೆ ಬಿದ್ದ ಬೆಕ್ಕಿನ ಮರಿ ರಕ್ಷಿಸಿದ ಪೇಜಾವರ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಉಡುಪಿ: ಮುಚ್ಲಕೋಡಿನ ದೇವಸ್ಥಾನದ ಬಾವಿಗೆ ಬಿದ್ದಿದ್ದ ಬೆಕ್ಕಿನ ಮರಿಯನ್ನು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸ್ವತಃ ಬಾವಿಗಿಳಿದು ರಕ್ಷಣೆ ಮಾಡಿದ್ದಾರೆ.

ಭಾನುವಾರ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಬೆಕ್ಕಿನ ಮರಿ 40 ಅಡಿ ಆಳದ ಬಾವಿಗೆ ಬಿದ್ದಿರುವುದನ್ನು ಕಂಡ ಸ್ವಾಮೀಜಿ ಹಗ್ಗಕ್ಕೆ ಬಕೆಟ್ ಕಟ್ಟಿ ಮೇಲೆತ್ತಲು ಪ್ರಯತ್ನಿಸಿದರು. ಆದರೆ, ಗಾಬರಿಗೊಂಡಿದ್ದ ಬೆಕ್ಕಿನ ಮರಿ ಬಕೆಟ್‌ನಲ್ಲಿ ಬರಲಿಲ್ಲ. ಕೊನೆಗೆ ಸ್ವಾಮೀಜಿಯೇ ಬಾವಿಗಿಳಿದು ಬೆಕ್ಕಿನ ಮರಿಯನ್ನು ಮೇಲೆತ್ತಿದರು.

ನಗರದ ಪ್ರಮುಖ ರಸ್ತೆಗಳಲ್ಲಿ ವ್ಹೀಲೆ: 26 ದ್ವಿಚಕ್ರ ವಾಹನ ಜಪ್ತಿ

ಆರ್‌ಸಿ, ಡಿಎಲ್ ರದ್ದು; ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ವಿಭಾಗದ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ವ್ಹೀಲೆ ನಡೆಸುತ್ತಿದ್ದ ಯುವಕರ ಬೈಕ್‌ಗಳನ್ನು ಪೊಲೀಸ್ ಜಪ್ತಿ ಮಾಡಿಕೊಂಡಿದ್ದಾರೆ.

ವಿವಿಧ ಠಾಣಾ ವ್ಯಾಪ್ತಿಯಲ್ಲಿ ಒಟ್ಟು 26 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 26 ಆರೋಪಿಗಳ ಪೈಕಿ 21 ಮಂದಿ 18 ವರ್ಷಕ್ಕಿಂತ ಮೇಲ್ಪಟ್ಟಿದ್ದು, ಉಳಿದ ಐವರು ಬಾಲಕರು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಕೆಲವು ತಿಂಗಳಿಂದ ನಿರಂತರವಾಗಿ ವ್ಹೀಲೆ ನಡೆಸುವವರ ವಿರುದ್ಧ ಕಾರ್ಯಾಚರಣೆ ನಡೆಸಿ, 6 ಆಕ್ಟಿವ್ ಹೊಂಡ, 1 ಸುಜುಕಿ ಆಕ್ಸೆಸ್, 15 ಡಿಯೊ, 2 ಯಮಹಾ ರೇ ಸ್ಕೂಟರ್, 1 ಬಜಾಜ್ ಪ್ಲಾಟಿನಂ, 1 ಜುಪಿಟರ್ ಬೈಕ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ದಕ್ಷಿಣ ವಿಭಾಗದ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಕೆಲವು ರಸ್ತೆಗಳು ಉತ್ತಮವಾಗಿವೆ. ಆ ರಸ್ತೆಗಳಲ್ಲಿ ಯುವಕರು ತಮ್ಮ ಬೈಕ್‌ಗಳಲ್ಲಿ ವ್ಹೀಲೆ ನಡೆಸುತ್ತಿದ್ದರು. ಚಾಮರಾಜಪೇಟೆ 5ನೇ ಮುಖ್ಯರಸ್ತೆ, ಹನುಮಂತನಗರ 7ನೇ ಕ್ರಾಸ್, ಜೆ.ಪಿ. ನಗರದ ಅಂಡರ್‌ಪಾಸ್, ಇಲಿಯಾಸ್ ನಗರ, ಕೆ.ಎಸ್ ಲೇಔಟ್‌ನ ರಿಂಗ್ ರಸ್ತೆ, ಕೆ.ಎಸ್. ಲೇಔಟ್ ಜಂಕ್ಷನ್, ಅಂಜನಾಪುರ, ಚಿಕ್ಕೇಗೌಡನ ಪಾಳ್ಯ, ಸೋಮ್‌ಪುರ, 80 ಅಡಿ ರಸ್ತೆಯ ಗುಬ್ಬಲಾಳ, ಅಂಜನಾಪುರ, ಜಂಬೂಸವಾರಿಯ ದಿಣ್ಣೆಮುಖ್ಯರಸ್ತೆಯ, ಆರ್‌ಬಿಐ ಲೇಔಟ್‌ಗಳಲ್ಲಿ ಯುವಕರು ವ್ಹೀಲೆ ನಡೆಸುತ್ತಿದ್ದರು. ಆ ದೃಶ್ಯವನ್ನು ಸಾರ್ವಜನಿಕರೇ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು. ಕೆಲವು ಸ್ಥಳಗಳಲ್ಲಿ ಬ್ಯಾರಿಕೇಡ್ ಹಾಕಿ ಮಫ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು’ ಎಂದು ತಿಳಿಸಿದ್ದಾರೆ.

‘ಎಲ್ಲ ಆರೋಪಿಗಳ ವಿರುದ್ಧ 41(ಎ) ಸಿಆರ್‌ಪಿಸಿ ಪ್ರಕಾರ ನೋಟಿಸ್ ನೀಡಿ ಮುಚ್ಚಳಿಕೆ ಪತ್ರವನ್ನು ಪಡೆದು ಅಂತಿಮ ವರದಿ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಎರಡನೇ ಬಾರಿ ವ್ಹೀಲೆ ಪ್ರಕರಣಗಳಲ್ಲಿ ಇವರು ಭಾಗಿಯಾದರೆ, ಹೆಚ್ಚುವರಿಯಾಗಿ ಸಿಆರ್‌ಪಿಸಿ ಕಲಂ 107ರ ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ಆರೋಪಿಗಳಿಗೆ ನ್ಯಾಯಾಲಯವು ದಂಡ ವಿಧಿಸಿದರೆ ಅಂತಹ ವಾಹನಗಳ ಆರ್.ಸಿ ಹಾಗೂ ಚಾಲಕನ ಚಾಲನಾ ಪರವಾನಗಿ (ಡಿಎಲ್) ರದ್ದು ಪಡಿಸಲಾಗುವುದು’ ಎಂದು ಪೊಲೀಸರು ಹೇಳಿದರು.

ಪಬ್‌ಗಳ ಮೇಲೆ ದಾಳಿ: ಮಾಲೀಕರ ವಿರುದ್ಧ ಎಫ್‌ಐಆರ್

87 ಯುವತಿಯರ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕ ನಗರ, ಹಲಸೂರು ಹಾಗೂ ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘಿಸಿ ಪಬ್ ನಡೆಸುತ್ತಿದ್ದ ಸ್ಥಳಗಳ ಮೇಲೆ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಪೊಲೀಸರು ದಾಳಿ ನಡೆಸಿ 9 ಆರೋಪಿಗಳನ್ನು ವಶಕ್ಕೆ ಪಡೆದು, ಸ್ಥಳದಲ್ಲಿದ್ದ 87 ಯುವತಿಯರನ್ನು ರಕ್ಷಿಸಿದ್ದಾರೆ.

‘ರಿಚ್ಮಂಡ್ ರಸ್ತೆಯ ನಂ.93ರ ದಿ ಪ್ರೈಡ್ ಹೋಟೆಲ್‌ನ 1ನೇ ಮಹಡಿಯಲ್ಲಿ ಫ್ಯೂಯಲ್ ರೆಸ್ಟೋ ಬಾರ್‌ನಲ್ಲಿ ಹೊರರಾಜ್ಯದಿಂದ ಹುಡುಗಿಯರನ್ನು ಕರೆಸಿ ಬಾರ್‌ಗೆ ಬರುವ ಗ್ರಾಹಕರಿಗೆ ಲೈಂಗಿಕವಾಗಿ ಪ್ರಚೋದನೆ ಬರುವಂತೆ ಉಡುಪು ತೊಡಿಸಲಾಗಿತ್ತು. ದಾಳಿ ನಡೆಸಿದ ವೇಳೆ ಅಸಭ್ಯ ಚಟುವಟಿಕೆಗಳು ನಡೆಯುತ್ತಿದ್ದವು. ಆ ಬಾರ್‌ನಲ್ಲಿ ಮೂವರು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು, 19 ಯುವತಿಯರನ್ನು ರಕ್ಷಿಸಲಾಗಿದೆ. ದಾಳಿ ವೇಳೆ 54 ಗ್ರಾಹಕರಿದ್ದರು’ ಎಂದು ಸಿಸಿಬಿ ಪೊಲೀಸರು ತಿಳಿಸಿದರು. ಆರೋಪಿಗಳ ವಿರುದ್ಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೊಮ್ಮಲೂರು ಅಮರಜ್ಯೋತಿ ಎಚ್‌ಬಿಸಿಎಸ್ ಲೇಔಟ್‌ನ ಕ್ಲಬ್–7 ಪಬ್‌ನಲ್ಲಿ ಕಾನೂನು ಉಲ್ಲಂಘಿಸಿರುವುದು ಕಂಡುಬಂದಿದೆ. ಪಬ್‌ನ ಮಾಲೀಕರು ಹಾಗೂ ವ್ಯವಸ್ಥಾಪಕರು ಹುಡುಗ ಹಾಗೂ ಹುಡುಗಿಯರನ್ನು ಕರೆಸಿಕೊಂಡು ರಾತ್ರಿ ವೇಳೆ ಸಂಗೀತ ಕಾರ್ಯಕ್ರಮ ನಡೆಸುತ್ತಿದ್ದರು. ಅಬ್ಬರದ ಸಂಗೀತಕ್ಕೆ ಗ್ರಾಹಕರು, ಹುಡುಗಿಯರು ನೃತ್ಯ ಮಾಡುತ್ತಿದ್ದರು. ಅವಧಿ ಮೀರಿ ಪಬ್ ನಡೆಸುತ್ತಿದ್ದ ಮೂವರನ್ನು ವಶಕ್ಕೆ ಪಡೆಯಲಾಗಿದೆ. ಉಳಿದ ಮೂವರು ತಲೆಮರೆಸಿಕೊಂಡಿದ್ದಾರೆ. 55 ಯುವತಿಯರನ್ನು ರಕ್ಷಿಸಿ, 118 ಯುವಕರನ್ನು ಹಲಸೂರು ಗೇಟ್ ಪೊಲೀಸ್ ಠಾಣೆಗೆ ಹಾಜರು ಪಡಿಸಲಾಯಿತು ಎಂದು ಮೂಲಗಳು ಹೇಳಿವೆ.

ಹೆಣ್ಣೂರು ಮುಖ್ಯರಸ್ತೆಯ ಕೊತ್ತನೂರು ಪಟೇಲ್ ರಾಮಯ್ಯ ಗಾರ್ಡನ್‌ನ ಶಿಗನ್ ಬಾರ್ ಅಂಡ್ ಕಿಚನ್ ಮೇಲೂ ಪೊಲೀಸರು ದಾಳಿ ನಡೆಸಿದ್ದು, ಮೂವರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಉಳಿದ ಇಬ್ಬರು ತಲೆಮರೆಸಿಕೊಂಡಿದ್ದಾರೆ. ದಾಳಿ ವೇಳೆ ಪಬ್‌ನಲ್ಲಿ ಸೂಡನ್ ದೇಶದ ಆರು ಮಂದಿ, ಕಾಂಗೋದ ಒಬ್ಬ ಹಾಗೂ ಯಮನ್ ರಾಷ್ಟ್ರದ ಒಬ್ಬ ಹುಡುಗ ಪತ್ತೆಯಾಗಿದ್ದಾರೆ. ಪಬ್‌ನಲ್ಲಿದ್ದ ವಿದೇಶಿ ಮಹಿಳೆಯರನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆ ಬಂಧನ; ₹ 80 ಸಾವಿರ ವಶ

ಕೋಲಾರ: ನಗರದಲ್ಲಿ ಮಹಿಳೆಯನ್ನು ಬಂಧಿಸಿರುವ ಗಲ್‌ಪೇಟೆ ಪೊಲೀಸರು ಆಕೆ ಕಳುವು ಮಾಡಿದ್ದ ₹ 80 ಸಾವಿರವನ್ನು ವಶಕ್ಕೆ ಪಡೆದಿದ್ದಾರೆ. ನೂರ್ ನಗರದ ನಿವಾಸಿ ಸುಮಯ್ಯ (25) ಬಂಧಿತ ಮಹಿಳೆ.

‘ಮಹಿಳೆಯು ₹ 1.38 ಲಕ್ಷ ಕಳುವು ಮಾಡಿದ್ದಳು. ನಗರ ಸಿದ್ದಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಕಳುವು ಪ್ರಕರಣದಲ್ಲಿ ಭಾಗಿಯಾಗಿದ್ದಾಳೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಗಲ್‌ಪೇಟೆ ಸರ್ಕಲ್ ಇನ್‌ಸ್ಪೆಕ್ಟರ್ ವೆಂಕಟರಮಣಪ್ಪ, ಅಪರಾಧ ಪತ್ತೆದಳದ ಸಿಬ್ಬಂದಿ ಸೇರಿ ಪಾಲ್ಗೊಂಡಿದ್ದರು.

ನಂದಿನಿ ಹಾಲು: ಕೇರಳ ವಿರೋಧ

ತಿರುವನಂತಪುರ (ಪಿಟಿಐ): ರಾಜ್ಯದಲ್ಲಿ ಕರ್ನಾಟಕದ ನಂದಿನಿ ಬ್ರಾಂಡ್ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟವನ್ನು ಬಲವಾಗಿ ವಿರೋಧಿಸುವುದಾಗಿ ಎಲ್‌ಡಿಎಫ್ ಸರ್ಕಾರ ಭಾನುವಾರ ಹೇಳಿದೆ.

‘ಈ ಸಮಸ್ಯೆ ಪರಿಹರಿಸುವಂತೆ ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿಗೆ (ಎನ್‌ಡಿಡಿಬಿ) ದೂರು ನೀಡಲಾಗಿದೆ. ಈ ಬಗ್ಗೆ ಎನ್‌ಡಿಡಿಬಿ ಚರ್ಚೆ ಬಳಿಕ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಪಶುಸಂಗೋಪನೆ ಸಚಿವೆ ಜೆ.ಚಿಂಚುರಾಣಿ ಹೇಳಿದ್ದಾರೆ.

ಕೇಂದ್ರ ಮಧ್ಯಪ್ರವೇಶದ ನಂತರ ನಂದಿನಿ ತನ್ನ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವ ನಿರ್ಧಾರವನ್ನು ಹಿಂತೆಗೆದುಕೊಳ್ಳುತ್ತದೆ ಎಂಬ ನಿರೀಕ್ಷೆ ಇದೆ ಎಂದರು.

ನಂದಿಗಿರಿಧಾಮ ಹಾದಿಯಲ್ಲಿ ಸಂಚಾರ ದಟ್ಟಣೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಪ್ರಸಿದ್ಧ ನಂದಿ ಗಿರಿಧಾಮವು ವಾರಾಂತ್ಯದ ದಿನಗಳಲ್ಲಿ ಪ್ರವಾಸಿಗರಿಂದ ತುಂಬಿ ತುಳುಕುತ್ತದೆ. ಭಾನುವಾರವೂ ಅಪಾರ ಸಂಖ್ಯೆಯ ಪ್ರವಾಸಿಗರು ಗಿರಿಧಾಮಕ್ಕೆ ಭೇಟಿ ನೀಡಿದ್ದರು. ಇದರಿಂದ ಗಿರಿಧಾಮಕ್ಕೆ ಸಾಗುವ ದಾರಿಯಲ್ಲಿ ಸಂಚಾರ ದಟ್ಟಣೆ ಎದುರಾಯಿತು. ಕಿಲೋಮೀಟರ್ ಗಟ್ಟಲೆ ಕಾರುಗಳು ಸಾಲುಗಟ್ಟಿ ನಿಂತವು.

ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಂದಿಯ ಪ್ರವೇಶ ದ್ವಾರದಲ್ಲಿ ಸಂಚಾರ ದಟ್ಟಣೆ ತೀವ್ರವಾಗಿತ್ತು. ಕಾರುಗಳಲ್ಲಿದ್ದ ಪ್ರವಾಸಿಗರು ವಾಪಸ್ ತೆರಳಲೂ ಆಗದೆ ಮುಂದೆ ಸಾಗಲೂ ಆಗದೆ ಪರದಾಡಿದರು.



ನಂದಿಗಿರಿಧಾಮದ ರಸ್ತೆಯಲ್ಲಿ ಭಾನುವಾರ ಸಾಲುಗಟ್ಟಿದ್ದ ಕಾರುಗಳು

ಗಿರಿಧಾಮದ ವಾಹನ ನಿಲುಗಡೆ ಸ್ಥಳದಲ್ಲಿ 300 ಕಾರುಗಳ ನಿಲುಗಡೆಗೆ ಮಾತ್ರ ಜಿಲ್ಲಾಡಳಿತ ಅವಕಾಶ ನೀಡುತ್ತಿದೆ. ಸಾಮಾನ್ಯ ದಿನಗಳಲ್ಲಿ ಸಂಚಾರ ದಟ್ಟಣೆಯ ಸಮಸ್ಯೆ ಎದುರಾಗುವುದಿಲ್ಲ. ಆದರೆ, ಶನಿವಾರ ಮತ್ತು ಭಾನುವಾರ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಕಾರು ನಿಲುಗಡೆ ಸ್ಥಳ ಭರ್ತಿಯಾದ ನಂತರ ಬೇರೆ ಕಾರುಗಳ ನಿಲುಗಡೆಗೆ ಅವಕಾಶವಿಲ್ಲ. ಗಿರಿಧಾಮಕ್ಕೆ ಹೋದ ಕಾರುಗಳು ವಾಪಸ್ ಆದ ನಂತರವೇ ಕೆಳಗೆ ಇರುವ ಕಾರುಗಳು ಗಿರಿಧಾಮಕ್ಕೆ ಹೋಗಬೇಕು.

ಬಂಧಿತ ಐವರು ಆರೋಪಿಗಳು

ರೌಡಿಶೀಟರ್ ಮಹೇಶ್‌ನ ಐವರು ಸಹಚರರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರನ್ನು ಅಡ್ಡಗಟ್ಟಿ ಮಾರಕಾಸ್ತ್ರ ತೋರಿಸಿ, ನಗದು ಹಾಗೂ ಚಿನ್ನಾಭರಣ ಸುಲಿಗೆ ಮಾಡುತ್ತಿದ್ದ ರೌಡಿಶೀಟರ್ ಮಹೇಶ್ ಅಲಿಯಾಸ್ ಸಿದ್ದಾಪುರ ಮಹೇಶ್‌ನ ಐವರು ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ವಿಲ್ಸನ್ ಗಾರ್ಡನ್ ಪೊಲೀಸ್ ಠಾಣಾ ವ್ಯಾಪ್ತಿಯ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯ ಪಕ್ಕದ ಬಿಟಿಎಸ್ ಸರ್ವೀಸ್ ರಸ್ತೆಯಲ್ಲಿ ಒಂಟಿಯಾಗಿ ತೆರಳುವ ನಾಗರಿಕರನ್ನು ಬೆದರಿಸುತ್ತಿದ್ದರು. ಐವರು ಆರೋಪಿಗಳು ಲಾಂಗ್, ಮಚ್ಚು ಹಾಗೂ ದೊಣ್ಣೆಗಳಿಂದ ಸಾರ್ವಜನಿಕರ ಮೇಲೆ ಹಲ್ಲೆ ನಡೆಸಿ, ಸುಲಿಗೆ ಮಾಡುತ್ತಿದ್ದರು. ಮಾರಕಾಸ್ತ್ರ ಹಾಗೂ ಫಾರ್ಚೂನರ್ ಕಾರು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಐವರು ಆರೋಪಿಗಳೂ ಕಳೆದ ವರ್ಷ ಬನಶಂಕರಿ ಮೆಟ್ರೊ ನಿಲ್ದಾಣದ ಬಳಿ ರೌಡಿಶೀಟರ್ ಮದನ್ ಎಂಬಾತನ ಕೊಲೆ ಮಾಡಿದ್ದ ಮಹೇಶ್ ಸಹಚರರು ಎಂದು ತನಿಖೆ ವೇಳೆ ಗೊತ್ತಾಗಿದೆ.

ವಿಲ್ಸನ್‌ಗಾರ್ಡನ್ ನಾಗ ಹಾಗೂ ಆತನ ಸಹಚರರು ಹೊಡೆಯಲು ಹೊಂಚು ಹಾಕಿ ನಿಂತಿದ್ದರು. ಆ ವೇಳೆ ಅವರನ್ನು ಬಂಧಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

26 ಮಂದಿ ಆಫ್ರಿಕಾ ಪ್ರಜೆಗಳ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೇಂದ್ರ ವಿಭಾಗದ ಪೊಲೀಸರು ಶನಿವಾರ ತಡರಾತ್ರಿ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆಯ ಪಬ್‌ಗಳ ಮೇಲೆ ದಾಳಿ ನಡೆಸಿದ್ದು, ಆಫ್ರಿಕನ್ ಪ್ರಜೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಎರಡು ದಿನಗಳ ಹಿಂದೆ ಪೊಲೀಸ್ ಕಮಿಷನರ್ ಕಚೇರಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಭೇಟಿ ನೀಡಿ ಕಾನೂನು ಉಲ್ಲಂಘಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ಅದರ ಬೆನ್ನಲ್ಲೇ ಕೇಂದ್ರ ವಿಭಾಗದ ಪೊಲೀಸರು ದಾಳಿ ನಡೆಸಿ, 26 ಮಂದಿ ವಿದೇಶಿ ಪ್ರಜೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಡಿಸಿಪಿ ಶ್ರೀನಿವಾಸಗೌಡ ನೇತೃತ್ವದಲ್ಲಿ ಇಬ್ಬರು ಎಸಿಪಿ, ಆರು ಮಂದಿ ಇನ್‌ಸ್ಪೆಕ್ಟರ್, 10 ಮಂದಿ ಪಿಎಸ್‌ಐ, 20 ಮಹಿಳಾ ಸಿಬ್ಬಂದಿ, 20 ಕಾನ್‌ಸ್ಟೆಬಲ್‌ಗಳು ಕಾರ್ಯಾಚರಣೆ ನಡೆಸಲಾಗಿದೆ.

ಪೊಲೀಸರ ಜತೆಗೆ ವಾಗ್ವಾದ: ಪೊಲೀಸರು ದಾಳಿ ನಡೆಸುತ್ತಿದ್ದು ತಿಳಿಯುತ್ತಿದ್ದಂತೆಯೇ ಆಫ್ರಿಕನ್ ಪ್ರಜೆಗಳು ಅಲ್ಲಿಂದ ಓಡಲು ಆರಂಭಿಸಿದ್ದರು. ಅವರನ್ನು ಹಿಂಬಾಲಿಸಿ ವಶಕ್ಕೆ ಪಡೆದುಕೊಳ್ಳಲಾಯಿತು. ಮಹಿಳೆಯರು ವಾಗ್ವಾದಕ್ಕೆ ಇಳಿದರು ಎಂದು ಪೊಲೀಸರು ಹೇಳಿದರು.

ವಶಕ್ಕೆ ಪಡೆದವರನ್ನು ರಾತ್ರಿಯೇ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯಿತು. ಕೆಲವರು ಮಾದಕ ಪದಾರ್ಥ ಸೇವಿಸಿರುವುದು ಪತ್ತೆಯಾಗಿದೆ. ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಲಾಗುವುದು. ಎಲ್ಲರ ಪಾಸ್‌ಪೋರ್ಟ್ ಹಾಗೂ ವೀಸಾಗಳನ್ನು ಪರಿಶೀಲಿಸಲಾಗುವುದು. ಅಕ್ರಮವಾಗಿ ನೆಲೆಸಿದವರ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ಹೇಳಿವೆ.

ಜಲಾಶಯದಲ್ಲಿ ಮುಳುಗಿ ಸಾವು

ಚಿಕ್ಕಬಳ್ಳಾಪುರ: ತಾಲ್ಲೂಕಿನ ಶ್ರೀನಿವಾಸ ಸಾಗರ ಜಲಾಶಯದಲ್ಲಿ ಭಾನುವಾರ ಮುಳುಗಿ ಬೆಂಗಳೂರಿನಮಹಮ್ಮದ್ ಯಾಸೀನ್ (22) ಮೃತಪಟ್ಟಿದ್ದಾರೆ. 10 ಮಂದಿ ಸ್ನೇಹಿತರ ಜೊತೆ ಅವರು ಶ್ರೀನಿವಾಸಸಾಗರಕ್ಕೆ ಪ್ರವಾಸಕ್ಕೆ ಬಂದಿದ್ದರು. ನೀರಿನಲ್ಲಿ ಈಜುವಾಗ ಮೃತಪಟ್ಟಿದ್ದಾರೆ. ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಸ್‌ಆರ್ ಅಡಿ ಸರ್‌.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ನಿರ್ಮಾಣ

ಹಾಲುಣಿಸಲು ತಾಯಂದಿರಿಗೆ ಕೇಂದ್ರ

• ವರುಣ ಹೆಗಡೆ

ಬೆಂಗಳೂರು: ನವಜಾತ ಶಿಶುಗಳಿಗೆ ಹಾಲುಣಿಸಲು ತಾಯಂದಿರು ಅಲೆದಾಡುವುದನ್ನು ತಪ್ಪಿಸಲು ಇಲ್ಲಿನ ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರತ್ಯೇಕ ಸ್ತನ್ಯಪಾನ ಕೇಂದ್ರಗಳನ್ನು ನಿರ್ಮಿಸಲಾಗಿದೆ.

ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಚೈಲ್ಡ್ ಹೆಲ್ಪ್ ಫೌಂಡೇಷನ್ ಎರಡು ಕೇಂದ್ರಗಳನ್ನು ಆಸ್ಪತ್ರೆಗೆ ನಿರ್ಮಿಸಿಕೊಟ್ಟಿದೆ. ಈ ಕೇಂದ್ರ ನಿರ್ಮಾಣಕ್ಕೆ ಆಂಥಾಲಜಿ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ಹಾಗೂ ಮುತ್ತೂಟ್ ಫೈನಾನ್ಸ್ ಕಂಪನಿಗಳು ನೆರವು ನೀಡಿವೆ. ಇದರಿಂದಾಗಿ ಆಸ್ಪತ್ರೆಗೆ ಬಂದ ತಾಯಂದಿರು ಶಿಶುಗಳಿಗೆ ಹಾಲುಣಿಸಲು ಸೂಕ್ತ ಸ್ಥಳಾವಕಾಶಕ್ಕೆ ಪರದಾಟ ನಡೆಸುವುದು ತಪ್ಪಲಿದೆ. ಆಸ್ಪತ್ರೆಯ ನೆಲ ಮಹಡಿ ಹಾಗೂ ಮೊದಲ ಮಹಡಿಯಲ್ಲಿ ಈ ಕೇಂದ್ರ ಇರಲಿದ್ದು, ಆಸ್ಪತ್ರೆಗೆ ಭೇಟಿ ನೀಡಿದ ತಾಯಂದಿರು ಇದರ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.



ಸರ್‌.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ನಿರ್ಮಿಸಿರುವ ಸ್ತನ್ಯಪಾನ ಕೇಂದ್ರ

ಇಂದಿರಾನಗರದಲ್ಲಿರುವ ಸರ್. ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಗೆ ದಿನಕ್ಕೆ 500ರಿಂದ 600 ಹೊರರೋಗಿಗಳು ಭೇಟಿ ನೀಡುತ್ತಾರೆ. ಅಲ್ಲಿ ಹಾಲುಣಿಸಲು ಪ್ರತ್ಯೇಕ ಕೇಂದ್ರಗಳು ಇರಲಿಲ್ಲ. ಇದರಿಂದ ತಾಯಂದಿರು ಸಮಸ್ಯೆ ಎದುರಿಸುತ್ತಿದ್ದರು. ಇದಕ್ಕೆ ಪರಿಹಾರ ಒದಗಿಸಲು ಆಸ್ಪತ್ರೆಯು ಸಿಎಸ್‌ಆರ್ ಅಡಿ ಕೇಂದ್ರ ನಿರ್ಮಾಣಕ್ಕೆ ಸ್ಥಳಾವಕಾಶ ಒದಗಿಸಿದೆ. ಮಕ್ಕಳ ಶಿಕ್ಷಣ, ಆರೋಗ್ಯ ಸೇರಿ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಚೈಲ್ಡ್ ಹೆಲ್ಪ್ ಫೌಂಡೇಷನ್, ಇದೇ ಮೊದಲ ಬಾರಿ ಈ ರೀತಿಯ ಕೇಂದ್ರ ನಿರ್ಮಿಸಿದೆ. ಈ ಮಾದರಿಯ ಕೇಂದ್ರ ಇಲ್ಲಿನ ಬೇರೆ ಸರ್ಕಾರಿ ಆಸ್ಪತ್ರೆಗಳಲ್ಲಿಲ್ಲ.

ಸ್ಥಳಾಂತರ ಸಾಧ್ಯ: ಸಿದ್ಧ ಮಾದರಿಯ ಈ ಕೇಂದ್ರಗಳನ್ನು ಒಂದೆಡೆಯಿಂದ ಇನ್ನೊಂದು ಕಡೆ ಸ್ಥಳಾಂತರ ಮಾಡಬಹುದಾಗಿದೆ. 6x10 ಹಾಗೂ 6X6 ಅಡಿ ಅಳತೆಯನ್ನು ಇವು ಹೊಂದಿವೆ. ಇದರ ಒಳಗಡೆ ತಾಯಂದಿರಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆ, ಫ್ಯಾನ್ ಸೇರಿ ವಿವಿಧ ಸೌಲಭ್ಯವಿದೆ.

‘ಇದೇ ಮೊದಲ ಬಾರಿ ಸ್ತನ್ಯಪಾನ ಕೇಂದ್ರವನ್ನು ನಿರ್ಮಾಣ ಮಾಡಿದ್ದೇವೆ. ಶಾಲಾ–ಕಾಲೇಜಿಗೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಕಾರ್ಯಗತ ಮಾಡಿದ್ದೇವೆ. ಈ ರೀತಿಯ ಕೇಂದ್ರಗಳು ಆಸ್ಪತ್ರೆಯಲ್ಲಿ ಅತ್ಯಗತ್ಯ. ತಾಯಂದಿರ ಸಮಸ್ಯೆ ಅರಿತು, ಆದ್ಯತೆ ಮೇರೆಗೆ ಕೇಂದ್ರ ನಿರ್ಮಾಣಕ್ಕೆ ನೆರವಾಗಿದ್ದೇವೆ’ ಎಂದು ಫೌಂಡೇಷನ್‌ನ ಬಿಲ್ವಾ ಪ್ರಶಸ್ತಿ ತಿಳಿಸಿದರು.

‘ಸರ್ಕಾರಕ್ಕೆ ಹೊರೆ ಆಗದಂತೆ ಕ್ರಮ’

‘ಆಸ್ಪತ್ರೆಗೆ ಬರುವ ತಾಯಂದಿರಿಗೆ ಹಾಲುಣಿಸಲು ಸೂಕ್ತ ಸ್ಥಳಾವಕಾಶ ಇರಲಿಲ್ಲ. ಖಾಲಿ ಇರುವ ಕೊಠಡಿಗಳಿಗೆ ತೆರಳಿ, ಹಾಲುಣಿಸುತ್ತಿದ್ದರು. ಆದ್ದರಿಂದ ನಾವು ಸರ್ಕಾರಕ್ಕೆ ಹೊರೆ ಆಗದಂತೆ ಹಾಲುಣಿಸುವ ಕೇಂದ್ರವನ್ನು ನಿರ್ಮಿಸಿದ್ದೇವೆ. ಈ ಕೇಂದ್ರ ಇದೇ ಸೋಮವಾರದಿಂದ ಕಾರ್ಯಾರಂಭ ಮಾಡಲಿದೆ. ಇದರಿಂದ ತಾಯಂದಿರು ಸಾರ್ವಜನಿಕ ಸ್ಥಳದಲ್ಲಿ ಹಾಲುಣಿಸುವುದು ತಪ್ಪಲಿದೆ’ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಧಾಕೃಷ್ಣ ತಿಳಿಸಿದರು.

SRS PU COLLEGE CHITRADURGA
NEET LONGTERM-23
Spices are the same, but preparation matters
Register Immediately for LONG TERM - NEET
9900000811 , 7353761333 , 9148117332 , 9243374522
ಜೂನ್ 21 ರಿಂದ ಪ್ರಾರಂಭ
2023ರ ನೀಟ್ ಫಲಿತಾಂಶದಲ್ಲಿ ಪಡೆದ ಅಂಕಗಳ ಮೇಲೆ ಸ್ಕಾಲರ್‌ಶಿಪ್ ಸಿಗುತ್ತದೆ
15% ಸ್ಕಾಲರ್ ಶಿಪ್ 300-350 ಮಾರ್ಕ್ಸ್
25% ಸ್ಕಾಲರ್ ಶಿಪ್ 350-400 ಮಾರ್ಕ್ಸ್
35% ಸ್ಕಾಲರ್ ಶಿಪ್ 400-450 ಮಾರ್ಕ್ಸ್
50% ಸ್ಕಾಲರ್ ಶಿಪ್ 450-500 ಮಾರ್ಕ್ಸ್
100% ಸ್ಕಾಲರ್ ಶಿಪ್ 500+ ಮಾರ್ಕ್ಸ್
ಬಾಲಕರು ಹಾಗೂ ಬಾಲಕಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ
ಪ್ರತಿಷ್ಠಿತ AIIMS ಗೆ ಲಗ್ಗೆ ಇಟ್ಟ SRS ಪಿ.ಯು ಕಾಲೇಜು
MARULASIDDANA GOWDA N 676/720
CHINMAY M GOWDA 663/720
MADHUSUDHAN K M 660/720
NITHIN V ALL INDIA 332 RANK
YASHAS D ALL INDIA 371 RANK
AYUSH T ALL INDIA 381 RANK

'ನ್ಯಾಕ್ ಎ+' ಪಡೆದ 138 ವರ್ಷಗಳ ಇತಿಹಾಸ ಹೊಂದಿರುವ ಶೈಕ್ಷಣಿಕ ಸಂಸ್ಥೆ

ಈ ಕಾಲೇಜು ವಿದ್ಯಾರ್ಥಿಗಳ ಅಚ್ಚುಮೆಚ್ಚು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ಖ್ಯಾತನಾಮರು ಅಧ್ಯಯನ ಮಾಡಿರುವ ಈ ಕಾಲೇಜು ಇಂದಿಗೂ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚು.

ನಗರದ ಹೃದಯ ಭಾಗದಲ್ಲಿರುವ ಸರ್ಕಾರಿ ಕಲಾ ಕಾಲೇಜಿಗೆ ವಿದ್ಯಾರ್ಥಿಗಳ ಬೇಡಿಕೆ ಕುಸಿದಿಲ್ಲ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು, ಪರಿಶಿಷ್ಟರು ಹೆಚ್ಚಿನ ಸಂಖ್ಯೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕ ಸೇರಿದಂತೆ 20ಕ್ಕೂ ಹೆಚ್ಚು ಜಿಲ್ಲೆಗಳ ವಿದ್ಯಾರ್ಥಿಗಳು ಇಲ್ಲಿ ಪ್ರವೇಶ ಪಡೆದಿರುವುದು ವಿಶೇಷ.ಇದು ವೈವಿಧ್ಯಗಳಿರುವ ಶೈಕ್ಷಣಿಕ ಸಂಸ್ಥೆಯಾಗಿ ಉಳಿದಿದೆ.

138 ವರ್ಷಗಳ ಇತಿಹಾಸ ಹೊಂದಿರುವ ಈ ಕಾಲೇಜಿನಲ್ಲೇ ಬಂಡಾಯ ಮತ್ತು ಬೂಸಾ ಚಳವಳಿಗಳು ಹುಟ್ಟಿಕೊಂಡಿದ್ದವು. ಇಂತಹ ಹಲವಾರು ಐತಿಹಾಸಿಕ ಘಟನೆಗಳಿಗೆ ಈ ಕಾಲೇಜು ಸಾಕ್ಷಿಯಾಗಿದೆ. ರಾಜ್ಯದಲ್ಲಿನ 440 ಪದವಿ ಕಾಲೇಜುಗಳಲ್ಲಿ 330 ಕಾಲೇಜುಗಳಿಗೆ ನ್ಯಾಕ್ ಮಾನ್ಯತೆ ದೊರೆತಿದೆ. ರಾಜ್ಯದಲ್ಲೇ ಈ ಕಾಲೇಜಿಗೆ ಮಾತ್ರ 'ನ್ಯಾಕ್ ಎ+' (ಸಿಜಿಪಿಎ 3.29) ಮಾನ್ಯತೆ ದೊರೆತಿದೆ. ಕಾಲೇಜಿನಲ್ಲಿರುವ ಮೂಲಸೌಕರ್ಯ, ಬೋಧನೆ, ವಿವಿಧ ಚಟುವಟಿಕೆಗಳಿಂದ ಈ ಮಾನ್ಯತೆ ಪಡೆಯುವಲ್ಲಿ ಯಶಸ್ವಿಯಾಗಿದೆ.

ಬಿಎ, ಬಿ.ಕಾಂ, ಬಿಬಿಎಂ ಹಾಗೂ ಎಂ.ಎ. ಮತ್ತು ಎಂ.ಕಾಂ. ಪದವಿಗಳಿಗೆ ಇಲ್ಲಿ ಪ್ರವೇಶ ನೀಡಲಾಗುತ್ತಿದೆ. ಸದ್ಯ ಎರಡು ಸಾವಿರ ವಿದ್ಯಾರ್ಥಿಗಳು ಪ್ರವೇಶ ಪಡೆದು ಅಧ್ಯಯನ ಮಾಡುತ್ತಿದ್ದಾರೆ. ಇವರಲ್ಲಿ ಶೇ 65ಕ್ಕೂ ಹೆಚ್ಚು ವಿದ್ಯಾರ್ಥಿನಿಯರು. 2023-24ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಈಗಲೇ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಇನ್ನೂ ಪ್ರವೇಶ ಪಡೆಯಲು ಸಾಕಷ್ಟು ಕಾಲಾವಕಾಶ ಇರುವುದರಿಂದ ಪ್ರವೇಶ ಪಡೆಯುವವರ ಸಂಖ್ಯೆಯಲ್ಲಿ ಏರಿಕೆಯಾಗಲಿದೆ ಎಂದು ಪ್ರಾಧ್ಯಾಪಕರು ಹೇಳುತ್ತಾರೆ.

ಐದೂವರೆ ಎಕರೆ ಪ್ರದೇಶದಲ್ಲಿ ವಿಶಾಲವಾದ ಆವರಣದಲ್ಲಿರುವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಬೆಳವಣಿಗೆಯಾಗುವ ಪೂರಕ ವಾತಾವರಣ ಸೃಷ್ಟಿಸಲಾಗಿದೆ. ಈ ಕಾಲೇಜಿನ 200 ಮೀಟರ್ ಅಂತರದಲ್ಲೇ ಮೂರು ವಿಶ್ವವಿದ್ಯಾಲಯಗಳು ಆವರಿಸಿಕೊಂಡಿರುವುದರಿಂದ ಶೈಕ್ಷಣಿಕ ಚಟುವಟಿಕೆಗಳಿಗೆ ಮತ್ತಷ್ಟು ಚೈತನ್ಯ ದೊರೆತಂತಾಗಿದೆ.

ಹಲವು ವಿದ್ಯಾರ್ಥಿಗಳು ಕಾಲೇಜಿನ ಅವಧಿ ಬಳಿಕ ಅರೆಕಾಲಿಕ ಉದ್ಯೋಗದಲ್ಲೂ ತೊಡಗಿದರೆ, ಇನ್ನು ಹಲವರು ಸ್ಪರ್ಧಾತ್ಮಕ ಪರೀಕ್ಷೆಯ ಸಿದ್ಧತೆಯಲ್ಲಿ ತೊಡಗುತ್ತಾರೆ. ಹೀಗಾಗಿ, ಈ ಕಾಲೇಜಿನಲ್ಲಿ ಪ್ರವೇಶ ಪಡೆಯುವುದು ಹಲವರಿಗೆ ಅನುಕೂಲಕರವಾಗಿದೆ.

ಇಲ್ಲಿನ ಶಿಕ್ಷಕರು ಮತ್ತು ಹಳೆಯ ವಿದ್ಯಾರ್ಥಿಗಳಿಂದ ₹15 ಲಕ್ಷ ಮೊತ್ತದ ನಿಧಿ ಸ್ಥಾಪಿಸಲಾಗಿದೆ. ಈ ಮೊತ್ತದಿಂದ ದೊರೆಯುವ ಬಡ್ಡಿಯಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಗುತ್ತಿದೆ.

ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳು ಮತ್ತು ಗ್ರಂಥಾಲಯಕ್ಕೆ ಪ್ರತ್ಯೇಕವಾದ ಕಟ್ಟಡ ಅಗತ್ಯವಿದೆ. ಜತೆಗೆ ಅತ್ಯುತ್ತಮ ಸಭಾಂಗಣ ನಿರ್ಮಿಸಬೇಕಾಗಿದೆ.

ನಗರದ ಡಾ.ಬಿ.ಆರ್‌. ಅಂಬೇಡ್ಕರ್ ರಸ್ತೆಯಲ್ಲಿರುವ ಸರ್ಕಾರಿ ಕಲಾ ಕಾಲೇಜು —ಪ್ರಜಾವಾಣಿ ಚಿತ್ರ: ಎಂ.ಎಸ್‌.ಮಂಜುನಾಥ್

ಕಾಲೇಜಿನ ವಿಶೇಷಗಳು

- 51 ಕಾಯಂ ಬೋಧನಾ ಸಿಬ್ಬಂದಿ
- ₹1.5 ಕೋಟಿ ವೆಚ್ಚದ ಮಲ್ಟಿಸ್ಪೆಷಾಲಿಟಿ ಜಿಮ್
- ಅತ್ಯುತ್ತಮ ಗ್ರಂಥಾಲಯ
- ಎನ್‌ಸಿಸಿ ಘಟಕಗಳು
- ಕ್ರೀಡಾ ಸೌಲಭ್ಯಗಳು
- ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ
- ಹೆಣ್ಣುಮಕ್ಕಳಿಗೆ ಸರ್ಕಾರದಿಂದ ಬೋಧನಾ ಶುಲ್ಕ ವಿನಾಯಿತಿ
- ಪದವಿ ಜತೆಗೆ ಸರ್ಟಿಫಿಕೇಟ್ ಕೋರ್ಸ್‌ಗಳು
- ಸಮೀಪದಲ್ಲೇ ಬಸ್ ನಿಲ್ದಾಣ, ರೈಲು ನಿಲ್ದಾಣ, ಮೆಟ್ರೊ

'ಸ್ಪರ್ಧಾತ್ಮಕ ಪರೀಕ್ಷೆಗೆ ಮಾರ್ಗದರ್ಶನ'



ಈ ಕಾಲೇಜಿನಲ್ಲಿ ಓದಿದವರು ತಮ್ಮ ಬದುಕು ಕಟ್ಟಿಕೊಂಡಿದ್ದಾರೆ. ಪ್ರತಿ ವರ್ಷ ಈ ಕಾಲೇಜಿನಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. 2016ರಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಕುಸಿದಿತ್ತು. ಈಗ ಸ್ಪರ್ಧಾತ್ಮಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದೆ. ನಮ್ಮ ಕಾಲೇಜಿನಲ್ಲೇ ಅತ್ಯುತ್ತಮ ಪ್ರಾಧ್ಯಾಪಕರಿದ್ದಾರೆ. ಅವರಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಾಗುವುದು. ಜತೆಗೆ ಬಿಸಿಎ ಕೋರ್ಸ್ ಆರಂಭಿಸಲಾಗುವುದು

ಡಾ.ಪಿ.ಟಿ. ಶ್ರೀನಿವಾಸ ನಾಯಕ, ಪ್ರಾಂಶುಪಾಲ

ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಾತಾವರಣ ಇದೆ. ಬೋಧನೆಯೂ ಉತ್ತಮವಾಗಿದೆ. ಇಲ್ಲಿ ಎಲ್ಲ ಸೌಲಭ್ಯಗಳಿವೆ. ಜತೆಗೆ, ಇಲ್ಲಿ ಅತಿ ಕಡಿಮೆ ಶುಲ್ಕವಿದೆ

ಪವನ್‌ಕುಮಾರ್
ಬಿಎ 2ನೇ ವರ್ಷದ ವಿದ್ಯಾರ್ಥಿ

ಕಾಲೇಜಿನ ಕ್ಯಾಂಪಸ್ ಎಲ್ಲ ರೀತಿಯಲ್ಲೂ ಅನುಕೂಲಕರವಾಗಿದೆ. ಶೈಕ್ಷಣಿಕ ಚಟುವಟಿಕೆಗಳ ಜತೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಪ್ರಾಮುಖ್ಯತೆ ನೀಡಲಾಗುತ್ತಿದೆ.

ಭೀಮಮ್ಮ
ಬಿಎ 2ನೇ ವರ್ಷದ ವಿದ್ಯಾರ್ಥಿನಿ

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಭಾನುವಾರ ಆಯೋಜಿಸಿದ್ದ ಸ್ವಾಭಿಮಾನಿ ಕನ್ನಡಿಗರ ಪ್ರಜ್ಞಾ ದಿನ ಕಾರ್ಯಕ್ರಮಕ್ಕೆ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವುದರ ಮೂಲಕ ಚಾಲನೆ ನೀಡಲಾಯಿತು

'ರಾಜಧಾನಿಯಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕ್ಷೀಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೈಗಾರಿಕೆ, ಉದ್ಯೋಗ ಸೃಷ್ಟಿಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಆದರೆ, ರಾಜ ಧಾನಿಯಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ' ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಹೇಳಿದರು.

ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿಯು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಆಯೋಜಿಸಿದ್ದ 'ಸ್ವಾಭಿಮಾನಿ ಕನ್ನಡಿಗರ ಪ್ರಜ್ಞಾ ದಿನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರಿನಲ್ಲಿ ವಿವಿಧ ಭಾಷೆಯ ಜನರು ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ. ಕನ್ನಡಿಗರು ಎಲ್ಲರಿಗೂ ಆಶ್ರಯ ನೀಡಿದ್ದಾರೆ. ಅದರೊಂದಿಗೆ ನಮ್ಮ ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅಗತ್ಯವಿದೆ. ಕನ್ನಡ ನಾಡನ್ನು ಜಾತ್ಯತೀತ ರಾಷ್ಟ್ರವನ್ನಾಗಿಸುವ ಪ್ರತಿಜ್ಞೆ ಕೈಗೊಳ್ಳಬೇಕು' ಎಂದು ಕರೆ ನೀಡಿದರು.

'ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ತಿನ್ನುವ ಆಹಾರ, ಹಾಕುವ ಬಟ್ಟೆಗಳ ಬಗ್ಗೆ ವಿವಾದ ಮಾಡುವುದರ ಮೂಲಕ ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿತ್ತು. ಅಸಹನೆ ಕನ್ನಡಿಗರ ಗುಣವಲ್ಲವೆಂಬುದನ್ನು ವಿಧಾನಸಭೆ ಚುನಾವಣೆಯಲ್ಲಿ ತೋರಿಸಿಕೊಟ್ಟಿದ್ದಾರೆ' ಎಂದರು.

ಸಮಿತಿಯ ಸಂಚಾಲಕ ಎಲ್. ಎನ್. ಮುಕುಂದರಾಜ್, 'ಕುವೆಂಪು ಅವರ ವಿಚಾರಧಾರೆಗಳನ್ನು ಅಧ್ಯಯನ ಮಾಡದವರು ಅವರನ್ನು ಅವಹೇಳನ ಮಾಡಿದ್ದಾರೆ. ಪ್ರಗತಿಪರರ ಆತ್ಮ ಚೈತನ್ಯ ಕಳೆಯುವ ಕೆಲಸಗಳನ್ನು ಮಾಡುತ್ತಿರುವುದು ದುರದೃಷ್ಟಕರ. ಕನ್ನಡ ನಾಡು ನುಡಿ ಎಲ್ಲೆಡೆ ಪಸರಿಸುವ ವಾತಾವರಣ ನಿರ್ಮಾಣ ಮಾಡಬೇಕಿದೆ. ಈ ಹಿಂದಿನ ಸರ್ಕಾರ ಸಂಸ್ಕೃತ ವಿಶ್ವವಿದ್ಯಾನಿಲಯಕ್ಕೆ ₹300 ಕೋಟಿಯನ್ನು ನೀಡಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕೇವಲ ₹3 ಕೋಟಿ ಅನುದಾನವನ್ನು ನೀಡಿದ್ದು, ಕನ್ನಡಿಗರನ್ನು ಅಣಕ ಮಾಡಿದಂತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಸಿದ್ಧರಾಮಚೈತನ್ಯ ಸ್ವಾಮೀಜಿ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, ಸಮಿತಿಯ ಅಧ್ಯಕ್ಷ ಜಿ.ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಆಡಿಟರ್ ನಾಗರಾಜ್ ಯಲಚವಾಡಿ ಇದ್ದರು.

ರೈತ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು 2023ನೇ ಸಾಲಿನ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ 'ಅತ್ಯುತ್ತಮ ರೈತ ಪ್ರಶಸ್ತಿ' ಹಾಗೂ 'ರೈತ ಮಹಿಳೆ ಪ್ರಶಸ್ತಿ'ಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ರಾಜ್ಯಮಟ್ಟದಲ್ಲಿ ಎಚ್‌.ಡಿ.ದೇವೇಗೌಡ ಅತ್ಯುತ್ತಮ ರೈತ- ರೈತ ಮಹಿಳೆ ಪ್ರಶಸ್ತಿ, ಎಂ.ಎಚ್‌.ಮರಿಗೌಡ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಹಾಗೂ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಕ್ಯಾನ್ ಬ್ಯಾಂಕ್ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗಳನ್ನು ನೀಡಲಾಗುವುದು.

ಜಿಲ್ಲಾಮಟ್ಟದಲ್ಲಿ ಅತ್ಯುತ್ತಮ ರೈತ ಹಾಗೂ ರೈತ ಮಹಿಳೆ, ತಾಲ್ಲೂಕು ಮಟ್ಟದಲ್ಲಿ ಯುವ ರೈತ ಹಾಗೂ ಯುವ ರೈತ ಮಹಿಳೆ ಪ್ರಶಸ್ತಿಗಳನ್ನು ನೀಡಲಾಗುವುದು. ಈ ಅಕ್ಟೋಬರ್‌ನಲ್ಲಿ ನಡೆಯಲಿರುವ ಕೃಷಿ ಮೇಳದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.

ಆಸಕ್ತರು ಅರ್ಜಿ ನಮೂನೆಗಳನ್ನು ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಚೇರಿಗಳು, ಕೃಷಿ ವಿಜ್ಞಾನ ಕೇಂದ್ರಗಳು ಅಥವಾ ವಿಶ್ವವಿದ್ಯಾಲಯದ ವೆಬ್‌ಸೈಟ್ www.uasbangalore.edu.in ನಿಂದಲೂ ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕೃಷಿ ವಿಸ್ತರಣಾ ನಿರ್ದೇಶಕರ ಕಚೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಬೆಂಗಳೂರು ಕೃಷಿ ವಿಶ್ವವಿದ್ಯಾಲಯ.

ಸಂಪರ್ಕ: 080-23330153

'ಸರ್ಕಾರ –ಜನರ ನಡುವಿನ ಕೊಂಡಿ ಅಧಿಕಾರಿಗಳು'

ಕೇಂದ್ರ ನಾಗರಿಕ ಸೇವೆಗಳಿಗೆ ಆಯ್ಕೆಯಾದವರನ್ನು ಅಭಿನಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು ಮುಂದೆ ಅಧಿಕಾರಿಗಳಾಗುತ್ತೀರಿ. ಸರ್ಕಾರ ಮತ್ತು ಜನರ ನಡುವೆ ಕೊಂಡಿಗಳಂತೆ ಕೆಲಸ ಮಾಡುವ ನೀವು ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿ ಕೆಲಸ ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಕೇಂದ್ರ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಭಾನುವಾರ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜನಪ್ರತಿನಿಧಿಗಳು, ಅಧಿಕಾರಿಗಳು ಸಮಾಜಕ್ಕೆ ಉತ್ತರದಾಯಿಗಳಾಗಿರಬೇಕು. ಅಧಿಕಾರಕ್ಕೆ ಬರುವ ಮುಂಚೆ ಜನರಿಗೆ ಆಶ್ವಾಸನೆಗಳನ್ನು ಎಲ್ಲ ಪಕ್ಷಗಳು ನೀಡಿರುತ್ತವೆ. ಅಧಿಕಾರಕ್ಕೆ ಬಂದ ಮೇಲೆ ಆ ಆಶ್ವಾಸನೆಗಳನ್ನು ಈಡೇರಿಸಬೇಕು. ಸರ್ಕಾರಿ ಉದ್ಯೋಗವನ್ನು ಪಡೆಯುವುದೇ ಜನರ ಸೇವೆ ಮಾಡಲು. ಬಡ ಜನರ ಅಭಿವೃದ್ಧಿಗೆ ಬದ್ಧರಾಗಿರಬೇಕು. ಸಮಾಜದಲ್ಲಿ ಇರುವ ಸಾಮಾಜಿಕ ಅಸಮಾನತೆ, ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕೆಲಸ ಮಾಡಬೇಕು ಎಂದು ತಿಳಿಸಿದರು.

ಜೀವನದಲ್ಲಿ ಕಷ್ಟಪಟ್ಟವರಿಗೆ ಇತರರ ಕಷ್ಟವನ್ನು ಪರಿಹಾರ ಮಾಡುವುದು ಗೊತ್ತಿರುತ್ತದೆ. ಉಪವಾಸವಲ್ಲ, ಹಸಿವಿನಿಂದ ಇದ್ದವರಿಗೆ ಅದರ ಮಹತ್ವ ಗೊತ್ತಿರುತ್ತದೆ. ಬಡತನದಿಂದ ಬಂದು ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಹೆಚ್ಚು ಜನಪರವಾಗಿ ಕೆಲಸ ಮಾಡುತ್ತಾರೆ ಎಂದು ವಿಶ್ಲೇಷಿಸಿದರು.

ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಕರ್ನಾಟಕದ 31 ಜನರಲ್ಲಿ 23 ಅಭ್ಯರ್ಥಿಗಳು ಇನ್‌ಸೈಟ್ಸ್ ಸಂಸ್ಥೆಯಲ್ಲಿ ತರಬೇತಿ ಪಡೆದಿದ್ದವರು ಎಂಬುದು ದೊಡ್ಡ ಸಾಧನೆ. ವಿನಯ್ ಕುಮಾರ್ ಅವರು ಮೈಸೂರಿನಲ್ಲಿ ಇನ್‌ಸೈಟ್ಸ್ ಐಎಎಸ್ ಕೇಂದ್ರ ತೆರೆಯಬೇಕು ಎಂದಿದ್ದಾರೆ. ಮೈಸೂರು ಮಾತ್ರವಲ್ಲ ರಾಜ್ಯದ ನೂರು ಪ್ರದೇಶಗಳಲ್ಲಿ ಇನ್‌ಸೈಟ್ಸ್ ಐಎಎಸ್ ಕೇಂದ್ರಗಳಾಗಬೇಕು. ಬಡವರಿಗೆ ತರಬೇತಿ ಸಿಗಬೇಕು ಎಂದು ಆಶಿಸಿದರು.

ಸಿರಿಗೆರೆ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ, 'ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ನೀವು ಬಹಳ ಬುದ್ಧಿವಂತರು ಇದ್ದೀರಿ. ನಿಮ್ಮ ಬುದ್ಧಿವಂತಿಕೆಯು ಜನರ ಸೇವೆಗೆ ಬಳಕೆಯಾಗಲಿ. ಹವಾನಿಯಂತ್ರಿತ, ಉತ್ತಮ ಪೀಠೋಪಕರಣಗಳಿರುವ ಕಚೇರಿ ಇರಲಿ ಎಂದು ಯೋಚಿಸಬೇಡಿ. ಜನರ ಸಮಸ್ಯೆಗಳನ್ನು ಹೇಗೆ ಪರಿಹರಿಸುವುದು ಎಂದು ಯೋಚಿಸಿ' ಎಂದು ಸಲಹೆ ನೀಡಿದರು.

'ದೇಶ ಸೇವೆ, ಜನರ ಸೇವೆ ನಿಮ್ಮ ಉದ್ದೇಶವಾಗಿರಬೇಕು. ನೈತಿಕತೆ ಮತ್ತು ಬದ್ಧತೆಯಿಂದ ಸಂವಿಧಾನದ ದಾರಿಯಲ್ಲಿ ಕೆಲಸ ಮಾಡಿದರೆ ದೇಶದ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಹೇಳಿದರು.

ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕ, ನಿರ್ದೇಶಕ ವಿನಯ್ ಕುಮಾರ್ ಜಿ.ಬಿ., ಪ್ರಜಾಪ್ರಗತಿಯ ಮಧುಕರ್ ಇದ್ದರು.

ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ನಾಗರಿಕ ಸೇವಾ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು. ಇನ್‌ಸೈಟ್ಸ್ ಐಎಎಸ್ ನಿರ್ದೇಶಕ ವಿನಯ್ ಕುಮಾರ್ ಜಿ.ಬಿ., ಸಿರಿಗೆರೆ ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ಇದ್ದಾರೆ ಪ್ರಜಾವಾಣಿ ಚಿತ್ರ

ನಾನು ಓದುವ ಕಾಲದಲ್ಲಿ ಐಎಎಸ್, ಐಪಿಎಸ್ ಎಂಬುದೊಂದು ಇದೆ ಎಂದು ಗೊತ್ತಿರಲಿಲ್ಲ. ನಂಗೆ ಯಾರೂ ಹೇಳಿರಲಿಲ್ಲ. ಗೊತ್ತಿದ್ದರೆ ಪ್ರಯತ್ನಿಸಬಹುದಿತ್ತು.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಿಕ್ಕಿಂ: ಕೊಚ್ಚಿ ಹೋದ ಸೇತುವೆ

ಗ್ಯಾಂಗ್ಟಕ್ (ಪಿಟಿಐ): ಪಶ್ಚಿಮ ಸಿಕ್ಕಿಂ ಜಿಲ್ಲೆಯಲ್ಲಿ ಧಾರಾಕಾರ ಮಳೆಯಿಂದಾಗಿ ಹಲವೆಡೆ ಭೂಕುಸಿತ ಸಂಭವಿಸಿದ್ದು, ಸುಮಾರು 100 ಮನೆಗಳಿಗೆ ಹಾನಿಯಾಗಿದೆ ಮತ್ತು ಸೇತುವೆಗಳು ಕೊಚ್ಚಿ ಹೋಗಿವೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮಳೆಯಿಂದಾಗಿ ಕಾಲೇಜು ಖೋಲಾ ಕಣಿವೆ ಮೇಲ್ಭಾಗದಲ್ಲಿ ಪ್ರವಾಹ ಉಂಟಾಗಿದ್ದು, ಸಿಂಪೋಕ್‌ನಲ್ಲಿ ಪ್ರಮುಖ ಸೇತುವೆ ಕೊಚ್ಚಿ ಹೋಗಿದೆ. ಗ್ಯಾಲ್ಶಿಂಗ್ ಜಿಲ್ಲೆಯಲ್ಲೂ ಭೂಕುಸಿತದಿಂದಾಗಿ ಮನೆಗಳು ಮತ್ತು ರಸ್ತೆಗಳು ಹಾನಿಗೊಳಗಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೃಷಿ ಭೂಮಿ ಮತ್ತು ಜಾನುವಾರುಗಳ ಮೇಲೂ ಪರಿಣಾಮ ಬೀರಿದೆ.

ನಗರದಲ್ಲಿ ಇಂದು

'ಮುಕ್ಕಂ ಪೋಸ್ಟ್ ಬೊಂಬಿಲವಾಡಿ' ನಾಟಕ ಪ್ರದರ್ಶನ: ಕಥೆ: ಪರೇಶ್ ಮೊಕಾಶಿ, ಅನುವಾದ: ಕೆ.ಆರ್. ಓಂಕಾರ್, ನಿರ್ದೇಶನ: ರವೀಂದ್ರ ಪೂಜಾರಿ, ತಂಡ: ಸಮಷ್ಟಿ, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್, ಸ್ಥಳ: ಡಾ.ಎಚ್‌.ಎನ್. ಕಲಾಕ್ಷೇತ್ರ, ಜಯನಗರ, ಸಂಜೆ 6.30

'ಕೆ.ಎನ್. ಗುರುಸ್ವಾಮಿ ನೆನಪಿನ ಸಂಜೆ', ಕೆ.ಎನ್. ಹರಿಕುಮಾರ್ ಅವರ 'ಗ್ರ್ಯಾಂಡ್‌ಫಾದರ್ ಅಂಡ್ ಗ್ರ್ಯಾಂಡ್‌ಮದರ್: ಎ ಮೆಮೊರ್' ಪುಸ್ತಕ ಬಿಡುಗಡೆ: ಅತಿಥಿಗಳು: ಎಂ.ಎನ್. ವೆಂಕಟಾಚಲಯ್ಯ, ಜಿ.ಎನ್. ರಂಗನಾಥರಾವ್, ಪಿ.ಜಿ. ಬೆಳ್ಳಿಯಪ್ಪ, ಜಾನಕಿ ನಯರ್, ಕೆ.ಎನ್. ಹರಿಕುಮಾರ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

ಕೆ.ಎನ್‌. ಗುರುಸ್ವಾಮಿ

ಚಿತ್ರಾವಳಿ

ಅಂತರರಾಷ್ಟ್ರೀಯ ಪುರುಷರ ಆರೋಗ್ಯ ಸಪ್ತಾಹದ ಪ್ರಯುಕ್ತ ಎನ್‌ಯು. ಆಸ್ಪತ್ರೆಯು ನಗರದಲ್ಲಿ ಬೈಕ್ ರ್‍ಯಾಲಿ ಮೂಲಕ ಆರೋಗ್ಯ ಜಾಗೃತಿ ಮೂಡಿಸಿತು

ಬೆಂಗಳೂರು ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಕುಲಾಧಿಪತಿ ಎಂ.ಆರ್‌. ದೊರೆಸ್ವಾಮಿ, ಕುಲಪತಿ ಜೆ. ಸೂರ್ಯಪ್ರಸಾದ್ ಅವರು ಗೌರವಿಸಿದರು

ರಕ್ತದ ಆಕರ ಕೋಶ ದಾನಕ್ಕೆ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗಾಗಿ ನಗರದಲ್ಲಿ ಶನಿವಾರ ಬೈಕ್ ಜಾಥಾ ನಡೆಸಿದ ಸ್ವಯಂ ಸೇವಕರು, ರೋಗಿಗಳನ್ನು ರಕ್ಷಿಸಲು ರಕ್ತದ ಆಕರ ಕೋಶ ದಾನ ಮಾಡುವಂತೆ ಮನವಿ ಮಾಡಿಕೊಂಡರು.

ಡಿಕೆಎಂಎಸ್– ಬಿಎಂಎಸ್‌ಟಿ ಫೌಂಡೇಷನ್ ಆಯೋಜಿಸಿದ ಬೈಕ್ ಜಾಥಾದಲ್ಲಿ 50ಕ್ಕೂ ಅಧಿಕ ಮಂದಿ ಇಂದಿರಾನಗರದಿಂದ ಕಂಠೀರವ ಕ್ರೀಡಾಂಗಣದವರೆಗೆ ಬೈಕ್ ಸವಾರಿ ನಡೆಸಿ, ಜಾಗೃತಿ ಮೂಡಿಸಿದರು.

ಈ ವೇಳೆ ಮಾತನಾಡಿದ ಫೌಂಡೇಷನ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್, 'ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರಕೋಶ ಸಹಾಯಕ. ಆರೋಗ್ಯವಂತ ವ್ಯಕ್ತಿಗಳು ರಕ್ತದ ಆಕರಕೋಶ ದಾನ ಮಾಡುವ ಮೂಲಕ ರೋಗಿಗಳ ಚೇತರಿಕೆಗೆ ನೆರವಾಗಬೇಕು' ಎಂದರು.

ಜಾಥಾದಲ್ಲಿ ಪಾಲ್ಗೊಂಡ ಜಿ.ಕೆ. ಆಕಾಶ್, 'ರೋಗಿಗಳಿಗೆ ನೆರವಾಗುವಂತೆ ಜನರಲ್ಲಿ ಅರಿವು ಮೂಡಿಸಿರುವುದು ಸಂತೋಷವನ್ನುಂಟು ಮಾಡಿದೆ' ಎಂದು ತಿಳಿಸಿದರು.

'ವಿದ್ಯುತ್ ಬೆಲೆ ಏರಿಕೆ ರದ್ದತಿ ಅಸಾಧ್ಯ'

ಪ್ರಜಾವಾಣಿ ವಾರ್ತೆ

ಬಾಳೆಹೊನ್ನೂರು: 'ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಕೇಂದ್ರದ ಕಾಯ್ದೆ ಮೂಲಕ ನಡೆಯುತ್ತಿದ್ದು, ಒಂದು ಬಾರಿ ವಿದ್ಯುತ್ ದರ ಅನುಮೋದನೆ ಆದ ಬಳಿಕ ಅದನ್ನು ಹಿಂಪಡೆಯಲು ಸಾಧ್ಯವಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ರಂಭಾಪುರಿ ಪೀಠಕ್ಕೆ ಭೇಟಿ ನೀಡಿದ ಅವರು ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದು ಸುದ್ದಿಗಾರರೊಂದಿಗೆ ಮಾತನಾಡಿದರು.

2022ರ ನವೆಂಬರ್‌ನಿಂದ ದರ ಪ್ರಕ್ರಿಯೆ ಆರಂಭವಾಗಿದೆ. ಮಾರ್ಚ್‌ನಲ್ಲೇ ದರ ಏರಿಕೆ ಆಗಬೇಕಿತ್ತು. ಆಗ ಚುನಾವಣಾ ನೀತಿ ಸಂಹಿತೆ ಕಾರಣದಿಂದ ಏರಿಕೆ ಆಗಿರಲಿಲ್ಲ. ಮೇ 12ರಿಂದ ಅನ್ವಯವಾಗುವಂತೆ ವಿದ್ಯುತ್ ದರ ಏರಿಕೆ ಮಾಡಲಾಗಿದೆ. ಇದರಲ್ಲಿ ಕಾಂಗ್ರೆಸ್ ಪಾತ್ರವಿಲ್ಲ. ಬಿಜೆಪಿ ಅವಧಿಯಲ್ಲೇ ದರ ಏರಿಕೆ ಆಗಿದೆ ಎಂದರು.

ಮೂರು ವರ್ಷದ ಪಟ್ಟಿ ಬಿಡುಗಡೆ ಮಾಡಿದ ಸಂಚಾರ ಪೊಲೀಸರು

ನಗರದಲ್ಲಿ ರಸ್ತೆ ಅಪಘಾತಗಳ ವಿಮರ್ಶೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಮೂರು ವರ್ಷಗಳಲ್ಲಿ ನಗರದ ರಸ್ತೆಗಳಲ್ಲಿ ಸಂಭವಿಸಿದ ಅಪಘಾತಗಳನ್ನು ಸಂಚಾರ ಪೊಲೀಸರು ವಿಮರ್ಶೆ ಮಾಡಿದ್ದು, ಅದರ ವಿವರವನ್ನು ಶನಿವಾರ ಬಿಡುಗಡೆ ಮಾಡಿದ್ದಾರೆ.

2020, 2021 ಹಾಗೂ 2022ರ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ, ಪಾದಚಾರಿಗಳ ಸಾವು– ನೋವಿನ ಮಾಹಿತಿಯನ್ನು ಸಂಚಾರ ಪೊಲೀಸರು ಕಲೆಹಾಕಿದ್ದಾರೆ. 2020ಕ್ಕೆ ಹೋಲಿಸಿದರೆ 2022ರಲ್ಲಿ ನಗರದಲ್ಲಿ 120 ಅಪಘಾತ ಪ್ರಕರಣಗಳು ಹೆಚ್ಚಾಗಿವೆ. ಅಲ್ಲದೇ ಮೃತರ ಸಂಖ್ಯೆಯೂ 115ಕ್ಕೆ ಹೆಚ್ಚಾಗಿರುವುದು ಕಂಡುಬಂದಿದೆ.



- 2020ರಲ್ಲಿ ಸಂಭವಿಸಿದ ಅಪಘಾತದಲ್ಲಿ 418 ಪುರುಷರು, 75 ಮಂದಿ ಮಹಿಳೆಯರು ಮೃತಪಟ್ಟಿದ್ದಾರೆ. ಅದೇ ವರ್ಷ ಸ್ವಯಂ ಅಪಘಾತದಲ್ಲಿ (ನಿರ್ಲಕ್ಷ್ಯದ ಚಾಲನೆ) 162 ಪುರುಷರು ಹಾಗೂ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ.
- 2021ರಲ್ಲಿ ಸಂಭವಿಸಿದ ಅಪಘಾತಗಳಲ್ಲಿ 403 ಪುರುಷರು, 96 ಮಹಿಳೆಯರು ಮೃತಪಟ್ಟಿದ್ದಾರೆ. ಆ ವರ್ಷವೇ ಸ್ವಯಂ ಅಪಘಾತದಲ್ಲಿ 150 ಪುರುಷರು ಹಾಗೂ ಇಬ್ಬರು ಮಹಿಳೆಯರು ಸಾವನ್ನಪ್ಪಿದ್ದಾರೆ.
- 2022ರಲ್ಲಿ ಸಂಭವಿಸಿದ ಅಪಘಾತಗಳಲ್ಲಿ 493 ಪುರುಷರು, 102 ಮಹಿಳೆಯರು ಮೃತಪಟ್ಟಿದ್ದಾರೆ. ಆ ವರ್ಷವೇ ಸ್ವಯಂ ಅಪಘಾತದಲ್ಲಿ 172 ಪುರುಷರು, ಐವರು ಮಹಿಳೆಯರು ಮೃತಪಟ್ಟಿದ್ದಾರೆ.
- 2020ರಲ್ಲಿ ಬ್ಲಾಕ್‌ಸ್ಪಾಟ್‌ಗಳಲ್ಲಿ 162 ಮಂದಿ ಮೃತಪಟ್ಟಿದ್ದಾರೆ. 2021ರಲ್ಲಿ ಬ್ಲಾಕ್‌ಸ್ಪಾಟ್‌ಗಳಲ್ಲಿ 80 ಹಾಗೂ 2022ರಲ್ಲಿ 103 ಮಂದಿ ಮೃತಪಟ್ಟಿದ್ದಾರೆ.
- ಮೂರು ವರ್ಷದಲ್ಲಿ ನಾಲ್ವರು ಶಾಲಾ ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.



ಬೈಕ್‌ನಲ್ಲಿ ಹೆಲ್ಮೆಟ್ ಧರಿಸದೇ ಮೃತಪಟ್ಟ ಪ್ರಕರಣಗಳು

ಮೃತರ ವಿವರ	2020	2021	2022
ಸವಾರ	259	241	252
ಹಿಂಬದಿ ಸವಾರ	50	50	67

ಬಸ್‌ಗಳಿಂದ ಉಂಟಾದ ಅಪಘಾತದಲ್ಲಿ ಮೃತಪಟ್ಟವರು

ಸಂಸ್ಥೆ	2020	2021	2022
ಬಿಎಂಟಿಸಿ	27	27	33
ಕೆಎಸ್‌ಆರ್‌ಟಿಸಿ	8	7	15
ಖಾಸಗಿ ಬಸ್	9	12	21
ಒಟ್ಟು	44	46	69

ಯೋಜನೆಗೆ ಕೇಂದ್ರ ಏಕೆ ಅಡ್ಡಿಪಡಿಸಬೇಕು, ದ್ವೇಷ ರಾಜಕಾರಣ ಏಕೆ –ಬಿಜೆಪಿಗೆ ಸಿ.ಎಂ ಪ್ರಶ್ನೆ

‘ಬಿಜೆಪಿಯವರು ಒತ್ತಡ ಹೇರಿ ಅಕ್ಕಿ ಕೊಡಿಸಲಿ’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ‘ಬಿಜೆಪಿಯವರಿಗೆ ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇದ್ದರೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಅಕ್ಕಿ ಕೊಡಿಸುವ ಕೆಲಸ ಮಾಡಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ತಲಾ 5 ಕೆ.ಜಿ. ಅಕ್ಕಿ ನೀಡಿ ಉಳಿದ 5 ಕೆ.ಜಿ. ಅಕ್ಕಿಯ ದರವನ್ನು ಫಲಾನುಭವಿಗಳ ಖಾತೆಗೆ ಹಾಕಿ ಎಂದು ಬಿಜೆಪಿ ನಾಯಕರು ಸಲಹೆ ನೀಡುತ್ತಿದ್ದಾರೆ. ಅದರ ಬದಲು ಅವರೇ ಕೇಂದ್ರದ ಮೇಲೆ ಒತ್ತಡ ಹಾಕಲಿ. ಬಡವರ ಕಾರ್ಯಕ್ರಮದಲ್ಲಿ ರಾಜಕೀಯ ಬೇಡ. ಅಕ್ಕಿ ಕೊಡಿ ಎಂದು ಅವರು ಹೇಳಬೇಕಿತ್ತು. ಕೇಂದ್ರ ಸರ್ಕಾರವು ಈ ಯೋಜನೆಗೆ ಯಾಕೆ ಅಡ್ಡಿಪಡಿಸಬೇಕು. ದ್ವೇಷ ರಾಜಕಾರಣ ಯಾಕೆ ಮಾಡಬೇಕಿತ್ತು’ ಎಂದು ಪ್ರಶ್ನಿಸಿದರು.

‘ಭಾರತ ಆಹಾರ ನಿಗಮದ ಉಪಪ್ರಧಾನ ವ್ಯವಸ್ಥಾಪಕ ಹರೀಶ್ ಅವರನ್ನು ಕರೆಸಿ ನಾನೇ ಮಾತನಾಡಿದ್ದೆ. 7 ಲಕ್ಷ ಟನ್ ಅಕ್ಕಿ ಸಂಗ್ರಹ ಇದೆ. ಅಕ್ಕಿ ನೀಡುವುದಕ್ಕೇನು ಸಮಸ್ಯೆ ಇಲ್ಲ ಎಂದು ಅವರು ಹೇಳಿದ್ದರು’ ಎಂದು ಅವರು ತಿಳಿಸಿದರು.

‘2.28 ಲಕ್ಷ ಟನ್ ಅಕ್ಕಿ ನೀಡುವಂತೆ ನಾವು ಜೂನ್ 9ರಂದು ಆಹಾರ ನಿಗಮಕ್ಕೆ ಪತ್ರ ಬರೆದಿದ್ದೆವು. ಅಕ್ಕಿ ಪೂರೈಕೆ ಮಾಡಲಾಗುವುದು ಎಂದು ಜೂನ್ 12ರಂದು ಎಫ್‌ಸಿಐ ಅಧಿಕಾರಿಗಳು ಪತ್ರ ಬರೆದಿದ್ದರು. ಆನಂತರ ಅಕ್ಕಿ ನೀಡಬಾರದು ಎಂದು ಕೇಂದ್ರ ಗ್ರಾಹಕ ಇಲಾಖೆಯು ಆಹಾರ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿತ್ತು. ಅಕ್ಕಿ ಕೊಡುವುದಿಲ್ಲ ಎಂದು ನಿಗಮವು ನಮಗೆ ಜೂನ್ 14ಕ್ಕೆ ಪತ್ರ ಬರೆದಿತ್ತು’ ಎಂದು ವಿವರಿಸಿದರು.

‘ಹೆಚ್ಚುವರಿ ಅಕ್ಕಿ ಸಂಗ್ರಹಿಸಲು ಈಗ ಆಂಧ್ರ, ತೆಲಂಗಾಣ ರಾಜ್ಯಗಳ ಜೊತೆಗೂ ಮಾತನಾಡುತ್ತಿದ್ದೇವೆ. ಛತ್ತೀಸ್‌ಗಡದವರು 1.5 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದರ ದರವೂ ಹೆಚ್ಚು’ ಎಂದು ಮಾಹಿತಿ ನೀಡಿದರು.

‘ರಾಯಚೂರಿನಲ್ಲಿ ಸೋನಾ ಮಸೂರಿ ಅಕ್ಕಿ ಲಭ್ಯವಿದೆ. ಅದರ ದರ ಪ್ರತಿ ಕೆ.ಜಿ.ಗೆ ₹ 55 ಇದೆ. ಆಹಾರ ನಿಗಮದಿಂದ ಅಕ್ಕಿ ಖರೀದಿಸಿದರೆ ಪ್ರತಿ ಕೆ.ಜಿ.ಗೆ ₹ 34ರ ದರದಲ್ಲಿ ಸಿಗಲಿದ್ದು, ಸಾಗಣೆ ವೆಚ್ಚ ₹ 2.60 ಸೇರಿ ಪ್ರತಿ ಕೆ.ಜಿ.ಗೆ ₹ 36.60ಕ್ಕೆ ಅಕ್ಕಿ ಸಿಗುತ್ತಿತ್ತು. ಈಗ 5 ಕೆ.ಜಿ. ಅಕ್ಕಿ ನೀಡುತ್ತಿರುವುದೂ ಅದೇ ದರದಲ್ಲಿ. ₹ 55 ನೀಡಿ ಖರೀದಿ ಮಾಡಲು ಆಗುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಒಂದು ಗ್ರಾಂ ಅಕ್ಕಿ ಕಡಿಮೆ ಕೊಟ್ಟರೂ ಜನ ಸುಮ್ಮನಿರಲ್ಲ: ಬಿಎಸ್‌ವೈ

ಯಡಿಯೂರಪ್ಪ

ಶಿವಮೊಗ್ಗ: ‘ಚುನಾವಣೆಗೆ ಮೊದಲು 10 ಕೆ.ಜಿ ಅಕ್ಕಿ ಕೊಡುತ್ತೇವೆ ಎಂದು ಕಾಂಗ್ರೆಸ್ ನಾಯಕರು ಭರವಸೆ ನೀಡಿದ್ದರು. ಅದರಂತೆ ಅಷ್ಟೂ ಪ್ರಮಾಣದಲ್ಲಿ ಅಕ್ಕಿ ವಿತರಿಸಬೇಕು. ಒಂದು ಗ್ರಾಂ ಕಡಿಮೆಯಾದರೂ ರಾಜ್ಯದ ಜನ ಒಪ್ಪುವುದಿಲ್ಲ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

‘ಅಕ್ಕಿ ಕೊಡುವ ಗ್ಯಾರಂಟಿ ಅನುಷ್ಠಾನದ ವಿಚಾರದಲ್ಲಿ ಕೇಂದ್ರದ ಕಡೆ ಕೈ ತೋರಿಸುತ್ತಾ ಕಾಂಗ್ರೆಸ್ ಸರ್ಕಾರ ಸುಖಾಸುಮ್ಮನೆ ಗೊಂದಲ ಸೃಷ್ಟಿಸುತ್ತಿದೆ’ ಎಂದು ಅವರು ಸುದ್ದಿಗಾರರೆದುರು ಆಕ್ರೋಶ ವ್ಯಕ್ತಪಡಿಸಿದರು.

‘ರಾಜ್ಯದ ಜನರಿಗೆ ಪಡಿತರ ವ್ಯವಸ್ಥೆ ಮೂಲಕ ಈಗಾಗಲೇ ಕೇಂದ್ರ ಸರ್ಕಾರ ಉಚಿತವಾಗಿ 5 ಕೆ.ಜಿ ಅಕ್ಕಿ ಕೊಡುತ್ತಿದೆ. ಜೊತೆಗೆ 10 ಕೆ.ಜಿ ಸೇರಿಸಿ ಒಟ್ಟು 15 ಕೆ.ಜಿ ಅಕ್ಕಿಯನ್ನು ರಾಜ್ಯ ಸರ್ಕಾರ ವಿತರಿಸಬೇಕಿದೆ. ಹೆಚ್ಚುವರಿ ಅಕ್ಕಿ ಕೊಡಲು ಕೇಂದ್ರ ಸರ್ಕಾರ ಹಿಂದೆಯೂ ಒಪ್ಪಿರಲಿಲ್ಲ. ಆದರೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಈ ವಿಚಾರದಲ್ಲಿ ವಿನಾಕಾರಣ ಗೊಂದಲ ಉಂಟು ಮಾಡುತ್ತಿದ್ದಾರೆ. ಆ ಅಕ್ಕಿ ಹೊಂದಿಸಿಕೊಳ್ಳುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಎಲ್ಲಿಯಾದರೂ ಖರೀದಿಸಿ ತಂದು ಕೊಡಲಿ’ ಎಂದು ಸವಾಲೆಸೆದರು.

‘ಹಿಂಬಾಕಿಯಿಂದ ಬಿಲ್ ಹೆಚ್ಚಳ’

‘ಎರಡು ತಿಂಗಳ ಹೆಚ್ಚುವರಿ ದರ ಸೇರಿ ಒಂದೇ ಬಿಲ್ ಬಂದಿದ್ದರಿಂದ ಈ ತಿಂಗಳು ವಿದ್ಯುತ್ ಬಿಲ್ ಬಹಳ ಹೆಚ್ಚಾಗಿರುವುದು ಕಂಡಿದೆ. ಮುಂದಿನ ತಿಂಗಳಿನಿಂದ ಒಂದೇ ತಿಂಗಳ ಬಿಲ್ ಬರುವುದರಿಂದ ಎಲ್ಲವೂ ಸರಿಯಾಗಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪ್ರತಿಭಟನೆ ನಡೆಸಲು ತೀರ್ಮಾನಿಸಿರುವ ಎಫ್‌ಕೆಸಿಸಿಐಯವರ ಜೊತೆಗೆ ಇಂಧನ ಸಚಿವರು ಮಾತನಾಡಿ ಮನವೊಲಿಸಲಿದ್ದಾರೆ ಎಂದು ಹೇಳಿದರು.

‘ಜನ ಪಾಠ ಕಲಿಸಿದರೂ ಬಿಜೆಪಿಗೆ ಬುದ್ಧಿ ಬಂದಿಲ್ಲ’


ಎಚ್‌.ಕೆ.ಪಾಟೀಲ

ಗದಗ: ‘ಚುನಾವಣೆಯಲ್ಲಿ ಜನ ಪಾಠ ಕಲಿಸಿದರೂ ಬಿಜೆಪಿಯವರಿಗೆ ಬುದ್ಧಿ ಬಂದಿಲ್ಲ. ಜನಪರ ಕಾರ್ಯಕ್ರಮಗಳ ಕುತ್ತಿಗೆ ಹಿಸುಕುವ ಕೆಲಸ ಮಾಡಿದರೆ ನೆಟ್ಟಗಾಗಲ್ಲ’ ಎಂದು ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಎಚ್ಚರಿಸಿದರು.

ನಗರದಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ‘ರಾಜ್ಯ ಸರ್ಕಾರ ಜೂನ್ 12ರಂದು ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾದ ಭಾರತೀಯ ಆಹಾರ ನಿಗಮಕ್ಕೆ (ಎಫ್‌ಸಿಐ) ಪತ್ರ ಬರೆದಿತ್ತು. ಬೇಡಿಕೆಯಷ್ಟು ಅಕ್ಕಿ ಕೊಡುವುದಾಗಿ ಎಫ್‌ಸಿಐ ಭರವಸೆ ನೀಡಿತ್ತು. ಅಲ್ಲಿನ ಮುಖ್ಯಸ್ಥರ ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಮಾತನಾಡಿದ್ದರು. ಇನ್ನೇನು ಪ್ರಕ್ರಿಯೆ ಆರಂಭಿಸಬೇಕು ಎನ್ನುವಷ್ಟರಲ್ಲಿ 13ರಂದು ಪತ್ರ ಬರೆದು ಈಶಾನ್ಯ ರಾಜ್ಯ ಹೊರತುಪಡಿಸಿ, ಬೇರೆ ರಾಜ್ಯಗಳಿಗೆ ಅಕ್ಕಿ ಕೊಡಲ್ಲ ಎಂದು ತಿಳಿಸಿದೆ’ ಎಂದು ಕಿಡಿಕಾರಿದರು.

‘ನಾವೇನು ಉಚಿತವಾಗಿ ಅಕ್ಕಿ ಕೇಳಿಲ್ಲ. ನಮಗೆ ಸಾಂವಿಧಾನಿಕ ಹಕ್ಕಿದೆ. ರಾಜ್ಯದ ಸಂಪತ್ತಿನಿಂದ ಹಣ ಖರ್ಚು ಮಾಡುತ್ತೇವೆ. ಆದರೆ, ರಾಜ್ಯಗಳಿಗೆ ಕೊಡಬೇಡಿ; ಖಾಸಗಿಯವರಿಗೆ ಮಾರಾಟ ಮಾಡಿ ಅಂತಿದ್ದಾರೆ’ ಎಂದು ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪುಕ್ಕಟೆ ಅಕ್ಕಿ ಕೇಳಿರಲಿಲ್ಲ: ಎಂ.ಬಿ. ಪಾಟೀಲ

ಎಂ.ಬಿ.ಪಾಟೀಲ

ಬೆಂಗಳೂರು: ಬಡವರಿಗೆ ಅನ್ನಭಾಗ್ಯ ಯೋಜನೆಯಡಿ ವಿತರಿಸಲು ಕೇಂದ್ರ ಸರ್ಕಾರದಿಂದ ಪುಕ್ಕಟೆಯಾಗಿ ಅಕ್ಕಿ ಕೇಳಿರಲಿಲ್ಲ. ಆದರೆ, ಈ ವಿಚಾರದಲ್ಲೂ ಕೇಂದ್ರದ ಬಿಜೆಪಿ ಸರ್ಕಾರ ರಾಜಕೀಯ ಮಾಡುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ರಾಜ್ಯ ಸರ್ಕಾರ ಭಾರತ ಆಹಾರ ನಿಗಮದಿಂದ (ಎಫ್‌ಸಿಐ) ಅಗತ್ಯ ಪ್ರಮಾಣದ ಅಕ್ಕಿಯನ್ನು ಖರೀದಿಸಲು ಬೇಡಿಕೆ ಸಲ್ಲಿಸಿತ್ತು. ಎಫ್‌ಸಿಐ ಮೊದಲು ಒಪ್ಪಿದ್ದು, ನಂತರ ಹಿಂದೆ ಸರಿಯಿತು. ಯೋಜನೆಗೂ ಅಡ್ಡಗಾಲು ಹಾಕುವ ಮೂಲಕ ಬಿಜೆಪಿ ತನ್ನ ಬಡವರ ವಿರೋಧಿ ಧೋರಣೆಯನ್ನು ಪ್ರದರ್ಶಿಸಿದೆ. ಬಿಜೆಪಿಯ ಸಣ್ಣತನ ಈಗ ಬಯಲಿಗೆ ಬಂದಿದೆ’ ಎಂದರು.

ಅನ್ನಭಾಗ್ಯ ಯೋಜನೆ ಕುರಿತು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ರಾಜ್ಯದಿಂದ ಬಿಜೆಪಿಯ 25 ಸಂಸದರು ಆಯ್ಕೆಯಾಗಿದ್ದಾರೆ. ಅವರೆಲ್ಲರೂ ಈಗ ರಾಜ್ಯದ ಪರ ಧ್ವನಿ ಎತ್ತಬೇಕು ಎಂದು ಹೇಳಿದರು.

ಅಕ್ಕಿಗೆ ಸಾಮಾನ್ಯ ನೀತಿ; ಸದಾನಂದಗೌಡ

ಸದಾನಂದಗೌಡ

ಕುಶಾಲನಗರ (ಕೊಡಗು ಜಿಲ್ಲೆ): ‘ಮಳೆ ಕಡಿಮೆಯಾಗಿ ಬೆಳೆ ಸರಿಯಾಗಿ ಬಂದಿಲ್ಲ, ಹೀಗಾಗಿ ದೇಶದಲ್ಲಿ ಅಕ್ಕಿ ಕೊರತೆ ಉಂಟಾಗದಂತೆ ತಡೆಯುವ ಉದ್ದೇಶದಿಂದ ರಾಜ್ಯಗಳಿಗೆ ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ವಿತರಣೆ ಸ್ಥಗಿತಗೊಳಿಸುವ ಸಾಮಾನ್ಯ ನೀತಿಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ’ ಎಂದು ಸಂಸದ ಡಿ.ವಿ.ಸದಾನಂದಗೌಡ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇದು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂಥದ್ದು ಅಥವಾ ಇಲ್ಲಿ ಹೊಸ ಸರ್ಕಾರ ಬಂದ ಮೇಲೆ ರೂಪಿಸಿದ ನೀತಿಯಲ್ಲ. ಕಾಂಗ್ರೆಸ್ ಸರ್ಕಾರ ರಚನೆಗೆ ಮುನ್ನವೇ ಕೇಂದ್ರ ಈ ನೀತಿಯನ್ನು ಜಾರಿಗೆ ತಂದಿದೆ. ಇದರಲ್ಲಿ ರಾಜಕೀಯ ದುರುದ್ದೇಶ ಇಲ್ಲ’ ಎಂದರು.

‘ಕಾಂಗ್ರೆಸ್ ಸರ್ಕಾರವು ಪಂಜಾಬ್, ಉತ್ತರ ಪ್ರದೇಶ, ತೆಲಂಗಾಣ ರಾಜ್ಯಗಳಲ್ಲಿ ಅಕ್ಕಿ ಖರೀದಿಸಿ ಉಚಿತವಾಗಿ ನೀಡಲಿ. ಅದು ಅವರಿಗೆ ಬಿಟ್ಟ ವಿಚಾರ. ಆದರೆ, ಈಗ ಅವರಿಗ ಸಂಪನ್ಮೂಲ ಕ್ರೋಢೀಕರಣ ಮಾಡಿ ಅಕ್ಕಿ ಖರೀದಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ, ಕೇಂದ್ರದ ಕಡೆಗೆ ಬೊಟ್ಟು ಮಾಡುತ್ತಿದ್ದಾರೆ’ ಎಂದು ದೂರಿದರು.

ಸುದ್ದಿ 2 ನಿಮಿಷ

ನೀರು ಕೊಡದ ಸರ್ಕಾರದಿಂದ ಏನು ಪ್ರಯೋಜನ?: ಬೊಮ್ಮಾಯಿ

ಹುಬ್ಬಳ್ಳಿ: ‘ರಾಜ್ಯದ 500 ಗ್ರಾಮಗಳಲ್ಲಿ ನೀರಿನ ಸಮಸ್ಯೆ ತಲೆದೋರಿದ್ದು, ನೀರು ಕೊಡಲಾಗದ ಸರ್ಕಾರ ಇದ್ದರೆ ಏನು ಪ್ರಯೋಜನ?’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಸರ್ಕಾರದ ವಿರುದ್ಧ ಹರಿಹಾಯ್ದರು.

‘ನೀರಿನ ಸಮಸ್ಯೆ ಬಗ್ಗೆ ಕಳೆದ ವಾರ ಮುಖ್ಯಮಂತ್ರಿ ಗಮನಕ್ಕೆ ತಂದಿದ್ದೇನೆ. ರಾಜ್ಯದಲ್ಲಿ ಬರಗಾಲದ ಮುನ್ಸೂಚನೆ ಕಾಣುತ್ತಿದ್ದು, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಹುಬ್ಬಳ್ಳಿ ತಾಲ್ಲೂಕಿನ ಛಬ್ಬಿ ಗ್ರಾಮದಲ್ಲಿ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಜಿಲ್ಲಾಧಿಕಾರಿಗಳ ಜತೆ ಕೇವಲ ವಿಡಿಯೊ ಕಾನ್ಫರೆನ್ಸ್ ಮಾಡಿ ಮುಖ್ಯಮಂತ್ರಿ ಸುಮ್ಮನಾಗಿದ್ದಾರೆ. ತೊಂದರೆ ಇರುವಲ್ಲಿ ಟಾಸ್ಕ್‌ಫೋರ್ಸ್ ರಚನೆ ಮಾಡಿ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಸರ್ಕಾರ ನಿರಂತರವಾಗಿ ವಿದ್ಯುತ್ ಸರಬರಾಜು ಕೂಡ ಮಾಡಬೇಕು. ಇಲ್ಲದಿದ್ದರೆ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಲಿದೆ’ ಎಂದು ಹೇಳಿದರು.

‘ಅಕ್ಕಿ ವಿಷಯವಾಗಿ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು. ಇದು ಕಾಂಗ್ರೆಸ್ ಸರ್ಕಾರ ‘ಗ್ಯಾರಂಟಿ’ಯಿಂದ ಹಿಂದೆ ಸರಿದಂತೆ ಅರ್ಥ’ ಎಂದು ಟೀಕಿಸಿದರು.

‘ರಾಜ್ಯದ ರೈತರು ಅಕ್ಕಿ ಕೊಡಲು ಮುಂದೆ ಬಂದರೆ ಅದನ್ನು ಖರೀದಿಸಬೇಕು. ಬಿಜೆಪಿಯವರೇ ಕೇಂದ್ರದಿಂದ ಅಕ್ಕಿ ಕೊಡಿಸಬೇಕು ಎನ್ನುವುದು ಸರಿಯಲ್ಲ. ಒಂದನೇ ತಾರೀಖಿಗೆ ಅಕ್ಕಿ ಕೊಡದಿದ್ದರೆ, ಪ್ರತಿಭಟನೆ ಮಾಡುತ್ತೇವೆ’ ಎಂದರು.

‘ಅಧಿವೇಶನಕ್ಕೂ ಮುನ್ನ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ವಂದೇ ಭಾರತ್ ರೈಲು ಪ್ರಾಯೋಗಿಕ ಸಂಚಾರ ಇಂದು

ಬೆಂಗಳೂರು: ಬೆಂಗಳೂರು–ಧಾರವಾಡ ಮಧ್ಯೆ ‘ವಂದೇ ಭಾರತ್’ ಇಂಟರ್‌ಸಿಟಿ ಸೆಮಿ ಹೈಸ್ಪೀಡ್ ರೈಲು ಜೂನ್ 19ರಂದು ಪ್ರಾಯೋಗಿಕ ಸಂಚಾರ ನಡೆಸಲಿದೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಬೆಳಿಗ್ಗೆ 5.45ಕ್ಕೆ ಹೊರಡಲಿದೆ. 5.55ಕ್ಕೆ ಯಶವಂತಪುರ, 9.58ಕ್ಕೆ ದಾವಣಗೆರೆ, 12.10ಕ್ಕೆ ಹುಬ್ಬಳ್ಳಿಗೆ ಬಂದು 12.40ಕ್ಕೆ ಧಾರವಾಡಕ್ಕೆ ತಲುಪಲಿದೆ. ಮಧ್ಯಾಹ್ನ 1.15ಕ್ಕೆ ಧಾರವಾಡದಿಂದ ಹೊರಡಲಿದೆ. 1.35ಕ್ಕೆ ಹುಬ್ಬಳ್ಳಿಗೆ, 3.48ಕ್ಕೆ ದಾವಣಗೆರೆಗೆ, ರಾತ್ರಿ 7.45ಕ್ಕೆ ಯಶವಂತಪುರಕ್ಕೆ ಬಂದು ರಾತ್ರಿ 8.10ಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ತಲುಪಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಜೆಇಇ ಅಡ್ವಾನ್ಸ್ಡ್ ಪರೀಕ್ಷೆ ಉಜ್ವಲ್ ರಾಜ್ಯಕ್ಕೆ ಪ್ರಥಮ

ಪ್ರಜಾವಾಣಿ ವಾರ್ತೆ

ಉಜ್ವಲ್ ಎಲ್. ಶಂಕರ್

ಬೆಂಗಳೂರು: ಜೆಇಇಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಬೆಂಗಳೂರು ಸಹಕಾರ ನಗರದ ಉಜ್ವಲ್ ಎಲ್. ಶಂಕರ್, ರಾಷ್ಟ್ರ ಮಟ್ಟದಲ್ಲಿ 11ನೇ ರ‍್ಯಾಂಕ್ ಪಡೆದಿದ್ದು, ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ಸಹಕಾರ ನಗರದ ವೈದ್ಯ ದಂಪತಿ ಡಾ.ಲತಾ– ಡಾ. ಉಮಾಶಂಕರ್ ಅವರ ಮಗನಾದ ಉಜ್ವಲ್ ಸಿಇಟಿಯಲ್ಲಿಯೂ ರಾಜ್ಯಕ್ಕೆ 7ನೇ ರ‍್ಯಾಂಕ್ ಗಳಿಸಿದ್ದರು. ನಾರಾಯಣ ಒಲಿಂಪಿಯಾಡ್ ಸ್ಕೂಲ್‌ನಲ್ಲಿ ಸಿಬಿಎಸ್‌ಇ ಪ್ಲಸ್1, ಪ್ಲಸ್ 2 ಮಾಡಿರುವ ಉಜ್ವಲ್ ಬ್ಯಾಸ್ಕೆಟ್‌ಬಾಲ್ ಸಹಿತ ಹಲವು ಕ್ರೀಡೆಗಳಲ್ಲಿ ಭಾಗವಹಿಸಿ ಬಹುಮಾನ ಕೂಡ ಪಡೆದಿದ್ದರು. ಕಂಪ್ಯೂಟರ್, ಆರೋಗ್ಯ, ಪರಿಸರ, ಏರೋನಾಟಿಕ್ಸ್, ಬಾಹ್ಯಾಕಾಶ ಮತ್ತು ಎಲೆಕ್ಟ್ರಿಕ್ ವಾಹನಗಳ ಬಗ್ಗೆ ವಿಶೇಷ ಆಸಕ್ತಿಯನ್ನು ಹೊಂದಿದ್ದಾರೆ.

‘ರಾಜ್ಯಕ್ಕೆ ಮಾತ್ರವಲ್ಲ ಐಐಟಿ ಮುಂಬಯಿ ವಲಯಕ್ಕೂ ಪ್ರಥಮ ಸ್ಥಾನ ಪಡೆದಿದ್ದೇನೆ. ಮುಂಬಯಿ ಐಐಟಿಯಲ್ಲಿ ಕಂಪ್ಯೂಟರ್ ಸೈನ್ ಮಾಡಬೇಕು. ಉದ್ಯಮಿಯಾಗಬೇಕು ಎಂಬ ಗುರಿ ಇಟ್ಟುಕೊಂಡಿದ್ದೇನೆ’ ಎಂದು ಉಜ್ವಲ್ ಎಲ್. ಶಂಕರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಪಂಚಾಯಿತಿಗೆ ಮುತ್ತಿಗೆ, ಪಿಡಿಒ ಮೇಲೆ ಹಲ್ಲೆ

ಒಂದನೇ ಪುಟದಿಂದ

‘ಬೇಸಿಗೆಯಲ್ಲಿ ತಾಂಡಾದ ಜನ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದೇವೆ. ನಿತ್ಯ 2–3 ಕಿ.ಮೀ. ನಡೆದುಕೊಂಡು ಹೋಗಿ ನೀರು ತರುತ್ತಿದ್ದರೂ ಪಂಚಾಯಿತಿಯವರು ಕನಿಕರ ತೋರುತ್ತಿಲ್ಲ. ಪ್ರತಿಭಟನೆ ಮಾಡಲು ಬಂದ ನಮಗೆ ಪಿಡಿಒ ಬೆದರಿಕೆ ಹಾಕಿದ್ದಾರೆ’ ಎಂದು ತಾಂಡಾದ ಮಹಿಳೆಯರು ದೂರಿದರು.

‘ಘಾಮಾ ತಾಂಡಾಕ್ಕೆ ಬಾವಿಯಿಂದ ಪೈಪ್‌ಲೈನ್ ಮಾಡಿ ಕುಡಿಯಲು ನೀರು ಪೂರೈಸಿದ್ದೇವೆ. ಆದರೆ, ತಾಂಡಾ ನಿವಾಸಿಗಳೇ ಪದೇ ಪದೇ ಆ ಪೈಪ್ ಒಡೆದು ಹಾಕುತ್ತಿದ್ದಾರೆ. ಇದರಿಂದ ಸಮಸ್ಯೆಯಾಗುತ್ತಿದೆ. ಕೆಲವರು ನನ್ನ ಮೇಲೆ ಹಲ್ಲೆ ನಡೆಸಿದರು. ನಾನು ಪೊಲೀಸರಿಗೂ ದೂರು ನೀಡಿದ್ದೇನೆ’ ಎಂದು ಪಿಡಿಒ ಶ್ವೇತಾ ತಿಳಿಸಿದರು.

‘ಬಿಜೆಪಿ ಮೀಸಲಾತಿಗೆ ಮರುಳಾಗಬೇಡಿ’

ಪ್ರಸನ್ನಾನಂದ ಸ್ವಾಮೀಜಿಗೆ ಸಚಿವ ಸತೀಶ ಜಾರಕಿಹೊಳಿ ಸಲಹೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಬಿಜೆಪಿಯು ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಿಸಿದೆ ಎಂದು ಮರುಳಾಗಬೇಡಿ. ಅವರು (ಬಿಜೆಪಿಯವರು) ನಮ್ಮ ಸಮುದಾಯದ ಮೇಲಿನ ಪ್ರೀತಿಯಿಂದ ಮೀಸಲಾತಿ ಹೆಚ್ಚಿಸಿಲ್ಲ. ಚುನಾವಣೆಯಲ್ಲಿ ಸಮುದಾಯ ಕೈಕೊಡಬಹುದು ಎಂಬ ಭಯದಲ್ಲಿ ಹೆಚ್ಚಿಸಿದ್ದಾರೆ’ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಜಿಲ್ಲೆಯ ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಪರಿಶಿಷ್ಟ ಪಂಗಡದ ಸಚಿವರು, ಶಾಸಕರಿಗೆ ಭಾನುವಾರ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದರು.

‘ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ನೀವು ಕೈಗೊಂಡಿದ್ದ 274 ದಿನ ನಡೆಸಿದ ಧರಣಿಗೆ ಹೆದರಿ ಬಿಜೆಪಿ ಮೀಸಲಾತಿ ಹೆಚ್ಚಿಸಿದೆ. ನೀವು ಬಿಜೆಪಿಯವರು ಬಂದಾಗ ಅವರ ಪರ. ನಾವು ಬಂದಾಗ ನಮ್ಮ ಪರ ಇರಬಾರದು. ಬಿಜೆಪಿಯ ನಾಲ್ಕೈದು ಜನರ ಮೇಲೆ ಮಾತ್ರ ವಿಶ್ವಾಸವಿಡಿ. ಎಲ್ಲರನ್ನೂ ನಂಬಬೇಡಿ’ ಎಂದು ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿಗೆ ಸಲಹೆ ನೀಡಿದರು.

‘ಸಿದ್ದರಾಮಯ್ಯ ಅವರು ಎರಡೂವರೆ ವರ್ಷದ ಅವಧಿಗೆ ಮಾತ್ರ ಮುಖ್ಯಮಂತ್ರಿಯಾಗಿ ಇರಲಿದ್ದಾರೆ ಎಂದು ಯಾರೂ ಹೇಳಿಲ್ಲ. ಐದು ವರ್ಷಗಳವರೆಗೆ ಅವರೇ ಮುಂದುವರಿಯುತ್ತಾರೆ ಎನ್ನುವ ವಿಶ್ವಾಸವಿದೆ. ಈ ಕುರಿತು ಪಕ್ಷ ಅಂತಿಮವಾಗಿ ನಿರ್ಧರಿಸಲಿದೆ’ ಎಂದು ಹೇಳಿದರು.

ಹರಿಹರ ತಾಲ್ಲೂಕಿನ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಭಾನುವಾರ ಸಮುದಾಯದ ಸಚಿವರು, ಶಾಸಕರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಪೀಠದ ಪ್ರಸನ್ನಾನಂದ ಸ್ವಾಮೀಜಿ ಸನ್ಮಾನಿಸಿದರು. ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ, ಬಳ್ಳಾರಿ ಸಂಸದ ವೈ. ದೇವೇಂದ್ರಪ್ಪ, ಸಚಿವರಾದ ಕೆ.ಎನ್‌. ರಾಜಣ್ಣ, ಬಿ.ನಾಗೇಂದ್ರ ಜಗಳೂರು ಶಾಸಕ ಬಿ. ದೇವೇಂದ್ರಪ್ಪ, ಮಾಯಕೊಂಡ ಶಾಸಕ ಕೆ.ಎಸ್‌. ಬಸವಂತಪ್ಪ ಪಾಲ್ಗೊಂಡಿದ್ದರು.

ಸುದೀಪ್ ನಡೆಯಿಂದ ನೋವು: ‘ಸಮುದಾಯದವರೇ ಆಗಿರುವ ನಟ ಕಿಚ್ಚ ಸುದೀಪ್ ಅವರು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ವಿರುದ್ಧವೇ ವಿಧಾನಸಭೆ ಚುನಾವಣೆಯಲ್ಲಿ ಪ್ರಚಾರ ಮಾಡಿದರು. ಸಾಮಾನ್ಯ ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದ್ದರೆ ಏನೂ ಅನ್ನಿಸುತ್ತಿರಲಿಲ್ಲ. ಎಸ್‌.ಟಿ. ಮೀಸಲು ಕ್ಷೇತ್ರದಲ್ಲಿ ಪ್ರಚಾರ ಮಾಡಿದ್ದು, ನೋವು ತಂದಿದೆ’ ಎಂದು ಸಚಿವ ಕೆ.ಎನ್. ರಾಜಣ್ಣ ಅಭಿಪ್ರಾಯಪಟ್ಟರು.

‘ಸಮುದಾಯಕ್ಕೆ ಮೀಸಲಿರುವ ಕ್ಷೇತ್ರದಲ್ಲಿ ಸ್ಪರ್ಧಿಸಿದವರೆಲ್ಲಾ ಪರಿಶಿಷ್ಟ ಪಂಗಡದವರೇ. ಆದರೂ ಅವರ ವಿರುದ್ಧ ಅವರು ಪ್ರಚಾರಕ್ಕೆ ಇಳಿದಿದ್ದು ವಿಪರ್ಯಾಸ. ಇದು ಸುದೀಪ್ ಅವರ ಭವಿಷ್ಯಕ್ಕೆ ಕುತ್ತು ತರಬಹುದು. ಅವರಿಗೆ ಅನುಭವ ಕಡಿಮೆ ಇದೆ. ಶ್ರೇಷ್ಠ ನಟನಾಗಲು ಅವಕಾಶವಿದೆ. ಅದನ್ನು ಅರಿತು ಮುಂದುವರೆಯಬೇಕು’ ಎಂದು ಸಲಹೆ ನೀಡಿದರು.

ಕೇಂದ್ರಕ್ಕೆ ಪತ್ರ ಬರೆಯಲು ಆಗ್ರಹ

‘ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ವಾಲ್ಮೀಕಿ ಸಮುದಾಯಕ್ಕೆ ಶೇ 7.5ರಷ್ಟು ಮೀಸಲಾತಿ ಹೆಚ್ಚಳ ಮಾಡಲು ಒಪ್ಪಿಗೆ ಸೂಚಿಸಿತ್ತು. ಈ ಕುರಿತ ನಿರ್ಧಾರ ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರ್ಪಡೆ ಆಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಬೇಕು’ ಎಂದು ಪ್ರಸನ್ನಾನಂದ ಸ್ವಾಮೀಜಿ ಆಗ್ರಹಿಸಿದರು.

‘ರಾಜ್ಯದಲ್ಲಿ ನಕಲಿ ಜಾತಿ ಪ್ರಮಾಣ ಪ್ರಮಾಣ ಪತ್ರದ ಹಾವಳಿ ಹೆಚ್ಚಾಗಿದೆ. ಇದರ ಬಗ್ಗೆ ಗಮನಹರಿಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿ ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆ ಆಗಬೇಕು’ ಎಂದು ಆಗ್ರಹಿಸಿದರು.

ಮಳೆ ಕೊರತೆ: ಬರದ ಭೀತಿ?

ಒಂದನೇ ಪುಟದಿಂದ

ಉತ್ತಮ ಮಳೆ ನಿರೀಕ್ಷೆ: ‘ಈ ವಾರ ಉತ್ತಮ ಮಳೆ ಆಗಬಹುದು ಎಂಬ ನಿರೀಕ್ಷೆ ಇದೆ. ವಿಶೇಷವಾಗಿ ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಮುಂದಿನ ಒಂದು ವಾರದಲ್ಲಿ ಭಾರಿ ಪ್ರಮಾಣದಲ್ಲಿ ಅಂದರೆ, 150 ಮಿ.ಮೀ.ಗೂ ಹೆಚ್ಚು ಮಳೆಯಾಗಬೇಕು. ಆಗ ಪರಿಸ್ಥಿತಿ ಸುಧಾರಿಸಬಹುದು’ ಎನ್ನುತ್ತಾರೆ ಹವಾಮಾನ ತಜ್ಞ ಡಾ.ಜಿ.ಎಸ್. ಶ್ರೀನಿವಾಸ ರೆಡ್ಡಿ.

‘ಸಾಮಾನ್ಯವಾಗಿ ಜೂನ್ ಮೊದಲ ಮೂರು ವಾರಗಳಲ್ಲಿ ಸುಮಾರು 400 ಮಿ.ಮೀ ಮಳೆ ಆಗುತ್ತಿತ್ತು. ಈ ಬಾರಿ 85 ಮಿ.ಮೀ ಮಳೆ ಆಗಿದೆ. ಇದು ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುತ್ತದೆ’ ಎಂದು ಹೇಳಿದರು.

‘ಮಳೆ ಆರಂಭವಾಗದ ಕಾರಣ ಮುಂಗಾರು ಹಂಗಾಮಿನ ಬಿತ್ತನೆ ಚಟುವಟಿಕೆ ಸರಿಯಾಗಿ ಆಗಿಲ್ಲ. ಬಹುತೇಕ ಜಿಲ್ಲೆಗಳಲ್ಲಿ ಬಿತ್ತನೆ ಕಾರ್ಯವೇ ಆರಂಭವಾಗಿಲ್ಲ. ಕೆಲವು ಕಡೆಗಳಲ್ಲಿ ಶೇ 6ರಿಂದ ಶೇ 7ರಷ್ಟು ಬಿತ್ತನೆ ಆಗಿದೆ. ಕೆಲವು ಜಿಲ್ಲೆಗಳಲ್ಲಿ ಶೂನ್ಯ. ಭಾನುವಾರ ಕೆಲವು ಕಡೆ ಮಳೆ ಆಗಿದೆ. ಬಿತ್ತನೆ ಮತ್ತು ಮಳೆ ಕೊರತೆ ಕುರಿತು ಸೋಮವಾರ ಮಾಹಿತಿ ತರಿಸಿಕೊಂಡು, ಪರಿಶೀಲಿಸುತ್ತೇನೆ’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ‘ಪ್ರಜಾವಾಣಿ’ಗೆ ತಿಳಿಸಿದರು.

ತೀವ್ರ ನಿಗಾ ಇರಿಸಲಾಗಿದೆ: ಪ್ರಿಯಾಂಕ್

‘ರಾಜ್ಯದ 3,029 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗಿದೆ. ಕೊರತೆ ಇರುವಲ್ಲಿ ತಕ್ಷಣವೇ ಟ್ಯಾಂಕರ್‌ಗಳು, ಖಾಸಗಿ ಕೊಳವೆ ಬಾವಿಗಳಿಂದ ನೀರು ಪೂರೈಸುವ ವ್ಯವಸ್ಥೆ ಮಾಡಲು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದ್ದೇವೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಲಾ ₹1 ಕೋಟಿ ನೀಡಿದ್ದು, ಸ್ಥಳೀಯ ಅಗತ್ಯವನ್ನು ಮನಗಂಡು, ಮೇಲಿನವರ ಆದೇಶಕ್ಕೆ ಕಾಯದೇ ಕುಡಿಯುವ ನೀರು ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದೇವೆ’ ಎಂದು ಹೇಳಿದರು.

ಜಲಾಶಯಗಳ ನೀರಿನ ಮಟ್ಟ ಕುಸಿತ

ಜಲಾಶಯ	ಸಂಗ್ರಹ ಸಾಮರ್ಥ್ಯ	ಈಗಿನ ಮಟ್ಟ	ಕಳೆದ ವರ್ಷದ ಮಟ್ಟ	ಶೇಕಡಾವಾರು ಕೊರತೆ
ಲಿಂಗನಮಕ್ಕಿ	151.75	12.12	18.21	8
ಸೂಪಾ	145.33	34.53	18.56	24
ವಾರಾಹಿ	31.10	2.18	1.78	7
ಹಾರಂಗಿ	8.50	2.58	6.24	30
ಹೇಮಾವತಿ	37.10	14.79	23.24	40
ಕೆ.ಆರ್.ಎಸ್	49.45	11.32	27.58	23
ಕಬಿನಿ	19.52	4.19	7.69	21
ಭದ್ರಾ	71.54	25.04	34.90	35
ತುಂಗಭದ್ರಾ	105.79	4.84	40.47	5
ಘಟಪ್ರಭಾ	52	4.17	8.14	8
ಮಲಪ್ರಭಾ	37.73	7.33	11.53	19
ಆಲಮಟ್ಟಿ	123.08	20.26	49.12	16
ನಾರಾಯಣಪುರ	33.31	15.02	26.85	45
ಒಟ್ಟು	865.20	158.37	274.58	18

(ಟಿಎಂಸಿ ಅಡಿಗಳಲ್ಲಿ - ಜೂನ್ 17ರ ಮಾಹಿತಿ)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಳಿಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ(ರೂ.ಗಳಲ್ಲಿ) / ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009					
1	ದಕ್ಷಿಣ–2	ಬೆಂಜಮಂ/ಕಾನಿಅ(ದ–2)/ತಾಂಅ/ಪಿಬಿ/172/ 2023–24 ದಿನಾಂಕ: 12.06.2023	ರೂ. 51,10,704/– / ರೂ. 1,02,300/–	03.07.2023ರ ಸಂಜೆ 4:00 ಗಂಟೆಯವರೆಗೆ	05.07.2023ರ ಸಂಜೆ 4:00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–2)					
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009					
1	ಪಶ್ಚಿಮ–2	ಬೆಂಜಮಂ/ಕಾನಿಅ(ಪ–2)/ಪಿಬಿ/270/ 2023–24 ದಿನಾಂಕ: 16.06.2023 (2ನೇ ಕರೆ)	ರೂ. 91,67,342/– / ರೂ. 1,83,400/–	27.06.2023ರ ಮಧ್ಯಾಹ್ನ 3:00 ಗಂಟೆಯವರೆಗೆ	30.06.2023ರ ಮಧ್ಯಾಹ್ನ 3:00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ–2)					
ಮುಖ್ಯ ಅಭಿಯಂತರರ ಕಛೇರಿ (ತ್ಯಾಜ್ಯನೀರು–ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009					
1	(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ಎಸ್‌ಟಿಪಿ)/ಕೆ&ಟಿ/ಸಅ/ 125/2023–24 ದಿನಾಂಕ: 15.06.2023 (2ನೇ ಕರೆ)	ರೂ. 25,13,348/– / ರೂ. 59,315/–	03.07.2023ರ ಸಂಜೆ 4:00 ಗಂಟೆಯವರೆಗೆ	04.07.2023ರ ಸಂಜೆ 4:05 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವ್ಯಾಲಿ					
2	(ತ್ಯಾನೀನಿ–ಎನ್)ಕೆ&ಟಿ ವ್ಯಾಲಿ	ಬೆಂಜಮಂ/ಇಡಬ್ಲ್ಯೂ(ಎನ್)ಕೆ&ಟಿ/ಪಿಬಿ/113/ 2023–24 ದಿನಾಂಕ: 16.06.2023	ರೂ. 61.75 ಲಕ್ಷಗಳು / ರೂ. 1.457 ಲಕ್ಷಗಳು	25.06.2023ರ ಸಂಜೆ 4:00 ಗಂಟೆಯವರೆಗೆ	26.06.2023ರ ಸಂಜೆ 4:00 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎನ್) ಕೆ&ಟಿ ವ್ಯಾಲಿ					
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ&ಗುಳ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009					
1	ಡಿಇ&ಪಿಎಸ್	ಬೆಂಜಮಂ/ಇಡಿಇಪಿಎಸ್‌ಟಿಇ/ಸಅ/157 2023–24 ದಿನಾಂಕ: 17.06.2023	ರೂ. 14,88,043/– / ರೂ. 29,761/–	26.06.2023ರ ಸಂಜೆ 4:00 ಗಂಟೆಯವರೆಗೆ	28..06.2023ರ ಬೆಳಿಗ್ಗೆ 10:30 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಡಿಇ&ಪಿಎಸ್)					
ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009					
1	ದಕ್ಷಿಣ–ಪೂರ್ವ –2	ಬೆಂಜಮಂ/ಕಾನಿಅ(ದಪೂ–2)ತಾಂಅ/ಪಿಬಿ/383/ 2023–24 ದಿನಾಂಕ: 16.06.2023 (2ನೇ ಕರೆ)	ರೂ. 18,54,061/– / ರೂ. 46,355/–	04.07.2023ರ ಸಂಜೆ 4:00 ಗಂಟೆಯವರೆಗೆ	06.07.2023ರ ಸಂಜೆ 4:30 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–ಪೂರ್ವ–2)					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜೆಎ/307/2023–24

ಅಶ್ಲೀಲ ವಿಡಿಯೊ: ಎಬಿವಿಪಿ ಮುಖಂಡ ಬಂಧನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಯುವತಿಯರ ಅಶ್ಲೀಲ ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸಂಘಟನೆಯ ತಾಲ್ಲೂಕು ಘಟಕದ ಅಧ್ಯಕ್ಷ ಪ್ರತೀಕ್ ಗೌಡನನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.


ಪ್ರತೀಕ್ ಗೌಡ

ಪ್ರತೀಕ್ ಗೌಡ ತೀರ್ಥಹಳ್ಳಿಯ ಕಾಲೇಜೊಂದರ ಬಿಸಿಎ ಅಂತಿಮ ವರ್ಷದ ವಿದ್ಯಾರ್ಥಿ. ಸಂಘಟನೆಯ ಸದಸ್ಯತ್ವ ನೀಡುವ ನೆಪದಲ್ಲಿ ಕಾಲೇಜು ವಿದ್ಯಾರ್ಥಿನಿಯರನ್ನು ಸಂಪರ್ಕಿಸಿದ್ದ. ಪ್ರೀತಿಯ ಹೆಸರಿನಲ್ಲಿ ಆಮಿಷ ಒಡ್ಡಿ ಯುವತಿಯರ ನಗ್ನಚಿತ್ರಗಳನ್ನು ಚಿತ್ರೀಕರಿಸಿ ನಂತರ ಹಣ ನೀಡುವಂತೆ ಬ್ಲ್ಯಾಕ್‌ಮೇಲ್ ಮಾಡಿದ್ದ. ಹಣ ನೀಡದಿದ್ದರೆ ವಿಡಿಯೊಗಳನ್ನು ಬಹಿರಂಗಪಡಿಸುವುದಾಗಿ ಯುವತಿಯರಿಗೆ ಬೆದರಿಕೆ ಒಡ್ಡಿದ್ದ. ವಿದ್ಯಾರ್ಥಿನಿಯರು ಹಣ ಕೊಡಲು ಒಪ್ಪದಿದ್ದಾಗ, ವಿಡಿಯೊಗಳನ್ನು ವಾಟ್ಸ್‌ಆ್ಯಪ್‌ನಲ್ಲಿ ಹರಿಬಿಟ್ಟಿದ್ದಾನೆ’ ಎಂಬ ಆರೋಪದೊಂದಿಗೆ ದೂರು ನೀಡಲಾಗಿದೆ.

ರಾಜ್ಯದ ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಕೊಪ್ಪಳದಲ್ಲಿ ಭಾನುವಾರ ಮಳೆಯಲ್ಲಿ ನೆನೆಯುತ್ತ ಮನೆಯತ್ತ ಹೊರಟ ಜನ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರ ಉತ್ತಮ ಮಳೆಯಾಗಿದ್ದು, ರೈತರಲ್ಲಿ ಮಂದಹಾಸ ಮೂಡಿಸಿದೆ.

ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ ನಸುಕಿನಿಂದಲೂ ಸುರಿದ ಮಳೆ ಮಧ್ಯಾಹ್ನದ ಬಳಿಕ ನಿಂತಿತ್ತು. ಬೆಳಗಾವಿ ಜಿಲ್ಲೆಯ ಯರಗಟ್ಟಿ, ಸವದತ್ತಿ ತಾಲ್ಲೂಕು ಹಾಗೂ ಹೊಸಪೇಟೆ ನಗರ, ಹಂಪಿ, ಕಮಲಾಪುರ ಭಾಗದಲ್ಲಿ ಸಾಧಾರಣ ಮಳೆ ಸುರಿಯಿತು.

ಕೊಪ್ಪಳ ನಗರವೂ ಸೇರಿದಂತೆ ಜಿಲ್ಲೆಯ ಹಲವು ಕಡೆ ಉತ್ತಮ ಮಳೆಯಾಗಿದೆ. ಮಧ್ಯಾಹ್ನ ಮೂರು ಗಂಟೆಗೆ ಆರಂಭವಾದ ಮಳೆ ರಾತ್ರಿ ತನಕ ಸುರಿಯಿತು.

ಗುಡುಗು ಸಹಿತ ಮಳೆ ಮುಂದುವರಿಕೆ: ರಾಜ್ಯದ ವಿವಿಧೆಡೆ ಸೋಮವಾರವೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಕರಾವಳಿ ಮತ್ತು ದಕ್ಷಿಣ ಒಳನಾಡಿನ ಕೆಲವೆಡೆ ಹಾಗೂ ಉತ್ತರ ಒಳನಾಡಿನ ಒಂದೆರಡು ಕಡೆ ಗುಡುಗು ಸಹಿತ ಮಳೆ ಆಗಬಹುದು. ಒಳನಾಡಿನಲ್ಲಿ ಗಾಳಿಯ ವೇಗವು ಗಂಟೆಗೆ 30–40 ಕಿ.ಮೀ. ತಲುಪಬಹುದು. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣವಿದ್ದು, ಸಂಜೆ ಅಥವಾ ರಾತ್ರಿ ಗುಡುಗು ಸಹಿತ ಮಳೆ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ತಪಸ್ ಯುಎವಿ: ಹೊಸ ಮೈಲಿಗಲ್ಲು

ಪ್ರಜಾವಾಣಿ ವಾರ್ತೆ

ಐಎನ್‌ಎಸ್ ಸುಭದ್ರಾ

ಚಿತ್ರದುರ್ಗ: ಸ್ವದೇಶಿ ನಿರ್ಮಿತ ‘ತಪಸ್’ ಮಾನವ ರಹಿತ ವಿಮಾನವು (ಯುಎವಿ) ಹೊಸ ಮೈಲಿಗಲ್ಲು ಸೃಷ್ಟಿಸಿದೆ.

ಯುಎವಿ ನಿಯಂತ್ರಣವನ್ನು ಭೂ ಮೇಲ್ಮೈನಿಂದ ಸಮುದ್ರದಲ್ಲಿನ ನೌಕೆಗೆ ವರ್ಗಾವಣೆ ಮಾಡುವ ಪ್ರಾಯೋಗಿಕ ಪರೀಕ್ಷೆ ಯಶಸ್ವಿಯಾಗಿದೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಟ್ವೀಟ್ ಮಾಡಿದೆ.

ಡಿಆರ್‌ಡಿಒ ಹಾಗೂ ಭಾರತೀಯ ನೌಕಾಪಡೆಗಳು ಜಂಟಿಯಾಗಿ ಈ ಕಾರ್ಯಕ್ರಮ ನಡೆಸಿವೆ. ಯುಎವಿ ಅನ್ನು ಸುಮಾರು 285 ಕಿಲೋ ಮೀಟರ್ ದೂರದಿಂದ ನಿಯಂತ್ರಿಸುವ ಸಾಮರ್ಥ್ಯಗಳನ್ನು ಪರೀಕ್ಷೆಗೆ ಒಳಪಡಿಸುವ ಉದ್ದೇಶ ಫಲ ನೀಡಿದೆ.

ಜೂನ್ 16ರಂದು ಈ ಪರೀಕ್ಷೆ ನಡೆದಿದೆ. ಚಿತ್ರದುರ್ಗದ ನಾಯಕನಹಟ್ಟಿ ಸಮೀಪದ ಏರೊನಾಟಿಕಲ್ ಟೆಸ್ಟ್ ರೇಂಜ್‌ನಿಂದ (ಎಟಿಆರ್) ತಪಸ್ ಯುಎವಿ ಹಾರಾಟ ಶುರು ಮಾಡಿತು. ಕಾರವಾರದ ನೌಕಾನೆಲೆಯಿಂದ 148 ಕಿಲೋ ಮೀಟರ್ ದೂರದಲ್ಲಿದ್ದ ಐಎನ್‌ಎಸ್ ಸುಭದ್ರ ನೌಕೆಯಿಂದ ಇದರ ಹಾರಾಟವನ್ನು ನಿಯಂತ್ರಿಸಲಾಯಿತು.

ಇದಕ್ಕಾಗಿ, ಒಂದು ಭೂನಿಯಂತ್ರಣ ಘಟಕ (ಜಿಸಿಎಸ್) ಹಾಗೂ ಎರಡು ಶಿಪ್ ಡೇಟಾ ಟರ್ಮಿನಲ್‌ಗಳನ್ನು (ಎಸ್‌ಡಿಟಿ) ಐಎನ್‌ಎಸ್ ಸುಭದ್ರಾ ನೌಕೆಯಲ್ಲಿ ಅಳವಡಿಸಲಾಗಿತ್ತು. ಸುಮಾರು 20,000 ಅಡಿ ಎತ್ತರದಲ್ಲಿ ತಪಸ್ ಹಾರಾಟ ನಡೆಸಿದೆ. 3.30 ಗಂಟೆಗಳ ಸಂಚಾರದ ಅವಧಿಯಲ್ಲಿ, ಸುಭದ್ರಾ ನೌಕೆಯಲ್ಲಿ ಅಳವಡಿಸಿದ್ದ ನಿಯಂತ್ರಣ ಉಪಕರಣಗಳ ಸಹಾಯದಿಂದ 40 ನಿಮಿಷ ತಪಸ್‌ನ ಹಾರಾಟ ನಿಯಂತ್ರಣ ಮಾಡಲಾಯಿತು.

KLE SOCIETY

Since 1916

Tyagaveer Sirasangi Lingaraj College Road, Belagavi

A Resplendent Legacy of 107+ years of Education, Healthcare and Research.

www.klesociety.org

300 Institutions | 1,38,000+ Students | 18,000+ Faculty | 4,000+ Healthcare Beds

KLE NEET WIZARDS PUT ON A DAZZLING SHOW

HEARTY *Congratulations*

NEET TOPPERS

AIR 1223 685
Prathamesh Patil
INTERNATIONAL SCHOOL, KUVEMPU NAGAR, BELAGAVI

AIR 163 705
Samruddhi B Desai
INDEPENDENT PU COLLEGE, BELAGAVI

AIR 1278 685
Shivani V Nadagouda
INDEPENDENT PU COLLEGE, BELAGAVI

AIR 1725 680 **Chayank Murtennavar** R. L. PU COLLEGE OF SCIENCE, BELAGAVI

AIR 2038 675 **N Yashwant Kumar** INDEPENDENT PU COLLEGE, BELAGAVI

AIR 2693 671 **Soubhagya Yaligar** R. L. PU COLLEGE OF SCIENCE BELAGAVI

AIR 3041 670 **Swaranchu Marennavar** R. L. PU COLLEGE OF SCIENCE BELAGAVI

AIR 3505 651 **Sharwani Panchaksharimath** INDEPENDENT PU COLLEGE, BELAGAVI

AIR 3521 650 **Krishna Murkute** R. L. PU COLLEGE OF SCIENCE BELAGAVI

AIR 7843 647 **Veeresh M Gejji** PU COLLEGE, BAILHONGAL

AIR 8166 646 **Sujan Dinesh** S. NIJALINGAPPA / INDEPENDENT PU COLLEGE,RAJAJINAGAR, BENGALURU



AIR 10846 637 **Srushti Halashetti** PRERANA RESIDENTIAL PU COLLEGE, HUBBALLI

AIR 11113 637 **Vishal K Bhat** INDEPENDENT PU COLLEGE, BELAGAVI

AIR 12124 635 **Sujay S Patil** PU COLLEGE, BAILHONGAL

AIR 13852 630 **Naveen R Bhandari** PRERANA PU COLLEGE, BVB CAMPUS, VIDYANAGAR,HUBBALLI

AIR 14180 630 **Yash Patil** R. L. PU COLLEGE OF SCIENCE BELAGAVI

AIR 19655 617 **Prasanna Kumbar** PRERANA RESIDENTIAL PU COLLEGE, HUBBALLI

AIR 30164 598 **Roshan B Nalawadad** INDEPENDENT PU COLLEGE, BELAGAVI

AIR 31838 595 **Manisha Shetty** S. NIJALINGAPPA / INDEPENDENT PU COLLEGE, RAJAJINAGAR, BENGALURU

AIR 34873 590 **Priyanka B Basarakod** PRERANA RESIDENTIAL PU COLLEGE, HUBBALLI

AIR 37392 586 **Siddaroodh Angur** PRERANA RESIDENTIAL PU COLLEGE, HUBBALLI

AIR 45260 575 **Shravani Hiremath** PRERANA RESIDENTIAL PU COLLEGE, HUBBALLI

AIR 47075 572 **Sanjana Gumaste** PRERANA RESIDENTIAL PU COLLEGE, HUBBALLI

AIR 47489 572 **Shraddha Patil** INDEPENDENT PU COLLEGE CHIKODI

AIR 49038 570 **Mandavi Singh** R. L. PU COLLEGE OF SCIENCE, BELAGAVI

AIR 50377 568 **Pratibha Magadum** BK PU COLLEGE, CHIKODI

AIR 50625 568 **Laxmi S Konnuri** INDEPENDENT PU COLLEGE CHIKODI



AIR 54211 563 **Amogh Nayak** INTERNATIONAL SCHOOL, KUVEMPU NAGAR, BELAGAVI

AIR 60516 555 **Disha Adakurkar** R. L. PU COLLEGE OF SCIENCE, BELAGAVI

AIR 62200 552 **Amit A Rajannavar** PU COLLEGE, BAILHONGAL

AIR 65692 548 **AVSS Vijaya Durga Prasad** KLE INDEPENDENT PU COLLEGE, BELAGAVI

AIR 67090 546 **Sohan S Patil** KLE INDEPENDENT PU COLLEGE, BELAGAVI

AIR 68544 545 **Pramod Gomadi** PRERANA RESIDENTIAL PU COLLEGE, HUBBALLI

AIR 70022 543 **Md. Iqbal H Nadaf** PRERANA PU COLLEGE, BVB CAMPUS, VIDYANAGAR, HUBBALLI

AIR 79619 531 **Pragnashri V** S. NIJALINGAPPA / INDEPENDENT PU COLLEGE, RAJAJINAGAR, BENGALURU



AIR 79737 531 **Rathan R Wagle** KLE INDEPENDENT PU COLLEGE, BELAGAVI

AIR 83071 527 **Areeja M Patel** KLE INDEPENDENT PU COLLEGE, BELAGAVI

AIR 83657 527 **M Eshana** PRERANA RESIDENTIAL PU COLLEGE, HUBBALLI

AIR 84247 526 **Shivaraj** PRERANA RESIDENTIAL PU COLLEGE, HUBBALLI

AIR 89484 520 **Mallikarjun V Heggalgi** PRERANA PU COLLEGE, BVB CAMPUS, VIDYANAGAR, HUBBALLI

AIR 90225 519 **Varsha Kumbar** INDEPENDENT PU COLLEGE, CHIKODI

AIR 91445 518 **Keerthana Adiga** INDEPENDENT PU COLLEGE, NAGARABHAVI, BENGALURU

AIR 91497 518 **Sanat Kadyagol** BK PU COLLEGE, CHIKODI

AIR 93773 516 **Aishwarya Kadapatti** PRERANA RESIDENTIAL PU COLLEGE, HUBBALLI

AIR 100037 509 **R Naganjali** PRERANA PU COLLEGE, BVB CAMPUS, VIDYANAGAR, HUBBALLI

AIR 101802 507 **Pradnya R Bubanale** INDEPENDENT PU COLLEGE, CHIKODI

AIR 105483 503 **Zainab Dharwad** PC JABIN PU COLLEGE, HUBBALLI

AIR 105891 503 **Shrusti Satapute** C.S.ANGADI P.U.COLLEGE,GOKAK

AIR 108165 500 **Abhinandan Bhavi** PRERANA PU COLLEGE, KOTGONDHUNSHI, HUBBALLI

AIR 108440 500 **Dayanand Kokkari** C.S.ANGADI P.U.COLLEGE, GOKAK

Your stupendous achievement has made your teachers, mentors, the KLE institutions and your parents mighty proud. You have raised the bar and a few eyebrows too. It's your moment in the sun. Keep shining. Keep smiling. And fly the KLE flag at high mast!

KLE FAMILY

Dr Prabhakar Kore
Chairman, KLE Society, Belagavi

Pre-primary & School Education | Collegiate Education | Engineering & Technical Education | Agricultural Institutions | Health Sciences & Healthcare | Management Education | Education in Law

ಸಾಲ ಮನ್ನಾಕ್ಕೆ ಆಗ್ರಹಿಸಿ ಬೀದಿಗಿಳಿದ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಸದಸ್ಯರು

ಎಸ್‌ಎಚ್‌ಜಿ ಸಾಲ ಬಾಕಿ ₹2,650 ಕೋಟಿ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯ ಸರ್ಕಾರದಿಂದ ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕುಗಳ ಮೂಲಕ ಸ್ವಸಹಾಯ ಗುಂಪುಗಳು (ಎಸ್‌ಎಚ್‌ಜಿ) ಪಡೆದು ಕೊಂಡ ಸಾಲದ ಪೈಕಿ ₹2,650.54 ಕೋಟಿ ಮರು ಪಾವತಿ ಬಾಕಿ ಇದೆ. ಇದು ಮಾರ್ಚ್ 31ರ ಅಂತ್ಯದ ವರೆಗಿನ ಮಾಹಿತಿ ಯಾಗಿದ್ದು, 93,204 ಸ್ವಸಹಾಯ ಗುಂಪುಗಳು ಈ ಸಾಲ ಮರು ಪಾವತಿ ಮಾಡಬೇಕಿದೆ.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ಒಳಗೊಂಡ ಕೋಲಾರ ಡಿಸಿಸಿ ಬ್ಯಾಂಕ್‌ಗೆ 24,733 ಎಸ್‌ಎಚ್‌ಜಿಗಳು ₹779.85 ಕೋಟಿ ಕೊಡಲು ಬಾಕಿ ಇದೆ. ಇದು ಅತಿ ಹೆಚ್ಚಿನ ಮೊತ್ತ ಪಾವತಿ ಬಾಕಿ ಇರುವ ಡಿಸಿಸಿ ಬ್ಯಾಂಕ್ ಆಗಿದೆ.

ಬೀದರ್ ಡಿಸಿಸಿ ಬ್ಯಾಂಕಿಗೆ 18,832 ಸ್ವ ಸಹಾಯ ಗುಂಪುಗಳು ₹ 735.71 ಕೋಟಿ ಉಳಿಸಿಕೊಂಡಿವೆ. ಉಳಿದಂತೆ, ಉಡುಪಿ–ದಕ್ಷಿಣ ಕನ್ನಡ, ಮಂಡ್ಯ ಮತ್ತು ಹಾಸನ ಡಿಸಿಸಿ ಬ್ಯಾಂಕುಗಳಿಗೆ ಸ್ವ ಸಹಾಯ ಗುಂಪುಗಳು ದೊಡ್ಡ ಮೊತ್ತದ ಸಾಲ ತೀರಿಸಬೇಕಿದೆ.

'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸ್ತ್ರೀ ಶಕ್ತಿ ಸಂಘಗಳ ಸಾಲ ಮನ್ನಾ ಮಾಡುವುದಾಗಿ ಚುನಾವಣಾ ಪ್ರಚಾರದ ವೇಳೆ ಸಿದ್ದರಾಮಯ್ಯ ಭರವಸೆ ನೀಡಿದ್ದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಹೇಳಿದಂತೆ ನಡೆದುಕೊಳ್ಳಬೇಕು' ಎಂದು ಕೆಲವೆಡೆ ಎಸ್‌ಎಚ್‌ಜಿ ಸದಸ್ಯರು ಬೀದಿಗಿಳಿದಿದ್ದಾರೆ.

ಯಾವೆಲ್ಲ ಡಿಸಿಸಿ ಬ್ಯಾಂಕುಗಳಿಗೆ ಎಸ್‌ಎಚ್‌ಜಿಗಳು ಎಷ್ಟು ಸಾಲ ಬಾಕಿ ಉಳಿಸಿಕೊಂಡಿವೆ ಎಂಬ ಮಾಹಿತಿಯನ್ನು ಕರ್ನಾಟಕ ಸಹಕಾರ ಅಪೆಕ್ಸ್ ಬ್ಯಾಂಕ್ ನೀಡಿದೆ.

ರಾಜ್ಯದಲ್ಲಿರುವ ಎಸ್‌ಎಚ್‌ಜಿಗಳಿಗೆ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ ಶೇ 4ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಸಹಕಾರ ಇಲಾಖೆಯು 2007ರ ಏಪ್ರಿಲ್ 1ರಿಂದ ಜಾರಿಗೊಳಿಸಿತ್ತು. ನಿಗದಿತ ಪ್ರಮಾಣದ ಬಡ್ಡಿ ಸಹಾಯಧನವನ್ನು ಸಾಲ ನೀಡಿದ ಸಹಕಾರ ಸಂಸ್ಥೆಗಳಿಗೆ ಸರ್ಕಾರವೇ ನೀಡುತ್ತಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ (ಎನ್‌ಆರ್‌ಎಲ್‌ಎಂ) ಮತ್ತು ರಾಷ್ಟ್ರೀಯ ನಗರ ಜೀವನೋಪಾಯ ಯೋಜನೆಯನ್ನು (ಎನ್‌ಯುಎಲ್‌ಎಂ) ವಿಲೀನಗೊಳಿಸಿ ಕಾಯಕ ಯೋಜನೆ ರೂಪಿಸಲಾಗಿದೆ. ಈ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘಗಳಿಗೆ 2018ರಿಂದ ಸಾಲ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ, ಸ್ವಂತ ಉದ್ಯೋಗ ಕೈಗೊಂಡು ನಿರಂತರ ಆದಾಯ ಗಳಿಸಲು ಮತ್ತು ಹೈನುಗಾರಿಕೆ ಉದ್ದೇಶಕ್ಕೆ ₹5 ಲಕ್ಷ ವರೆಗಿನ ಸಾಲಕ್ಕೆ ಶೂನ್ಯ ಬಡ್ಡಿ ದರ, ₹5 ಲಕ್ಷದಿಂದ ₹10 ಲಕ್ಷದವರೆಗೆ ಶೇ 4 ಬಡ್ಡಿ ವಿಧಿಸ ಲಾಗುತ್ತದೆ. ₹10 ಲಕ್ಷಕ್ಕಿಂತ ಹೆಚ್ಚಿನ ಸಾಲ ಪಡೆದರೂ ಮೊದಲಿನ ₹10 ಲಕ್ಷದ ಹೊರ ಬಾಕಿಗೆ ಮಾತ್ರ ಬಡ್ಡಿ ಸಹಾಯ ಧನ ನೀಡಲಾಗುತ್ತದೆ. ಪುರುಷ ಸ್ವಸಹಾಯ ಸಂಘಗಳಿಗೆ ಸ್ವಂತ ಉದ್ಯೋಗ ಕೈಗೊಳ್ಳಲು ₹10 ಲಕ್ಷದವರೆಗಿನ ಸಾಲಕ್ಕೆ ಶೇ 4ರಷ್ಟು ಬಡ್ಡಿ ವಿಧಿಸಲಾಗುತ್ತದೆ.

2022-23ರ ಚಿತ್ರಣ

- ಸಾಲ ಪಡೆದ ಸ್ವಸಹಾಯ ಗುಂಪುಗಳು;50,013
- ಸಾಲದ ಮೊತ್ತ; ₹2,206.96 ಕೋಟಿ

ಕೇಂದ್ರದಿಂದ ಬಾರದ ಬಡ್ಡಿ ಸಹಾಯಧನ

ಡಿಸಿಸಿ ಬ್ಯಾಂಕ್‌ಗಳು ಸ್ವಸಹಾಯ ಸಂಘಗಳಿಗೆ ಬಡ್ಡಿ ದರ ನಿಗದಿಪಡಿಸಿ, ಷರತ್ತುಗಳನ್ನು ವಿಧಿಸಿ ಸಾಲ ವಿತರಿಸುತ್ತವೆ. ಬ್ಯಾಂಕ್‌ಗಳಿಗೆ ರಾಜ್ಯ ಸರ್ಕಾರ ಬಡ್ಡಿ ಸಹಾಯಧನವನ್ನು ಪಾವತಿಸುತ್ತದೆ. ಕೇಂದ್ರ ಸರ್ಕಾರದ 2016–17ರ ಪರಿಷ್ಕೃತ ಮಾರ್ಗಸೂಚಿಯಂತೆ ಎನ್‌ಆರ್‌ಎಲ್‌ಎಂ/ ಎನ್‌ಯುಎಲ್‌ಎಂ ಅಡಿಯಲ್ಲಿ ಬಡ್ಡಿ ಸಹಾಯಧನ ನೀಡುತ್ತದೆ. ಆದರೆ, ಈವರೆಗೂ ಕೇಂದ್ರ ಸರ್ಕಾರದಿಂದ ಬಡ್ಡಿ ಸಹಾಯಧನ ಮರುಪಾವತಿ ಆಗಿಲ್ಲ. ಆ ಮೊತ್ತ ಸುಮಾರು ₹135 ಕೋಟಿಯಷ್ಟಿದೆ ಎಂದು ಅಪೆಕ್ಸ್ ಬ್ಯಾಂಕ್‌ನ ಮೂಲಗಳು ತಿಳಿಸಿವೆ.

ಸಾಲ ಬಾಕಿ ಉಳಿಸಿಕೊಂಡ ಸ್ವಸಹಾಯ ಗುಂಪುಗಳು (*ಮೊತ್ತ ₹ ಕೋಟಿಗಳಲ್ಲಿ)

ಜಿಲ್ಲೆ	ಸಂಖ್ಯೆ	ಮೊತ್ತ*	ಜಿಲ್ಲೆ	ಸಂಖ್ಯೆ	ಮೊತ್ತ*
ಕೋಲಾರ	14,085	436.81	ಕೊಪ್ಪಳ	634	15.51
ಚಿಕ್ಕಬಳ್ಳಾಪುರ	10,648	343.04	ದಕ್ಷಿಣ ಕನ್ನಡ	9,318	176.57
ಕೊಡಗು	1,846	39.94	ಉಡುಪಿ	9,936	282.29
ಉತ್ತರ ಕನ್ನಡ	1,139	22.69	ಬೆಂಗಳೂರು ಗ್ರಾಮೀಣ	288	7.42
ಬೀದರ್	18,832	735.71	ರಾಮನಗರ	807	21.85
ದಾವಣಗೆರೆ	113	1.34	ಬೆಂಗಳೂರು ನಗರ	332	8.95
ಚಿತ್ರದುರ್ಗ	628	7.71	ಧಾರವಾಡ	474	10.00
ವಿಜಯಪುರ	1,499	19.04	ಹಾವೇರಿ	219	4.30
ಕಲಬುರಗಿ	1,535	11.66	ಗದಗ	482	11.81
ಯಾದಗಿರಿ	388	3.41	ಹಾಸನ	4,215	116.93
ಮಂಡ್ಯ	6,902	173.73	ಬಾಗಲಕೋಟೆ	339	7.76
ಬಳ್ಳಾರಿ	351	6.22	ಶಿವಮೊಗ್ಗ	3,051	68.12
ಬೆಳಗಾವಿ	1,762	35.49	ತುಮಕೂರು	228	9.02
ಚಿಕ್ಕಮಗಳೂರು	832	4.85	ಮೈಸೂರು	1,304	44.50
ರಾಯಚೂರು	542	11.75	ಚಾಮರಾಜನಗರ	475	12.12

(ಕೋಲಾರ– ಚಿಕ್ಕಬಳ್ಳಾಪುರಕ್ಕೆ ಕೋಲಾರ, ಕಲಬುರಗಿ– ಯಾದಗಿರಿಗೆ ಕಲಬುರಗಿ, ರಾಯಚೂರು–ಕೊಪ್ಪಳಕ್ಕೆ ರಾಯಚೂರು, ದಕ್ಷಿಣಕನ್ನಡ– ಉಡುಪಿಗೆ ಸೌತ್ ಕೆನರಾ, ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ರಾಮನಗರಕ್ಕೆ ಬೆಂಗಳೂರು, ಧಾರವಾಡ, ಹಾವೇರಿ, ಗದಗಕ್ಕೆ ಧಾರವಾಡದ ಕೆಸಿಸಿ ಬ್ಯಾಂಕ್ ಡಿಸಿಸಿ ಬ್ಯಾಂಕ್ ಆಗಿವೆ)

ಸುದ್ದಿ 2 ನಿಮಿಷ

'ಗೃಹಲಕ್ಷ್ಮಿ' ಆ್ಯಪ್ ಶೀಘ್ರ ಬಿಡುಗಡೆ: ಸಚಿವೆ ಲಕ್ಷ್ಮಿ ಹೆಬ್ಬಾಳಕರ

ಬೆಳಗಾವಿ: 'ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಆಹ್ವಾನಿಸಲು ಶೀಘ್ರವೇ ಆ್ಯಪ್ ಬಿಡುಗಡೆ ಮಾಡಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ಗೃಹಲಕ್ಷ್ಮಿ ಯೋಜನೆ ಅನುಷ್ಠಾನಕ್ಕೆ ತಾಂತ್ರಿಕ ತೊಂದರೆ ಎದುರಾಗಿರುವ ಕುರಿತ ಸುದ್ದಿಗಾರರ ಪ್ರಶ್ನೆಗೆ ಅವರು ಭಾನುವಾರ ಹೀಗೆ ಪ್ರತಿಕ್ರಿಯಿಸಿದರು.

'ಗೃಹಲಕ್ಷ್ಮಿ ಯೋಜನೆ ಅನುಷ್ಠಾನಕ್ಕಾಗಿ ತಂತ್ರಾಂಶ ಮತ್ತು ಆ್ಯಪ್ ಸಿದ್ಧಪಡಿಸುತ್ತಿದ್ದೇವೆ. ಅರ್ಜಿ ಸ್ವೀಕಾರಕ್ಕಾಗಿ ಪ್ರತಿ ಬೂತ್‌ನಲ್ಲಿ ಒಬ್ಬ ಮಹಿಳೆ ಸೇರಿದಂತೆ ನಾಲ್ವರನ್ನು ನೇಮಿಸುತ್ತಿದ್ದೇವೆ. ರಾಜ್ಯದಾದ್ಯಂತ 1.13 ಕೋಟಿ ಕುಟುಂಬಗಳು ಯೋಜನೆಯ ಸದುಪಯೋಗ ಪಡೆದುಕೊಳ್ಳಲಿವೆ. ಆ್ಯಪ್ ಬಿಡುಗಡೆಗೊಳಿಸಿದ ನಂತರ ಗೊಂದಲವಾಗದಿರಲೆಂದು ಈಗಲೇ ಮುನ್ನೆಚ್ಚರಿಕೆ ವಹಿಸುತ್ತಿದ್ದೇವೆ' ಎಂದರು.

'ಗೃಹಜ್ಯೋತಿ ಯೋಜನೆಗೆ ಭಾನುವಾರದಿಂದ ಅರ್ಜಿ ಆಹ್ವಾನಿಸಿದ್ದೇವೆ. ಮಾಧ್ಯಮಗಳು, ಜಾಹೀರಾತಿನ ಮೂಲಕ ಯೋಜನೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದ್ದೇವೆ' ಎಂದರು.

ಮುಂದಿನ ಅವಧಿಗೆ ಸಿ.ಎಂ ಆಕಾಂಕ್ಷಿ; ಸತೀಶ ಜಾರಕಿಹೊಳಿ

ಹಾವೇರಿ: 'ಸಿ.ಎಂ ಬದಲಾವಣೆ ವಿಚಾರ ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಅದೇನಿದ್ದರೂ ಹೈಕಮಾಂಡ್‌ಗೆ ಬಿಟ್ಟ ವಿಷಯ. ನಾನು ಈ ಅವಧಿಗೆ ಸಿ.ಎಂ ಆಕಾಂಕ್ಷಿಯಲ್ಲ. ಮುಂದಿನ ಅವಧಿಗೆ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭವಿಷ್ಯದಲ್ಲಿ ಸತೀಶ ಜಾರಕಿಹೊಳಿ ಸಿ.ಎಂ ಆಗ್ತಾರೆ ಎಂದು ಸಚಿವ ರಾಜಣ್ಣ ಹೇಳಿದ್ದಾರೆ. ಅದು ಅವರವರ ವೈಯಕ್ತಿಕ ವಿಚಾರ. ಎಲ್ಲರ ಅಭಿಮಾನಿಗಳೂ ಹೀಗೆ ಹೇಳುವುದು ಸಹಜ. ಆದರೆ, ಈಗ ಆ ವಿಚಾರದ ಅಗತ್ಯವಿಲ್ಲ. ಮುಂದಿನ ಐದು ವರ್ಷ ಅಭಿವೃದ್ಧಿ ಬಗ್ಗೆ ಗಮನ ಕೊಡುತ್ತೇವೆ' ಎಂದು ಜಾರಕಿಹೊಳಿ ಹೇಳಿದರು.

ವಿಮಾನ ನಿಲ್ದಾಣದಲ್ಲಿ ಬಸ್ ಅಪಘಾತ: 10 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡೂ ಟರ್ಮಿನಲ್‌ಗಳ ನಡುವೆ ಸಂಚರಿಸುವ ಎಲೆಕ್ಟ್ರಿಕ್ ಶಟಲ್ ಬಸ್ ಭಾನುವಾರ ಬೆಳಗಿನ ಜಾವ ವಿಮಾನ ನಿಲ್ದಾಣದ ಕಂಬಕ್ಕೆ ಡಿಕ್ಕಿ ಹೊಡೆದಿದ್ದು, ಹತ್ತು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಬೆಳಗಿನ ಜಾವ 5.15ರ ಸುಮಾರು ಟರ್ಮಿನಲ್–2ರಿಂದ ಟರ್ಮಿನಲ್ 1ಕ್ಕೆ ಪ್ರಯಾಣಿಕರನ್ನು ಕರೆ ತರುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಇಬ್ಬರು ಸಿಬ್ಬಂದಿ ಸೇರಿದಂತೆ ಒಟ್ಟು 17 ಮಂದಿ ಬಸ್‌ನಲ್ಲಿದ್ದರು.

ಹತ್ತಾರು ತಾಸು ವಿಶ್ರಾಂತಿ ಇಲ್ಲದೆ ಕೆಲಸ ಮಾಡಿದ್ದ ಚಾಲಕ ದಣಿದಿದ್ದ ಎಂದು ತಿಳಿದು ಬಂದಿದೆ. ಬೆಳಗಿನ ಜಾವ ಚಾಲಕನಿಗೆ ನಿದ್ದೆಯ ಮಂಪರು ಕವಿದ ಕಾರಣ ಅಪಘಾತವಾಗಿರುವ ಸಾಧ್ಯತೆ ಇದೆ. ತನಿಖೆ ನಂತರವಷ್ಟೇ ಅಪಘಾತಕ್ಕೆ ನಿಖರ ಕಾರಣ ತಿಳಿಯಲಿದೆ ಎಂದು ಮೂಲಗಳು ತಿಳಿಸಿವೆ.

ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶಟಲ್ ಬಸ್ ಸೇವೆ ಗುತ್ತಿಗೆ ಪಡೆದಿರುವ 'ಏರ್ ಇಂಡಿಯಾ ಸಾಟ್ಸ್' ಸಂಸ್ಥೆಯ ಮ್ಯಾನೇಜರ್ ವಿಚಾರಣೆ ನಡೆದಿದೆ.

ಬಾಲೇಶ್ವರ: ಮೃತರ ಸಂಖ್ಯೆ 292ಕ್ಕೆ ಏರಿಕೆ

ಕಟಕ್ (ಒಡಿಶಾ): ಬಾಲೇಶ್ವರ ರೈಲು ಅಪಘಾತದಲ್ಲಿ ಗಾಯಗೊಂಡು ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಯುವಕನೊಬ್ಬ ಭಾನುವಾರ ಮೃತಪಟ್ಟಿದ್ದು, ದುರಂತದಲ್ಲಿ ಮಡಿದವರ ಸಂಖ್ಯೆ 292ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ನಿವಾಸಿ ಪಲ್ತು ನಸ್ಕರ್ (24) ಮೃತಪಟ್ಟವರು.

ಪ್ರತ್ಯೇಕ ಪ್ರಕರಣ: 9 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರ ಸಂಭವಿಸಿದ ಅವಘಡಗಳಲ್ಲಿ ಇಬ್ಬರು ಮಕ್ಕಳು ಸೇರಿದಂತೆ 9 ಮಂದಿ ಮೃತಪಟ್ಟಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೆರೆಗೆ ಈಜಲು ಹೋಗಿದ್ದ ಮೂವರು ವಿದ್ಯಾರ್ಥಿಗಳು ಹಾಗೂ ಆಲಮಟ್ಟಿಯ ಕೃಷ್ಣಾ ನದಿಯಲ್ಲಿ ಸ್ನಾನ ಮಾಡಲು ನೀರಿಗಿಳಿದಿದ್ದ ಬಾಲಕ ಮೃತಪಟ್ಟರೆ, ಕಲಬುರಗಿ ಜಿಲ್ಲೆಯ ತೋಟದ ಬಾವಿಯಲ್ಲಿ ತಂದೆಯೊಬ್ಬ ತನ್ನ ಇಬ್ಬರು ಮಕ್ಕಳೊಂದಿಗೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತುಂಗಾ ನದಿಯಲ್ಲಿ ಈಜಲು ಹೋಗಿದ್ದ ಇಬ್ಬರು ಉಪನ್ಯಾಸಕರು ನೀರು ಪಾಲಾಗಿದ್ದಾರೆ.

ಕೃಷ್ಣೆಯ ಹಿನ್ನೀರಿನಲ್ಲಿ ಮುಳುಗಿ ಬಾಲಕ ಸಾವು

ಆಲಮಟ್ಟಿ: ಅಮಾವಾಸ್ಯೆ ನಿಮಿತ್ತ ಕೃಷ್ಣಾ ನದಿಯಲ್ಲಿ ಸ್ನಾನ ಮಾಡಲು ಕುಟುಂಬದವರೊಂದಿಗೆ ಬಂದಿದ್ದ ಬಸವನಬಾಗೇವಾಡಿ ಪಟ್ಟಣದ ಬಾಲಕ ವಿಜಯ ಕುಮಾರ ಗುರುಪಾದ ನಡಗೇರಿ (16) ಇಲ್ಲಿನ ಚಂದ್ರಮ್ಮ ದೇವಸ್ಥಾನದ ಬಳಿ ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಅಗ್ನಿಶಾಮಕ ದಳ ಹಾಗೂ ಸ್ಥಳೀಯ ಮೀನುಗಾರರು ಕೂಡಿ ಸುಮಾರು ಮೂರು ತಾಸು ಹುಡುಕಾಟ ನಡೆಸಿದ ನಂತರ ಮೃತದೇಹ ಪತ್ತೆಯಾಗಿದೆ.

ಇಲ್ಲಿನ ಕೃಷ್ಣಾ ನದಿ ಹಿನ್ನೀರಿನಲ್ಲಿರುವ ಇಂಗಳೇಶ್ವರ ಸೇರಿ 42 ಗ್ರಾಮಗಳಿಗೆ ಪೂರೈಕೆಯಾಗಿರುವ ಕುಡಿಯುವ ಬಹುಗ್ರಾಮ ಜಾಕ್‌ವೆಲ್ ಇನ್‌ಟೇಕ್ ವಾಲ್ ಬಳಿ ಈ ಘಟನೆ ನಡೆದಿದೆ. ಜಾಕ್‌ವೆಲ್ ನ ನೀರೆತ್ತುವ ಬೃಹತ್ ಪಂಪ್ ಗಳು ನದಿ ನೀರನ್ನು ಸೆಳೆಯುತ್ತವೆ. ಆ ಸೆಳೆತಕ್ಕೆ ಅಲ್ಲಿಯೇ ಈಜುತ್ತಿದ್ದ ಬಾಲಕ ಸಿಲುಕಿ ನದಿಯೊಳಕ್ಕೆ ಹೋದ ಎನ್ನಲಾಗಿದೆ.

ಇಬ್ಬರು ಉಪನ್ಯಾಸಕರು ತುಂಗೆ ಪಾಲು

ಶಿವಮೊಗ್ಗ: ತೀರ್ಥಹಳ್ಳಿ ತಾಲ್ಲೂಕಿನ ತೀರ್ಥಮತ್ತೂರು ಬಳಿ ಭಾನುವಾರ ತುಂಗಾ ನದಿಯಲ್ಲಿ ಈಜಲು ಹೋಗಿದ್ದ ಇಬ್ಬರು ಉಪನ್ಯಾಸಕರು ನೀರು ಪಾಲಾಗಿದ್ದಾರೆ. ಸಂಜೆ ಇಬ್ಬರ ಶವ ದೊರೆತಿದೆ.

ಕಾರ್ಕಳದ ನಿಟ್ಟೆ ಕಾಲೇಜಿನ ಉಪನ್ಯಾಸಕರಾದ ಪುನೀತ್ (38) ಮತ್ತು ಬಾಲಾಜಿ (36) ವಾರಾಂತ್ಯದ ರಜೆ ಹಿನ್ನೆಲೆಯಲ್ಲಿ ಸ್ನೇಹಿತರೊಂದಿಗೆ ಪ್ರವಾಸ ಬಂದಿದ್ದರು. ಬಾಲಾಜಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನವರು. ಪುನೀತ್ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯವರು. ಇಬ್ಬರೂ ವಿವಾಹಿತರು.

ಪುನೀತ್

ಬಾಲಾಜಿ

ಇವರು ಮತ್ತು ಸ್ನೇಹಿತರು ತೀರ್ಥಹಳ್ಳಿಯ ತೀರ್ಥಮತ್ತೂರು ಯೋಗನರಸಿಂಹ ಮಠದ ಸಮೀಪ ಇರುವ ಹೋಂ ಸ್ಟೇನಲ್ಲಿ ತಂಗಿದ್ದರು. ಬೆಳಿಗ್ಗೆ ಎಲ್ಲರೂ ಈಜಲು ತುಂಗಾ ನದಿಗೆ ಇಳಿದಿದ್ದರು. ಈ ವೇಳೆ ಒಬ್ಬರು ನೀರಿನ ಆಳ ತಿಳಿಯದೇ ಧುಮುಕಿ ಸೆಳವಿಗೆ ಸಿಲುಕಿ ಮುಳುಗಿದ್ದಾರೆ. ಅವರ ರಕ್ಷಣೆಗೆ ತೆರಳಿದ್ದ ಮತ್ತೊಬ್ಬರೂ ನೀರು ಪಾಲಾಗಿದ್ದಾರೆ.

ಕೆರೆಯಲ್ಲಿ ಮುಳುಗಿ ಮೂವರು ವಿದ್ಯಾರ್ಥಿಗಳು ಸಾವು

ವಿಜಯಪುರ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಚಿಕ್ಕನಹಳ್ಳಿ ಸಮೀಪದ ಕೆರೆಗೆ ಈಜಲು ಹೋಗಿದ್ದ ಮೂವರು ವಿದ್ಯಾರ್ಥಿಗಳು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಧನುಷ್

ಗುರುಪ್ರಸಾದ್

ಕಾರ್ತಿಕ್

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢ ಹಾಗೂ ಪ್ರಾಥಮಿಕ ಶಾಲೆ ವಿಭಾಗದ ಕಾರ್ತಿಕ್ (15), ಗುರುಪ್ರಸಾದ್ (16), ಧನುಷ್ (10) ಮೃತರು.

ಶನಿವಾರ ಶಾಲೆ ಮುಗಿಸಿಕೊಂಡು ಮನೆಗೆ ಬಂದ ವಿದ್ಯಾರ್ಥಿಗಳು ಬ್ಯಾಗ್ ಮನೆಯಲ್ಲಿಟ್ಟು ಸೈಕಲ್ ಏರಿ ಹೋದವರು ಸಂಜೆಯಾದರೂ ಮನೆಗೆ ಮರಳಿರಲಿಲ್ಲ. ಎಲ್ಲಾ ಕಡೆ ಹುಡುಕಾಟ ನಡೆಸಿದ ಪೋಷಕರು ಪಟ್ಟಣದ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದರು.

ಭಾನುವಾರ ಬೆಳಗ್ಗೆ ಕೆರೆ ಬಳಿ ಸೈಕಲ್ ಮತ್ತು ಬಟ್ಟೆಗಳು ಕಂಡ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಮತ್ತು ಅಗ್ನಿಶಾಮಕ ಠಾಣೆ ಸಿಬ್ಬಂದಿ ವಿದ್ಯಾರ್ಥಿಗಳ ಶವಗಳನ್ನು ಹೊರತೆಗೆದರು. ಮಕ್ಕಳನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಇಬ್ಬರು ಮಕ್ಕಳೊಂದಿಗೆ ಬಾವಿಗೆ ಹಾರಿ ತಂದೆ ಆತ್ಮಹತ್ಯೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಜಿಲ್ಲೆಯ ಕುಂಚಾವರಂ ಬಳಿಯ ಪೋಚಾವರಂನ ತೋಟದ ಬಾವಿಗೆ ತಂದೆಯೊಬ್ಬ ತನ್ನ ಇಬ್ಬರು ಮಕ್ಕಳೊಂದಿಗೆ ಬಾವಿಗೆ ಹಾರಿ ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಣಮಂತ ವಡ್ಡರ್, ಓಂಕಾರ

ಅಕ್ಷರಾ

ಕುಂಚಾವರಂನ ಹಣಮಂತ ಸಂಜಪ್ಪ ವಡ್ಡರ್ (40), ಮಗ ಓಂಕಾರ (9), ಮಗಳು ಅಕ್ಷರಾ (6) ಮೃತರು.

ಹಣಮಂತ ಕೆಲ ವರ್ಷದ ಹಿಂದೆಯೇ ತೆಲಂಗಾಣದ ತಾಂಡೂರಿನಲ್ಲಿ ಮನೆ ಕಟ್ಟಿಕೊಂಡು ಅಲ್ಲಿಯೇ ನೆಲೆಸಿದ್ದರು. ಈಚೆಗೆ ಹೈದರಾಬಾದ್‌ಗೆ ತೆರಳಿದ್ದ ಹಣಮಂತ ಮಕ್ಕಳೊಂದಿಗೆ ಕುಂಚಾವರಂಗೆ ಬಂದಿದ್ದರು. ಶುಕ್ರವಾರ ತನ್ನ ಸಹೋದರ ಗೋಪಾಲಗೆ ಕರೆ ಮಾಡಿ, 'ನಾನು ಮಕ್ಕಳೊಂದಿಗೆ ಬಾವಿಗೆ ಬಿದ್ದು ಸಾಯುತ್ತಿದ್ದೇನೆ. ನನ್ನ ಶವ ತೆಗೆದು ಅಂತ್ಯಕ್ರಿಯೆ ನಡೆಸಬೇಕು' ಎಂದು ಕೋರಿಕೊಂಡಿದ್ದರು. ಈ ವಿಷಯವನ್ನು ಗೋಪಾಲ ಪೊಲೀಸರಿಗೆ ತಿಳಿಸಿದರು.

ಬಸ್ ಹತ್ತುವಾಗ ಬಿದ್ದ ಬಾಲಕಿ

ರಾಮದುರ್ಗ(ಬೆಳಗಾವಿ ಜಿಲ್ಲೆ): ಪಟ್ಟಣದಲ್ಲಿ ಭಾನುವಾರ ಸಂಚರಿಸುತ್ತಿದ್ದ ಸಾರಿಗೆ ಸಂಸ್ಥೆಯ ಬಸ್ ಏರುವಾಗ ಬಾಲಕಿಯೊಬ್ಬಳು ಜಾರಿ ಬಿದ್ದು ಗಾಯಗೊಂಡ ಘಟನೆ ನಡೆದಿದೆ.

ಜಮಖಂಡಿ-ಧಾರವಾಡ ಮಾರ್ಗವಾಗಿ ಕಾರ್ಯಾಚರಣೆ ನಡೆಸುತ್ತಿದ್ದ ಬಸ್ ಪ್ರಯಾಣಿಕರಿಂದ ತುಂಬಿತ್ತು. ಬಾಲಕಿ ಕೂಡ ಅದೇ ಬಸ್ ಏರುತ್ತಿದ್ದಳು. ಆದರೆ, ಆಯತಪ್ಪಿ ಕೆಳಗೆ ಬಿದ್ದಿದ್ದಾಳೆ. ಇದರಿಂದ ಸಿಟ್ಟಾದ ಬಾಲಕಿ ಪಾಲಕರು ಚಾಲಕ ಮತ್ತು ನಿರ್ವಾಹಕನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ದರ್ಗಾ ದರ್ಶನಕ್ಕೆ ಮಹಿಳೆಯರ ದಂಡು

ಮುಳಗುಂದ (ಗದಗ ಜಿಲ್ಲೆ): ಮಣ್ಣೆತ್ತಿನ ಅಮಾವಾಸ್ಯೆ ಅಂಗವಾಗಿ ಇಲ್ಲಿನ ದಾವಲ್ ಮಲ್ಲಿಕ್ ದರ್ಗಾ ದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭೇಟಿಕೊಟ್ಟರು. ಅದರಲ್ಲೂ ಮಹಿಳೆಯರ ಸಂಖ್ಯೆಯೇ ಅಧಿಕವಾಗಿತ್ತು.

ಮಣ್ಣೆತ್ತಿನ ಅಮಾವಾಸ್ಯೆ: ಶಕ್ತಿ ಯೋಜನೆ ಪರಿಣಾಮ

ಮಾದಪ್ಪನ ಕ್ಷೇತ್ರದಲ್ಲಿ ಭಕ್ತಸಾಗರ

ಪ್ರಜಾವಾಣಿ ವಾರ್ತೆ

ಮಣ್ಣೆತ್ತಿನ ಅಮಾವಾಸ್ಯೆ ದಿನವಾದ ಭಾನುವಾರ ಚಾಮರಾಜನಗರ ಜಿಲ್ಲೆ ಮಹದೇಶ್ವರ ಬೆಟ್ಟದಲ್ಲಿ ಮಲೆಮಹದೇಶ್ವರ ಸ್ವಾಮಿಯ ದರ್ಶನಕ್ಕಾಗಿ ಸರತಿ ಸಾಲಿನಲ್ಲಿ ನಿಂತಿದ್ದ ಭಕ್ತರು

ಮಹದೇಶ್ವರಬೆಟ್ಟ (ಚಾಮರಾಜನಗರ): 'ಶಕ್ತಿ' ಯೋಜನೆ ಪರಿಣಾಮ ಹಾಗೂ ಮಣ್ಣೆತ್ತಿನ ಅಮಾವಾಸ್ಯೆ ದಿನವಾದ ಭಾನುವಾರ ಇಲ್ಲಿನ ಪ್ರಸಿದ್ಧ ಮಲೆ ಮಹದೇಶ್ವರಸ್ವಾಮಿ ದೇವಾಲಯಕ್ಕೆ 2.5 ಲಕ್ಷಕ್ಕೂ ಹೆಚ್ಚು ಭಕ್ತರು ಭೇಟಿ ನೀಡಿದ್ದಾರೆ. ಇದರಲ್ಲಿ ಸಿಂಹಪಾಲು ಮಹಿಳೆಯರೇ ಇದ್ದರು.

ಪ್ರತಿ ಅಮಾವಾಸ್ಯೆಯಂದು ಭೇಟಿ ನೀಡುವ ಭಕ್ತರ ಸಂಖ್ಯೆಗೆ ಹೋಲಿಸಿದರೆ, ಭಾನುವಾರ ಹತ್ತು ಪಟ್ಟು ಹೆಚ್ಚು ಬಂದಿದ್ದರು. ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಭಕ್ತರಿಗೆ ಸೌಕರ್ಯ, ದಾಸೋಹ ವ್ಯವಸ್ಥೆ ಮಾಡಲು ಹರಸಾಹಸ ಪಡಬೇಕಾಯಿತು. ಭಕ್ತರು ದೇವರ ದರ್ಶನಕ್ಕೆ ಹಾಗೂ ದಾಸೋಹಕ್ಕೆ ಗಂಟೆಗಟ್ಟಲೆ ಕಾಯಬೇಕಾಯಿತು.

ಕಾಡಿದ ಬಸ್ ಕೊರತೆ: ಕೆಎಸ್‌ಆರ್‌ಟಿಸಿಯು 150 ಹೆಚ್ಚುವರಿ ಬಸ್‌ಗಳನ್ನು ಬಿಟ್ಟಿತ್ತು, ಆದರೂ ಸಾಲಲಿಲ್ಲ. ಮತ್ತೆ 60 ಬಸ್‌ಗಳ ಕಾರ್ಯಾಚರಣೆ ನಡೆಸಿತು. ಅವೂ ಸಾಲದೆ ಜನರು ನಿಲ್ದಾಣಗಳಲ್ಲಿ ಕಾಯಬೇಕಾಯಿತು. ಬಸ್‌ಗಳಲ್ಲೂ ನೂಕುನುಗ್ಗಲು ಕಂಡುಬಂತು. 'ಶಕ್ತಿ' ಪರಿಣಾಮ ಕಳೆಗುಂದಿದ್ದ ಖಾಸಗಿ ಬಸ್‌ಗಳಲ್ಲೂ ಪ್ರಯಾಣಿಕರು ಕಂಡುಬಂದರು.

ಸರದಿ ಸಾಲಿನಲ್ಲಿ ಬೆಳಿಗ್ಗೆ ನಿಂತವರು ದರ್ಶನ ಮುಗಿಸಿ ಹೊರಬರುವುದರೊಳಗೆ ಮಧ್ಯಾಹ್ನ ಕಳೆದಿತ್ತು. ₹500, ₹300, ₹200 ಟಿಕೆಟ್ ಪಡೆದವರಿಗೆ ವಿಶೇಷ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಒಂದು ಗಂಟೆವರೆಗೆ ₹500 ಟಿಕೆಟ್ ಮಾರಲಾಗಿದ್ದು, ಇದರಿಂದ ₹23 ಲಕ್ಷ ಆದಾಯ ಬಂದಿದೆ ಎಂದು ಪ್ರಾಧಿಕಾರದ ಅಧಿಕಾರಿಗಳು ಮಾಹಿತಿ ನೀಡಿದರು.

'ಜಾತ್ರೆ ಸಮಯದಲ್ಲಿ ಈ ಪ್ರಮಾಣದಲ್ಲಿ ಭಕ್ತರು ಸೇರುತ್ತಾರೆ. ಆದರೆ, ಅಮಾವಾಸ್ಯೆಯಂದು ಇಷ್ಟೊಂದು ಸಂಖ್ಯೆಯಲ್ಲಿ ಬಂದಿರಲಿಲ್ಲ. ಭಾನುವಾರ ಎರಡೂವರೆಯಿಂದ ಮೂರು ಲಕ್ಷ ಭಕ್ತರು ಬಂದಿದ್ದಾರೆ' ಎಂದು ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಸ್.ಕಾತ್ಯಾಯಿನಿದೇವಿ 'ಪ್ರಜಾವಾಣಿ'ಗೆ ತಿಳಿಸಿದರು.

ಮೈಸೂರು ವರದಿ: ವಾರಾಂತ್ಯ ಹಾಗೂ 'ಶಕ್ತಿ' ಯೋಜನೆ ಪರಿಣಾಮ ಮೈಸೂರಿನ ಚಾಮುಂಡಿ ಬೆಟ್ಟ, ಅಂಬಾವಿಲಾಸ ಅರಮನೆ, ಚಾಮರಾಜೇಂದ್ರ ಮೃಗಾಲಯ ಮೊದಲಾದ ಪ್ರವಾಸಿ ತಾಣಗಳಿಗೆ ಭಾನುವಾರ ಬಹಳಷ್ಟು ಪ್ರವಾಸಿಗರು ಭೇಟಿ ನೀಡಿದ್ದರು. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣದ ಅವಕಾಶ ಇದ್ದಿದ್ದರಿಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದು ಕಂಡುಬಂತು. ಅಮಾವಾಸ್ಯೆ ಅಂಗವಾಗಿ ಚಾಮುಂಡಿ ಬೆಟ್ಟದಲ್ಲಿ ಅಪಾರ ಭಕ್ತರು ಕಂಡುಬಂದರು.

'ಅಸಲಿ ಹಿಂದುತ್ವಕ್ಕೆ ಶಕ್ತಿ'

ಬೆಂಗಳೂರು: 'ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ಜಾರಿಗೊಳಿಸಿರುವ 'ಶಕ್ತಿ' ಯೋಜನೆಯು ಅಸಲಿ ಹಿಂದುತ್ವಕ್ಕೆ ಶಕ್ತಿ ತುಂಬಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ಭಾನುವಾರ ಟ್ವಿಟರ್‌ನಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿರುವ ಅವರು, 'ಶಕ್ತಿ ಯೋಜನೆ ಜಾರಿಯಾದ ಬಳಿಕ ರಾಜ್ಯದ ಎಲ್ಲ ಹಿಂದೂ ದೇಗುಲಗಳು, ಪುಣ್ಯ ಕ್ಷೇತ್ರಗಳು ತುಂಬಿ ತುಳುಕುತ್ತಿವೆ' ಎಂದಿದ್ದಾರೆ.

ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡಕ್ಕೆ ಭಾನುವಾರ ಭಕ್ತರು ಭೇಟಿ ನೀಡಿ ಯಲ್ಲಮ್ಮ ದೇವಿ ದರ್ಶನಾಶೀರ್ವಾದ ಪಡೆದರು

ಯಲ್ಲಮ್ಮ ದೇವಿ ದರ್ಶನಕ್ಕೆ ಭಕ್ತರ ದಂಡು

ಉಗರಗೋಳ(ಬೆಳಗಾವಿ ಜಿಲ್ಲೆ): ಮಣ್ಣೆತ್ತಿನ ಅಮಾವಾಸ್ಯೆ ನಿಮಿತ್ತ ಭಾನುವಾರ ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡಕ್ಕೆ ಭಕ್ತಸಾಗರವೇ ಹರಿದುಬಂದಿತ್ತು. ಅವರಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚಿತ್ತು.

ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಸಾವಿರಾರು ಭಕ್ತರು ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಯಲ್ಲಮ್ಮನ ಸನ್ನಿಧಿಗೆ ಬಂದಿಳಿದರು.

'ಶಕ್ತಿ ಯೋಜನೆಯಡಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಸರ್ಕಾರ ಅವಕಾಶ ಕೊಟ್ಟಿದ್ದಕ್ಕೆ ಯಲ್ಲಮ್ಮನಗುಡ್ಡಕ್ಕೆ ಬಂದಿದ್ದೇವೆ' ಎಂದು ಕಲಬುರಗಿಯ ಜೋಗತಿ ದೇವಮ್ಮ ಹೇಳಿದರು.

ಕೊಟ್ಟೂರು ವರದಿ: ಪಟ್ಟಣದ ಕೊಟ್ಟೂರೇಶ್ವರ ಸ್ವಾಮಿ ದರ್ಶನಕ್ಕೆ ಮಹಿಳಾ ಭಕ್ತರು ಹೆಚ್ಚಿದ್ದರು.

ವಿವಿಧ ಜಿಲ್ಲೆಗಳಿಂದ ತಂಡೋಪತಂಡವಾಗಿ ಮಹಿಳಾ ಭಕ್ತರ ದಂಡು ತಮ್ಮ ಮಕ್ಕಳೊಂದಿಗೆ ದೇವಸ್ಥಾನಕ್ಕೆ ಬಂದಿದ್ದು ಕಂಡು ಬಂತು. ಈ ಹಿಂದೆ ರಥೋತ್ಸವ ಹಾಗೂ ಕಾರ್ತಿಕೋತ್ಸವ ಸಂದರ್ಭದಲ್ಲಿ ಮಾತ್ರ ಮಹಿಳಾ ಭಕ್ತರ ಸಂಖ್ಯೆ ಗಣನೀಯವಾಗಿರುತ್ತಿತ್ತು.

> ಮನೆಗೆಲಸ ಅಥವಾ ಮಕ್ಕಳನ್ನು ಹೆರಲು ಮಾತ್ರ ಮಹಿಳೆಯರು ಸೀಮಿತವಾಗಬಾರದು. ಹೀಗಾಗಿ 'ಶಕ್ತಿ' ಯೋಜನೆ ಪರಿಚಯಿಸಿದ್ದೇವೆ. ಎಲ್ಲ ಮಹಿಳೆಯರೂ ದೇವಸ್ಥಾನಕ್ಕೆ ಹೋಗಿ ಪುನೀತರಾಗಲಿ
>
> **ಲಕ್ಷ್ಮಿ ಹೆಬ್ಬಾಳಕರ,** ಸಚಿವೆ

ಬಡಿಗೆ ಹಿಡಿದು ನಿಂತ ನಿರ್ವಾಹಕ...

ತೇರದಾಳ (ಬಾಗಲಕೋಟೆ ಜಿಲ್ಲೆ): 'ಶಕ್ತಿ'ಯನ್ನು ಬಳಸಿಕೊಂಡ ಮಹಿಳೆಯರು ಪಟ್ಟಣದ ಬಸ್ ನಿಲ್ದಾಣದಿಂದ ವಿವಿಧೆಡೆ ದೇವರ ದರ್ಶನಕ್ಕೆ ಅಪಾರ ಸಂಖ್ಯೆಯಲ್ಲಿ ತೆರಳಿದರು. ಮಧ್ಯಾಹ್ನದ ಹೊತ್ತಿಗೆ ಈ ಸಂಖ್ಯೆ ಮತ್ತಷ್ಟು ಹೆಚ್ಚಾದ್ದರಿಂದ ಮಹಿಳಾ ಪ್ರಯಾಣಿಕರ ಗದ್ದಲ ನಿಯಂತ್ರಿಸಲು ನಿರ್ವಾಹಕ ಕೆಲ ಕಾಲ ಬಡಿಗೆ ಹಿಡಿದು ನಿಲ್ಲಬೇಕಾಯಿತು.

ಪಟ್ನಾ ಸಭೆ: ದೇಶಪ್ರೇಮಿಗಳ ಕೂಟ– ಉದ್ಧವ್ ಬಣ್ಣನೆ

ಪ್ರಜಾವಾಣಿ ವಾರ್ತೆ

ಮುಂಬೈ: ಇದೇ 23ರಂದು ಪಟ್ನಾದಲ್ಲಿ ನಡೆಯಲಿರುವ ವಿರೋಧ ಪಕ್ಷಗಳ ಸಭೆಯ ಕುರಿತಾಗಿ ಇದು ದೇಶದ ಪ್ರಜಾಪ್ರಭುತ್ವವನ್ನು ಉಳಿಸುವ 'ದೇಶಪ್ರೇಮಿಗಳ ಕೂಟ' ಎಂದು ಶಿವಸೇನಾದ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಬಣ್ಣಿಸಿದ್ದಾರೆ.

ವರ್ಲಿಯಲ್ಲಿ ಆಯೋಜಿಸಿದ್ದ ಶಿವಸೇನಾದ 57ನೇ ಸಂಸ್ಥಾಪನಾ ದಿನ ಹಾಗೂ ಸೇನಾದ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, 'ಪಟ್ನಾದಲ್ಲಿ ಜೂನ್ 23ರಂದು ನಡೆಯಲಿರುವ ವಿರೋಧ ಪಕ್ಷಗಳ ಸಭೆಗೆ ಖುದ್ದು ಹಾಜರಾಗುವೆ. ಇದು ದೇಶಪ್ರೇಮಿಗಳ ಕೂಟವಾಗಿದೆ. ಇವರು (ಜನರು ಮತ್ತು ಪಕ್ಷಗಳು) ತಮ್ಮ ದೇಶವನ್ನು ಪ್ರೀತಿಸುತ್ತಾರೆ. ದೇಶದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ರಕ್ಷಿಸಲು ಇಚ್ಛಿಸುತ್ತಾರೆ' ಎಂದು ಅವರು ಹೇಳಿದ್ದಾರೆ.

'ಈ ಹಿಂದೆ ಬಿಜೆಪಿಯ ನಾಯಕರು ಮಾತ್ರ 'ಮಾತೋಶ್ರೀ'ಗೆ ಭೇಟಿ ನೀಡುತ್ತಿದ್ದರು. ಆದರೆ, ಈಗ ಬಿಜೆಪಿ ಹೊರತುಪಡಿಸಿ, ಇತರ ಎಲ್ಲ ಪಕ್ಷಗಳಿಗೆ ಶಿವಸೇನಾದ ಮಹತ್ವದ ಅರಿವಾಗಿದೆ. ದೇಶವನ್ನು ಪ್ರೀತಿಸುವ ಎಲ್ಲ ಪಕ್ಷಗಳು ಒಗ್ಗಟ್ಟಾಗಿ ಬಿಜೆಪಿಯನ್ನು ತಡೆಯಬೇಕು' ಎಂದರು.

'ಪಟ್ನಾದ ಸಭೆಗೆ ನನಗೆ ಆಹ್ವಾನ ನೀಡಲು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಖುದ್ದಾಗಿ ಮುಂಬೈಗೆ ಬಂದಿದ್ದಾರೆ. ಹಾಗಾಗಿ ಪಟ್ನಾದ ಸಭೆಯಲ್ಲಿ ನಾನು ಭಾಗವಹಿಸುವೆ' ಎಂದು ಅವರು ಪುನರುಚ್ಚರಿಸಿದರು.

'ಗೃಹ ಜ್ಯೋತಿ': ಕೈಕೊಟ್ಟ ಸರ್ವರ್

ಒಂದನೇ ಪುಟದಿಂದ

'ಪೋರ್ಟಲ್‌ನಲ್ಲಿ ಗೃಹ ಜ್ಯೋತಿ ಯೋಜನೆ ವಿಂಡೊ ಮೇಲೆ ಕ್ಲಿಕ್ ಮಾಡಿದ ತಕ್ಷಣ 'ನಾಟ್ ರೀಚಬಲ್...' ಎಂದು ಬರುತ್ತಿದೆ. ಇದರಿಂದ ಅರ್ಜಿ ಸಲ್ಲಿಕೆ ಸಾಧ್ಯವಾಗಿಲ್ಲ. ನೋಂದಣಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ವ್ಯವಸ್ಥೆ ಮಾಡಲಾಗಿದೆ. ಅದನ್ನು ಬಳಸಿಕೊಂಡು ಅರ್ಜಿ ಸಲ್ಲಿಸುವುದಕ್ಕೂ ಸಾಧ್ಯವಾಗಿಲ್ಲ' ಎಂದು ನಾಗರಿಕರು ದೂರಿದ್ದಾರೆ.

'ಭಾನುವಾರ ಒಮ್ಮೆಲೇ ಸಾವಿರಾರು ಸಂಖ್ಯೆಯಲ್ಲಿ ಜನರು ಪೋರ್ಟಲ್ ತೆರೆದಿದ್ದರಿಂದ ಸಮಸ್ಯೆ ಕಾಣಿಸಿಕೊಂಡಿತ್ತು. ಸೋಮವಾರದಿಂದ ಸಾರ್ವಜನಿಕರೇ ಮೊಬೈಲ್, ಲ್ಯಾಪ್‌ಟಾಪ್ ಹಾಗೂ ಕಂಪ್ಯೂಟರ್‌ನಲ್ಲಿ ಅರ್ಜಿ ಸಲ್ಲಿಸಬಹುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

23ಕ್ಕೆ ಪಟ್ನಾದಲ್ಲಿ ಪ್ರತಿಪಕ್ಷಗಳ ಸಭೆ; ಕಾಂಗ್ರೆಸ್‌ನದ್ದು ಕಾದು ನೋಡುವ ತಂತ್ರ

ಒಗ್ಗಟ್ಟಿಗೂ ಮುನ್ನವೇ ಅಪಸ್ವರ?

• ಶೆಮಿನ್ ಜಾಯ್

ನವದೆಹಲಿ: 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗೂಡುವ ಸಂಬಂಧ ಚರ್ಚಿಸಲು ಇದೇ 23ರಂದು ಬಿಹಾರದ ಪಟ್ನಾದಲ್ಲಿ ನಿಗದಿಯಾಗಿರುವ ಸಭೆಗೂ ಮುನ್ನವೇ ಒಗ್ಗಟ್ಟು ಪ್ರದರ್ಶನದ ಬಗ್ಗೆ ಪ್ರತಿಪಕ್ಷಗಳ ನಡುವಣ ಅಪಸ್ವರ ಶುರುವಾಗಿದೆ.

ತೃಣಮೂಲ ಕಾಂಗ್ರೆಸ್, ಎಎಪಿ ಮತ್ತು ಸಮಾಜವಾದಿ ಪಕ್ಷವು ಬಿಜೆಪಿ ವಿರುದ್ಧ ಒಗ್ಗಟ್ಟಾಗಿ ಸೆಣಸಲು ಉತ್ಸುಕವಾಗಿವೆ. ಶೀಘ್ರವೇ ವಿಪಕ್ಷಗಳ ನಡುವೆ ಒಗ್ಗಟ್ಟು ಬಲಗೊಂಡರೆ ಮುಂಬರುವ ಛತ್ತೀಸಗಢ, ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿ ಕೂಟ ಉತ್ತಮ ಸಾಧನೆ ತೋರಬಹುದು ಎಂಬುದು ಆ ಪಕ್ಷಗಳ ಲೆಕ್ಕಾಚಾರ.

ಆದರೆ, ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಗೆಲುವಿನ ನಗೆ ಬೀರಿರುವ ಕಾಂಗ್ರೆಸ್, ಈ ನಾಲ್ಕು ರಾಜ್ಯಗಳ ಚುನಾವಣೆ ಪೂರ್ಣಗೊಳ್ಳುವವರೆಗೂ ಯಾವುದೇ ನಿರ್ಣಯ ಪ್ರಕಟಿಸದಿರಲು ನಿರ್ಧರಿಸಿದೆ. ಹಾಗಾಗಿ, ಸಭೆಯಲ್ಲಿ ಪ್ರತಿಪಕ್ಷಗಳ ಒಗ್ಗಟ್ಟಿಗೆ ಸಹಮತ ಸೂಚಿಸದೆ ಕಾದು ನೋಡುವ ತಂತ್ರ ಅನುಸರಿಸಲು ಮುಂದಾಗಿದೆ.

ಪ್ರತಿಪಕ್ಷವಾಗಿದ್ದುಕೊಂಡೇ ವರ್ಷಾಂತ್ಯದಲ್ಲಿ ನಾಲ್ಕು ರಾಜ್ಯಗಳಲ್ಲಿ ನಡೆಯುವ ಚುನಾವಣೆಯಲ್ಲಿ ತನ್ನ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವ ಉತ್ಸಾಹದಲ್ಲಿ ಕಾಂಗ್ರೆಸ್ ವರಿಷ್ಠರಿದ್ದಾರೆ.

ಪಟ್ನಾ ಸಭೆಗೆ ಇನ್ನೂ 4 ದಿನ ಗಳಷ್ಟೇ ಬಾಕಿ ಉಳಿದಿದ್ದು, ಪ್ರತಿ ಪಕ್ಷಗಳ ತಂತ್ರಗಾರಿಕೆಯೂ ಬಹಿರಂಗಗೊಂಡಿದೆ. ದೆಹಲಿ ಮತ್ತು ಪಂಜಾಬ್‌ನಲ್ಲಿ ಕಾಂಗ್ರೆಸ್ ಸ್ಪರ್ಧಿಸುವುದಿಲ್ಲವೆಂದು ಭರವಸೆ ನೀಡಿದರಷ್ಟೇ ಮಧ್ಯಪ್ರದೇಶ ಚುನಾವಣೆಯಿಂದ ಹಿಂದೆ ಸರಿಯುವುದಾಗಿ ಈಗಾಗಲೇ ಎಎಪಿ ಸ್ಪಷ್ಟಪಡಿಸಿದೆ. ಮತ್ತೊಂದೆಡೆ ಪಶ್ಚಿಮ ಬಂಗಾಳದಲ್ಲಿ ಸಿಪಿಎಂ ಜೊತೆಗೆ ಕಾಂಗ್ರೆಸ್ ಮೈತ್ರಿ ಮುಂದುವರಿಸಿದರೆ ರಾಷ್ಟ್ರಮಟ್ಟದಲ್ಲಿ ಆ ಪಕ್ಷಕ್ಕೆ ನಮ್ಮ ಬೆಂಬಲ ನೀಡುವುದಿಲ್ಲ ಎಂದು ಟಿಎಂಸಿ ಹೇಳಿದೆ.

ಮಮತಾ ಬ್ಯಾನರ್ಜಿ ಅವರ ಈ ನಿಲುವಿಗೆ ಕೈ ಪಾಳಯದ ನಾಯಕರು ಸಹಮತ ಸೂಚಿಸಿಲ್ಲ. 'ನಾವು ರಾಜಕೀಯದಿಂದ ಸ್ವಯಂ ನಿವೃತ್ತಿ ಪಡೆದಿಲ್ಲ. ಬಿಜೆಪಿಯೇತರ ಪಕ್ಷಗಳು ನಮ್ಮನ್ನು ಸುಮ್ಮನಿರುವಂತೆ ಹೇಳುತ್ತಿವೆ. ಆದರೆ, ನಾವು ಪಶ್ಚಿಮ ಬಂಗಾಳದಲ್ಲಿ ಸಕ್ರಿಯವಾಗಿದ್ದೇವೆ' ಎನ್ನುತ್ತಾರೆ ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು.

'ದೆಹಲಿ, ಪಂಜಾಬ್, ಪಶ್ಚಿಮ ಬಂಗಾಳದಲ್ಲಿ ಹಲವು ವರ್ಷಗಳಿಂದ ಪಕ್ಷ ಅಸ್ತಿತ್ವದಲ್ಲಿದೆ. ಗೋವಾ ಮತ್ತು ಗುಜರಾತ್‌ನಲ್ಲಿ ಎಎಪಿ ಮತ್ತು ಟಿಎಂಸಿಗೆ ಅಸ್ತಿತ್ವವೇ ಇಲ್ಲ. ಆದರೂ, ಅಲ್ಲಿ ನಮ್ಮ ವಿರುದ್ಧವೇ ಆ ಪಕ್ಷಗಳು ಕಣಕ್ಕಿಳಿದವು. ಕಾಂಗ್ರೆಸ್ ವರ್ಚಸ್ಸಿಗೆ ಧಕ್ಕೆ ತಂದು ನಮ್ಮ ಮತಗಳನ್ನು ಸೆಳೆಯುವುದಷ್ಟೇ ಅವರ ಉದ್ದೇಶ' ಎಂಬುದು ಅವರ ಅಭಿಪ್ರಾಯ.

ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮತ್ತು ದೆಹಲಿಯನ್ನು ಮಿತ್ರ ಪಕ್ಷಗಳಿಗೆ ಬಿಟ್ಟುಕೊಡುವಂತೆ ಸಭೆಯಲ್ಲಿ ಮಮತಾ ಅವರು, ಕಾಂಗ್ರೆಸ್ ಮೇಲೆ ಒತ್ತಡ ಹೇರುವ ಸಾಧ್ಯತೆ ಇದೆ. ಕಾಂಗ್ರೆಸ್ ಮುಸ್ಲಿಂ ಮತದಾರರನ್ನು ನೆಚ್ಚಿಕೊಂಡಿದೆ. ಹಾಗಾಗಿ, ಆ ರಾಜ್ಯಗಳಲ್ಲಿ ಮುಸ್ಲಿಂ ಮತಗಳು ಕಾಂಗ್ರೆಸ್ ಪಾಲಾಗುತ್ತವೆ ಎಂಬುದು ಅವರ ಆತಂಕಕ್ಕೆ ಮೂಲ ಕಾರಣವಾಗಿದೆ.

ಕರ್ನಾಟಕದ ಚುನಾವಣೆಯಲ್ಲಿ ಮುಸ್ಲಿಂ ಮತಗಳನ್ನು ಸೆಳೆಯುವಲ್ಲಿ 'ಕೈ' ಪಡೆ ಯಶಸ್ವಿಯಾಗಿದೆ. ಅಲ್ಲದೇ, ಅಲ್ಪಸಂಖ್ಯಾತರ ಪ್ರಾಬಲ್ಯ ವಿದ್ದ ಪಶ್ಚಿಮ ಬಂಗಾಳದ ಉಪ ಚುನಾ ವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಜಯಭೇರಿ ಬಾರಿಸಿದ್ದಾರೆ. ಅಲ್ಪಸಂಖ್ಯಾತರ ಮತ ಸೆಳೆಯಲು ಗುಜರಾತ್ ಮತ್ತು ದೆಹಲಿಯಲ್ಲಿ ಎಎಪಿ ರೂಪಿಸಿದ ತಂತ್ರವೂ ಫಲಿಸಿಲ್ಲ. ಹಾಗಾಗಿ, ಮುಸ್ಲಿಂಮರು ನಮ್ಮಿಂದ ದೂರವಾಗಿದ್ದಾರೆ ಎಂಬುದು ಎಎಪಿ ಮತ್ತು ಟಿಎಂಸಿ ಮುಖ್ಯಸ್ಥರಿಗೆ ಅರಿವಾಗಿದೆ.

ಮತ್ತೊಂದೆಡೆ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಕೂಡ ಕಾಂಗ್ರೆಸ್ ತನ್ನ ತಂತ್ರಗಾರಿಕೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಈ ಹಾದಿಯಲ್ಲಿ ಎಸ್.ಪಿ ಉದಾರವಾಗಿದೆ ಎಂದಿದ್ದಾರೆ.

'ಭಾರತ್ ರಾಷ್ಟ್ರ ಸಮಿತಿಗೆ ಪ್ರತಿ ಪಕ್ಷಗಳ ಜೊತೆಗೆ ಒಗ್ಗೂಡಲು ಇಷ್ಟವಿಲ್ಲ. ಬಿಜೆಪಿಯು ಮಹಾರಾಷ್ಟ್ರದಲ್ಲಿ ರಚನೆಯಾಗಿದ್ದ ಮಹಾ ವಿಕಾಸ ಅಘಾಡಿ ಸರ್ಕಾರವನ್ನು ಉರುಳಿಸಿ ಅಧಿಕಾರ ಹಿಡಿದಿದೆ. ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಎಲ್ಲಾ ರಾಜ್ಯಗಳಲ್ಲೂ ಪಕ್ಷ ವಿಸ್ತರಿಸಲು ಅಪೇಕ್ಷಿಸುತ್ತಾರೆ. ಬಿಆರ್‌ಎಸ್, ಬಿಜೆಪಿಯ ಬಿ ಟೀಮ್ ಆಗಿದೆ ಎನ್ನುತ್ತಾರೆ ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು.

'ವಿಪಕ್ಷಗಳ ಎಲ್ಲಾ ಸಲಹೆ ಒಪ್ಪಿಕೊಳ್ಳಲು ಕಾಂಗ್ರೆಸ್ ತಯಾರಿಲ್ಲ. ತೆಲಂಗಾಣದಲ್ಲಿ ಪಕ್ಷದ ಸಂಘಟನೆ ವೃದ್ಧಿಸಿದೆ. ಅಲ್ಲಿ ಬಿಆರ್‌ಎಸ್‌ಗೆ ಅವಕಾಶ ಬಿಟ್ಟುಕೊಟ್ಟರೆ ಬಿಜೆಪಿ ವರದಾನವಾಗಲಿದೆ. ಆಂತರಿಕವಾಗಿ ಪಕ್ಷಕ್ಕೆ ನಷ್ಟವಾಗಲಿದೆ' ಎಂಬುದು ಅವರ ಅಭಿಪ್ರಾಯ.

2024ಕ್ಕೆ ಯುಪಿಎ

ನವದೆಹಲಿ (ಪಿಟಿಐ): '2024ರ ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಸಮಾನ ಉದ್ದೇಶದ ಕಾರ್ಯಸೂಚಿ ಹೊಂದಿದ್ದರೆ, ಬಿಜೆಪಿ ಅಭ್ಯರ್ಥಿಗಳಿಗೆ ಎದುರಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವೇಳೆ ವಿರೋಧ ಪಕ್ಷಗಳು 'ಕೊಡು–ಕೊಳ್ಳುವಿಕೆ' ನೀತಿಯನ್ನು ಪಾಲಿಸಿದರೆ ಯುಪಿಎ–3 ಅಧಿಕಾರಕ್ಕೆ ಬರುವ ಸಾಧ್ಯತೆ ಇದೆ' ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಹೇಳಿದ್ದಾರೆ.

ಶಿಕ್ಷಣ

ಕಪ್ಪು ಬೋರ್ಡ್ ವಿದ್ಯಾರ್ಥಿಯ ಜೀವನವನ್ನು ಪ್ರಕಾಶಮಾನಗೊಳಿಸುತ್ತದೆ
– ಅಬ್ದುಲ್ ಕಲಾಂ

ಜೀವನ ಶಾಲೆಯಲ್ಲಿ ತರಬೇತಿ ನಿರತ ವಿದ್ಯಾರ್ಥಿ

‘ಜೀವನ ಶಾಲೆ’

ವಿಶಿಷ್ಟ ತರಬೇತಿ ಕಾರ್ಯಕ್ರಮ

ಜೀವನ ಶಾಲೆಯಲ್ಲಿ ತರಬೇತಿಯ ದೃಶ್ಯ

ಔಪಚಾರಿಕ ಶಿಕ್ಷಣದಲ್ಲಿ ಆಸಕ್ತಿ ಇಲ್ಲದ, ಹಳ್ಳಿಯಲ್ಲೇ ಇದ್ದುಕೊಂಡು ಪರಿಸರಕ್ಕೆ ಹತ್ತಿರವಾಗಿ ತಮ್ಮ ಜೀವನವನ್ನು ಕಟ್ಟಿಕೊಳ್ಳಬೇಕೆಂಬ ಕನಸು ಹೊತ್ತಿರುವ ಯುವಕರಿಗೆ ಒಂದು ಹೊಸ ಮಾರ್ಗವನ್ನು ನೀಡುವ ವಿಶಿಷ್ಟ ತರಬೇತಿ ಕಾರ್ಯಕ್ರಮ ‘ಜೀವನ ಶಾಲೆ’.

ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿರುವ ಜನಪದ ಸೇವಾ ಟ್ರಸ್ಟ್ ಈ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಈ ತರಬೇತಿಯಲ್ಲಿ ಎರಡು ವರ್ಷದ ಫೌಂಡೇಶನ್ ಕೋರ್ಸ್ ಮತ್ತು ಎರಡು ವರ್ಷದ ಅಡ್ವಾನ್ಸ್ ಕೋರ್ಸ್ ಇರಲಿದೆ.

ಮೇಲುಕೋಟೆ ಸಮೀಪದಲ್ಲಿ ಪರಿಸರದ ನಡುವಿರುವ ಸರಳ, ಸುಂದರ ಮತ್ತು ಪ್ರಶಾಂತ ವಾತಾವರಣದ ‘ಹೊಸ ಜೀವನ ದಾರಿ’ ಕೇಂದ್ರದಲ್ಲಿ ತರಬೇತಿ ನಡೆಯುತ್ತದೆ. ಇದು ವಸತಿ ಸಹಿತ ತರಬೇತಿ ಕಾರ್ಯಕ್ರಮವಾಗಿದೆ.

ಪ್ರತಿ ದಿನದ ತರಬೇತಿಯಲ್ಲಿ, ಕನ್ನಡ, ಇಂಗ್ಲಿಷ್ ಮತ್ತು ಕಂಪ್ಯೂಟರ್‌ನ ಉತ್ತಮ ಕಲಿಕೆಯಿರುತ್ತದೆ. ಇದರ ಜೊತೆಗೆ, ಒಂದಿಷ್ಟು ಶ್ರಮದ ಕೆಲಸ, ಆಟ, ನಾಟಕ, ಹಾಡು, ಪರಿಸರ ವೀಕ್ಷಣೆ ಮತ್ತು ಅಧ್ಯಯನವೂ ಇರುತ್ತದೆ. ಇವೆಲ್ಲದರೊಂದಿಗೆ ಶೈಕ್ಷಣಿಕ ಪ್ರವಾಸಗಳ ಹದವಾದ ಮಿಶ್ರಣವೂ ಇದೆ.

ಅಡ್ವಾನ್ಸ್ ಕೋರ್ಸ್ ಮುಗಿಸಿದ ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಕಂಪನಿಗಳಲ್ಲಿ ಕೆಲಸಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ.

ವಿದ್ಯಾರ್ಥಿಗಳು ನಿರ್ಭಯವಾಗಿ ತಮ್ಮದೇ ವೇಗದಲ್ಲಿ ಕಲಿಯುವ ವಾತಾವರಣವನ್ನು ನಿರ್ಮಿಸಲಾಗಿದೆ. ಪರಿಣತರ ಮಾರ್ಗದರ್ಶನದಲ್ಲಿ ಕಲಿಕೆ ನಡೆಯುತ್ತದೆ. ವಿದ್ಯಾರ್ಥಿಗಳು ಆತ್ಮಸ್ಥೈರ್ಯದಿಂದ ಮತ್ತು ಸ್ವಾಭಿಮಾನದಿಂದ ಗ್ರಾಮೀಣ ಪ್ರದೇಶದಲ್ಲಿ ಉಳಿದು ಸಂತೋಷದ ಮತ್ತು ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳುವಂತೆ ಮಾಡುವುದು ತರಬೇತಿಯ ಉದ್ದೇಶವಾಗಿದೆ.

ವಯೋಮಿತಿ: 14 ರಿಂದ 16 ವಯಸ್ಸಿನ ಒಳಗಿರುವ ಎಸ್ಸೆಸ್ಸೆಲ್ಸಿ ಪಾಸು ಇಲ್ಲವೇ ಫೇಲಾಗಿರುವ ಗಂಡು ಮಕ್ಕಳಿಗೆ ಅವಕಾಶ.

ಅಭ್ಯರ್ಥಿಗಳ ಆಯ್ಕೆ: ಈ ವರ್ಷ ಕೇವಲ ಹತ್ತು ಮಕ್ಕಳನ್ನು , ಅವರ ಮನೋಸ್ಥಿತಿ ಮತ್ತು ಮೌಲ್ಯಗಳನ್ನು ಗಮನಿಸಿ ತರಬೇತಿಗೆ ಆಯ್ಕೆ ಮಾಡಿಕೊಳ್ಳಲಾಗುವುದು.

ತರಬೇತಿ, ಊಟ ಮತ್ತು ವಸತಿಯನ್ನು ಉಚಿತವಾಗಿ ನೀಡಲಾಗುತ್ತದೆ.

ತರಬೇತಿಯನ್ನು ಸಮಾಧಾನಕರವಾಗಿ ಪೂರೈಸಿದ ನಂತರ ಸಂಸ್ಥೆಯು ಪ್ರಮಾಣಪತ್ರವನ್ನು ನೀಡಲಿದೆ.

ತರಬೇತಿಗೆ ಸೇರುವ ಆಸಕ್ತರು ಸಂಪರ್ಕಿಸಬೇಕಾದ ಮೊಬೈಲ್: 9663406366

ವೈದ್ಯಕೀಯ ಕ್ಷೇತ್ರದಲ್ಲಿ ವಿವಿಧ ಕೋರ್ಸ್‌ಗಳು

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಪಿಯುಸಿ ಪೂರ್ಣಗೊಳಿಸಿದ್ದೇನೆ. ನರ್ಸಿಂಗ್ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳ ಬಗ್ಗೆ ಮಾಹಿತಿ ಬೇಕಿದೆ. ಹೆಣ್ಣು ಮಕ್ಕಳಿಗೆ ಯಾವ ಕೋರ್ಸ್ ಸೂಕ್ತ?

ಹೆಸರು, ಊರು ತಿಳಿಸಿಲ್ಲ.

ವೃತ್ತಿ/ಕೋರ್ಸ್ ಆಯ್ಕೆ ಮಾಡುವಾಗ ಲಿಂಗಭೇದವಿಲ್ಲದೇ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಸಾಮರ್ಥ್ಯ, ಕೌಶಲಗಳು ಪ್ರಮುಖ ಆಧಾರಗಳಾಗಿರಬೇಕು. ನೀವು ಪರಿಶೀಲಿಸುತ್ತಿರುವ ಎರಡೂ ವೃತ್ತಿಗಳ ಯಶಸ್ಸಿಗೆ ಬೇಕಾಗಿರುವ ಜ್ಞಾನ, ಆಸಕ್ತಿ, ಅಭಿರುಚಿ, ಸಾಮರ್ಥ್ಯ ಮತ್ತು ಕೌಶಲಗಳು ವಿಭಿನ್ನವಾಗಿವೆ. ನರ್ಸಿಂಗ್ ವೃತ್ತಿಯಲ್ಲಿ ಯಶಸ್ವಿಯಾಗಲು ಸೇವಾ ಮನೋಭಾವ, ಅನುಭೂತಿ, ನಿಷ್ಠೆ, ಪ್ರಾಮಾಣಿಕತೆ, ಸಮಯ ಪ್ರಜ್ಞೆ ಇತ್ಯಾದಿಗಳ ಅವಶ್ಯಕತೆ ಇದೆ. ಹಾಗೆಯೇ, ಎಂಜಿನಿಯರಿಂಗ್ ವೃತ್ತಿಗೆ ಗಣಿತದಲ್ಲಿ ತಜ್ಞತೆ, ವಿಶ್ಲೇಷಣಾತ್ಮಕ ಕೌಶಲ, ಯೋಜನೆಯ ನಿರ್ವಹಣೆ, ತಾಂತ್ರಿಕ ಕೌಶಲ ಇತ್ಯಾದಿಗಳಿರಬೇಕು. ಆದ್ದರಿಂದ, ನಿಮಗೆ ಸೂಕ್ತವೆನಿಸುವ ವೃತ್ತಿ/ಕೋರ್ಸ್ ಆಯ್ಕೆ ಮಾಡುವುದು ಸೂಕ್ತ. ಪಿಯು ನಂತರ ಬಿ.ಎಸ್ಸಿ(ನರ್ಸಿಂಗ್) ಕೋರ್ಸ್ ಮಾಡಲು ಈಗ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆಯೋಜಿಸುವ ಪ್ರವೇಶ ಪರೀಕ್ಷೆ ಕಡ್ಡಾಯ ಎನ್ನುವುದು ನಿಮ್ಮ ಗಮನದಲ್ಲಿರಲಿ. ಪಿಯುಸಿ ನಂತರದ ಕೋರ್ಸ್ ಆಯ್ಕೆಗಳ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=ChvTG9rg33A

2. ನಾನು ಪಿಯುಸಿ ಮುಗಿಸಿ ವೈದ್ಯಕೀಯ ಕ್ಷೇತ್ರಕ್ಕೆ ಹೋಗಬೇಕೆಂದುಕೊಂಡಿದ್ದೇನೆ. ಬಿ.ಎಸ್ಸಿಯಲ್ಲಿ ಯಾವ ಕೋರ್ಸ್ ತೆಗೆದುಕೊಳ್ಳಬೇಕು?

ಹೆಸರು, ಊರು ತಿಳಿಸಿಲ್ಲ.

ಪಿಯುಸಿ ನಂತರ ವೈದ್ಯಕೀಯ ಕ್ಷೇತ್ರದಲ್ಲಿ ಅರಸಲು ಎಂಬಿಬಿಎಸ್, ಬಿಡಿಎಸ್, ಆಯುರ್ವೇದ, ನ್ಯಾಚುರೋಪತಿ ಅಲ್ಲದೆ ಹಲವಾರು ವೈವಿಧ್ಯಮಯ ಅವಕಾಶಗಳಿವೆ.

- **ಪ್ಯಾರಮೆಡಿಕಲ್/ಇನ್ನಿತರ ಕೋರ್ಸ್‌ಗಳು:** ಬಿ.ಎಸ್ಸಿ ಕೋರ್ಸ್‌ನ್ನು ಮೆಡಿಕಲ್ ಸೈನ್ಸ್, ಲ್ಯಾಬೋರೇಟರಿ ಟೆಕ್ನಾಲಜಿ, ಇಮೇಜಿಂಗ್ ಟೆಕ್ನಾಲಜಿ, ಅನಸ್ತೇಶಿಯ ಟೆಕ್ನಾಲಜಿ, ಆಪರೇಷನ್ ಥಿಯೇಟರ್ ಟೆಕ್ನಾಲಜಿ, ಡಯಾಲಿಸಿಸ್ ಟೆಕ್ನಾಲಜಿ, ಹಾಸ್ಪಿಟಲ್ ಮ್ಯಾನೇಜ್‌ಮೆಂಟ್, ರೇಡಿಯಾಲಜಿ, ನ್ಯೂಕ್ಲಿಯರ್ ಮೆಡಿಸಿನ್ ಟೆಕ್ನಾಲಜಿ, ಕಾರ್ಡಿಯಾಕ್ ಟೆಕ್ನಾಲಜಿ, ನರ್ಸಿಂಗ್, ಡಯಟಿಕ್ಸ್, ಫಿಸಿಯೋಥೆರಪಿ, ಸ್ಪೋರ್ಟ್ಸ್ ಸೈನ್ಸ್ ಮುಂತಾದ ವಿಭಾಗಗಳಲ್ಲಿ ಮಾಡಬಹುದು.
- **ಫಾರ್ಮಾ:** ಬಿ.ಫಾರ್ಮಾ ಕೋರ್ಸ್ ರಾಸಾಯನಿಕ ವಿಜ್ಞಾನ, ಆರೋಗ್ಯ, ಔಷಧೋಪಚಾರ ಮತ್ತು ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಬೇಡಿಕೆಯಲ್ಲಿರುವ ಕ್ಷೇತ್ರ. ಈ ಪದವಿಯ ನಂತರ ಸರ್ಕಾರಿ ಮತ್ತು ಖಾಸಗಿ ವಲಯದ ಆಸ್ಪತ್ರೆಗಳು, ಫಾರ್ಮಾ ಕಂಪನಿಗಳು, ಸಂಶೋಧನಾ ಸಂಸ್ಥೆಗಳು, ಆರೋಗ್ಯ ಮತ್ತು ಡ್ರಗ್ ಕಂಟ್ರೋಲ್ ಇಲಾಖೆಗಳು, ಲ್ಯಾಬೋರೇಟರಿಗಳು, ಕಾಲೇಜುಗಳು, ಮೆಡಿಕಲ್ ಟ್ರಾನ್ಸ್ಕ್ರಿಪ್ಷನ್ ಸಂಸ್ಥೆಗಳು ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ವೃತ್ತಿಯ ಅವಕಾಶಗಳಿವೆ
- **ವಿಜ್ಞಾನ, ಅನ್ವಯಿಕ ವಿಜ್ಞಾನ ಮತ್ತು ಸಂಶೋಧನೆ:** ಈ ಕ್ಷೇತ್ರಗಳಲ್ಲಿ ಆಸಕ್ತಿಯಿದ್ದರೆ ಬಿ.ಎಸ್ಸಿ ಕೋರ್ಸ್ ಅನ್ನು ಜೀವವಿಜ್ಞಾನ, ಬಯೋಕೆಮಿಸ್ಟ್ರಿ, ಬಯೋಟೆಕ್ನಾಲಜಿ, ಬಯೋಇನ್‌ಫರ್‌ಮೇಟಿಕ್ಸ್, ಮೈಕ್ರೊಬಯಾಲಜಿ, ಕ್ಲಿನಿಕಲ್ ರಿಸರ್ಚ್, ಜೆನೆಟಿಕ್ಸ್, ಸೈಕಾಲಜಿ, ಕ್ರಿಮಿನಾಲಜಿ, ಫೊರೆನ್ಸಿಕ್ ಸೈನ್ಸ್, ಕೌನ್ಸೆಲಿಂಗ್, ಪರಿಸರ ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಮಾಡಿ ವೃತ್ತಿಯನ್ನು ಅರಸಬಹುದು. ಹೆಚ್ಚಿನ ತಜ್ಞತೆಗಾಗಿ, ಎಂ.ಎಸ್ಸಿ/ಪಿಎಚ್.ಡಿ ಮಾಡಬಹುದು.

3. ನನ್ನ ಮಗ ಎಂಜಿನಿಯರಿಂಗ್ ಮಾಡುತ್ತಿದ್ದು, ಒಂದು ವರ್ಷದ ನಂತರ ಕಾಲೇಜನ್ನು ಬದಲಾಯಿಸಬಹುದೇ? ದಯವಿಟ್ಟು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಸಾಮಾನ್ಯವಾಗಿ ವಿಶ್ವವಿದ್ಯಾಲಯದ ನಿಯಮಾವಳಿಗಳಂತೆ ವಿದ್ಯಾರ್ಥಿಗಳು ಒಂದು ವರ್ಷದ ನಂತರ ಕಾಲೇಜಿನ/ವಿಭಾಗದ ಬದಲಾವಣೆಗೆ ಅವಕಾಶವಿರುತ್ತದೆ. ಉದಾಹರಣೆಗೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿಯೂ (ವಿಟಿಯು) ಈ ಅವಕಾಶವಿದೆ.

ನಿಯಮಾವಳಿಗಳು, ಶುಲ್ಕಗಳು ಸರ್ಕಾರಿ/ಅನುದಾನಿತ/ಅನುದಾನರಹಿತ ಕಾಲೇಜುಗಳಿಗೆ ಪ್ರತ್ಯೇಕವಾಗಿ ಅನ್ವಯಿಸುತ್ತದೆ. ಹಾಗಾಗಿ, ಸಂಬಂಧಪಟ್ಟ ಕಾಲೇಜು/ವಿಶ್ವವಿದ್ಯಾಲಯವನ್ನು ಸಂಪರ್ಕಿಸಿ ಮತ್ತು ಹೆಚ್ಚಿನ ಮಾಹಿತಿಗಾಗಿ, ಕಳೆದ ವರ್ಷದ ವಿಟಿಯು ವಿಶ್ವವಿದ್ಯಾಲಯದ ಸುತ್ತೋಲೆಯನ್ನು ಗಮನಿಸಿ:https://vtu.ac.in/wp-content/uploads/2022/11/NOTIFICATION-4170-11162022183808.pdf

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ www.prajavani.net/education-careers **ನೋಡಿ**

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ದ ರೋಡ್ಸ್ ಸ್ಕಾಲರ್‌ಷಿಪ್ಸ್ ಫಾರ್ ಇಂಡಿಯಾ

ವಿವರ: ಬ್ರಿಟನ್(ಯು.ಕೆ)ನಲ್ಲಿರುವ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ಭಾರತದ ಸ್ನಾತಕೋತ್ತರ ಪದವೀಧರರಿಗಾಗಿ ರೂಪಿಸಿರುವ ಆರ್ಥಿಕ ನೆರವಿನ ಯೋಜನೆ ‘ದ ರೋಡ್ಸ್ ಸ್ಕಾಲರ್‌ಷಿಪ್ಸ್ ಫಾರ್ ಇಂಡಿಯಾ’

ಅರ್ಹತೆ: ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಗೆ ಅರ್ಜಿ ಸಲ್ಲಿಸಿರುವ ಭಾರತೀಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ನಿಗದಿತ ವಯಸ್ಸು ಹಾಗೂ ಶೈಕ್ಷಣಿ ಅರ್ಹತೆಯನ್ನು ತಿಳಿಸಬೇಕು.

ಆರ್ಥಿಕ ಧನಸಹಾಯ: ಪೂರ್ಣ ಸಮಯದ ಸ್ನಾತಕೋತ್ತರ ಅಧ್ಯಯನಕ್ಕಾಗಿ ಸಂಪೂರ್ಣ ಅನುದಾನಿತ ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆಯ ದಿನ: 1-08-2023.

ಅರ್ಜಿ ಸಲ್ಲಿಸುವ ವಿಧಾನ : ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: Short Url: www.b4s.in/praja/TRSI4

ಇ ಎಸ್ ಆರ್ ಐ ಇಂಡಿಯಾ ಎಂ.ಟೆಕ್ ಸ್ಕಾಲರ್‌ಷಿಪ್

ವಿವರ: ಜಿಯೊ ಇನ್‌ಫಾರ್ಮೆಟಿಕ್ಸ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ರೂಪಿಸಿರುವ ಯೋಜನೆ ಇಎಸ್ ಆರ್ ಐ ಇಂಡಿಯಾ ಎಂ.ಟೆಕ್ ಸ್ಕಾಲರ್‌ಷಿಪ್ ಪ್ರೋಗ್ರಾಂ 2023.

ವಿದ್ಯಾರ್ಥಿಗಳು, ಸ್ಪೇಶಿಯಲ್ ಮಾಡೆಲಿಂಗ್, ಸ್ಪೇಶಿಯಲ್ ವಿಶ್ಲೇಷಣೆ, ಜಿಐಎಸ್ ಮತ್ತು ಸಂಬಂಧಿತ ವಿಷಯಗಳಿಗೆ ಡಿಜಿಟಲ್ ಇಮೇಜ್ ಪ್ರೊಸೆಸಿಂಗ್ ವಿಷಯಗಳಿರುವ ಕೋರ್ಸ್ ಕಲಿಯುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಹತೆ: ಅರ್ಜಿದಾರರು ಜಿಯೋಇನ್ಫಾರ್ಮ್ಯಾಟಿಕ್ಸ್‌ನಲ್ಲಿ ಸ್ನಾತಕೋತ್ತರ (ಎಂ.ಟೆಕ್/ಎಂ.ಎಸ್‌ಸಿ) ಪದವಿ ಅಥವಾ ಜಿಐಎಸ್ ಮತ್ತು ಸಂಬಂಧಿತ ವಿಷಯಗಳಿರುವ ಕೋರ್ಸ್‌ನ ಎರಡನೇ ವರ್ಷಕ್ಕೆ ಪ್ರವೇಶ ಪಡೆದಿರಬೇಕು.

ಆರ್ಥಿಕ ಸಹಾಯ: ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ₹ 1 ಲಕ್ಷ

ಅರ್ಜಿ ಸಲ್ಲಿಸಲು ಕೊನೆಯ ದಿನ: 10-07-2023

ಅರ್ಜಿ ಸಲ್ಲಿಸುವ ವಿಧಾನ: ಇಮೇಲ್ ಮೂಲಕ ಮಾತ್ರ: gis.education@esri.in

ಹೆಚ್ಚಿನ ಮಾಹಿತಿಗೆ: Short Url: www.b4s.in/praja/GISU1

ಬಹುಮುಖಿ ಉದ್ಯೋಗ ಭರವಸೆಯ ‘ಡಿಸಿಪಿ’ ಕೋರ್ಸ್

ಬಹುಮುಖಿ ಉದ್ಯೋಗದ ಭರವಸೆ ನೀಡುವ ‘ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮಾ’(ಡಿಸಿಪಿ) ಕೋರ್ಸ್ ಕುರಿತ ಪರಿಚಯ ಇಲ್ಲಿದೆ.

ಪ್ರಸ್ತುತ ತಾಂತ್ರಿಕ-ವೈದ್ಯಕೀಯ ಶಿಕ್ಷಣಗಳಂತೆ ಮತ್ತೊಂದು ಬಹುಬೇಡಿಕೆಯಲ್ಲಿರುವುದು ‘ವಾಣಿಜ್ಯ ಶಿಕ್ಷಣ’ ವಿಭಾಗ. ಈ ವಾಣಿಜ್ಯ ಶಿಕ್ಷಣದಲ್ಲಿ ಆಯಾ ಕಾಲದ ಅಗತ್ಯಗಳಿಗೆ ತಕ್ಕಂತೆ ಹೊಸ ಪಠ್ಯಕ್ರಮದೊಂದಿಗೆ ಬಹೂಪಯೋಗಿ-ವಿಭಿನ್ನ ಉದ್ಯೋಗಾವಕಾಶ ಒದಗಿಸುವ ಪ್ರಮುಖ ತಾಂತ್ರಿಕೇತರ ಡಿಪ್ಲೊಮಾ ಕೋರ್ಸ್ ಎಂದರೆ, ಅದು ‘ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್'(ಡಿಸಿಪಿ).

ಕೋರ್ಸ್, ಪಠ್ಯಕ್ರಮ

ಈ ಡಿಸಿಪಿ ಕೋರ್ಸ್‌ನ ಅವಧಿ ಮೂರು ವರ್ಷಗಳು. ಸೆಮಿಸ್ಟರ್ ಪದ್ಧತಿಯಲ್ಲಿ ಶಿಕ್ಷಣ ನೀಡಲಾಗುತ್ತದೆ. ಒಟ್ಟು ಆರು ಸೆಮಿಸ್ಟರ್‌ಗಳಿರುತ್ತವೆ. 10ನೇ ತರಗತಿ ಪಾಸಾದವರು ಕೋರ್ಸ್‌ಗೆ ಪ್ರವೇಶ ಪಡೆಯಬಹುದು. ಇಂಗ್ಲಿಷ್ ಮತ್ತು ಕನ್ನಡ ಎರಡು ಮಾಧ್ಯಮಗಳಲ್ಲಿದೆ.

ಕನ್ನಡ ಮಾಧ್ಯಮದಲ್ಲಿನ ಕೋರ್ಸ್‌ಗೆ ಪ್ರವೇಶ ಪಡೆದವರಿಗೆ ಶೀಘ್ರಲಿಪಿ ಮತ್ತು ಬೆರಳಚ್ಚು ವಿಷಯಗಳು ಮಾತ್ರ ಕನ್ನಡದಲ್ಲಿ ಕಲಿಯಬೇಕು. ಇಂಗ್ಲಿಷ್ ಕೋರ್ಸ್‌ಗೆ ಪ್ರವೇಶ ಪಡೆದವರು ಶೀಘ್ರಲಿಪಿ ಮತ್ತು ಬೆರಳಚ್ಚು ವಿಷಯಗಳು ಇಂಗ್ಲಿಷ್‌ನಲ್ಲಿ ಕಲಿಯಬೇಕು. ಈ ಎರಡು ವಿಷಯಗಳನ್ನು ಹೊರತುಪಡಿಸಿ ಇತರೆ ವಿಷಯಗಳನ್ನು ಇಂಗ್ಲಿಷ್ ಮತ್ತು ಕನ್ನಡ ಎರಡೂ ಮಾಧ್ಯಮದಲ್ಲಿ ಕಲಿಯಬಹುದು.

ಹೊಸ ಪಠ್ಯಕ್ರಮ: ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದಿಂದ ಫಲಿತಾಂಶ ಆಧಾರಿತ ಹೊಸಪಠ್ಯಕ್ರಮ ಜಾರಿಗೆ ಬಂದಿದೆ. ಸಿ-20 ಎಂಬ ಪರಿಷ್ಕೃತ ಪಠ್ಯಕ್ರಮವು ಎಲ್ಲ ಬಗೆಯ ಆಧುನಿಕ ಆಡಳಿತಾತ್ಮಕ ಮತ್ತು ವ್ಯವಹಾರಿಕ ಕಚೇರಿಗಳಲ್ಲಿ ಕಾರ್ಯನಿರ್ವಹಿಸಲು ಬೇಕಾದ ವಿಷಯಗಳನ್ನು ಒಳಗೊಂಡಿದೆ. ಎಲ್ಲ ವರ್ಗದ ಕ್ರಿಯಾತ್ಮಕ ಮಾನವ ಸಂಪನ್ಮೂಲವನ್ನು ಅಣಿಗೊಳಿಸುವ ತಾಂತ್ರಿಕ ಕೌಶಲ, ನಿರ್ವಹಣೆ ಮತ್ತು ಸಂವಹನ ಕೌಶಲಗಳನ್ನು ತರಬೇತಿ ನೀಡುತ್ತದೆ.

ಈ ತರಬೇತಿಗೆ ಬೇಕಾದ ವಾಣಿಜ್ಯ ಶಾಸ್ತ್ರ, ಲೆಕ್ಕಶಾಸ್ತ್ರ, ವ್ಯವಹಾರ ನಿರ್ವಹಣೆ, ವಾಣಿಜ್ಯ ಕಾನೂನು, ಭಾರತೀಯ ಹಣಕಾಸು ವ್ಯವಸ್ಥೆ, ಕಾರ್ಪೊರೇಟ್ ಅಕೌಂಟ್ಸ್, ಆಡಿಟಿಂಗ್, ಮಾನವ ಸಂಪನ್ಮೂಲ, ಭಾರತದ ಸಂವಿಧಾನ, ಅರ್ಥಶಾಸ್ತ್ರ, ಸಂವಹನ ಕೌಶಲ – ಇಂಗ್ಲಿಷ್‌ಭಾಷೆ ಇತ್ಯಾದಿ ತಾತ್ವಿಕ ವಿಷಯಗಳನ್ನು ಕಲಿಸಲಾಗುತ್ತದೆ. ಟ್ಯಾಲಿ(Talley), ಕಂಪ್ಯೂಟರ್ ಬೇಸಿಕ್, ವೆಬ್‌ಡಿಸೈನ್, ಡಿಟಿಪಿ, ಇ–ಆಫೀಸ್-ಇತ್ಯಾದಿ ತಾಂತ್ರಿಕ ಪ್ರಾಯೋಗಿಕ ವಿಷಯಗಳ ಜೊತೆಗೆ ಐಚ್ಛಿಕ ವಿಷಯಗಳಾಗಿ ಕನ್ನಡ, ಇಂಗ್ಲಿಷ್ ಶೀಘ್ರಲಿಪಿ-ಬೆರಳಚ್ಚು (ಶಾರ್ಟ್‌ಹ್ಯಾಂಡ್ ಟೈಪಿಂಗ್) ಮತ್ತು ಕಂಪ್ಯೂಟರ್ ಬೆರಳಚ್ಚು (ಕಂಪ್ಯೂಟರ್ ಟೈಪಿಂಗ್) ಕೌಶಲಗಳನ್ನು ಕಲಿಸಲಾಗುತ್ತದೆ. ಅಂತಿಮ ಸೆಮಿಸ್ಟರ್‌ನಲ್ಲಿ ತರಗತಿ ಶಿಕ್ಷಣಕ್ಕೆ ಬದಲಾಗಿ ಪ್ರಾಯೋಗಿಕ ಕೌಶಲಾನುಭವ ನೀಡಲಾಗುತ್ತದೆ. ನಂತರ ಆಯ್ದ ವಿಷಯಗಳಲ್ಲಿ ‘ಇಂಟರನ್‌ಷಿಪ್’ ಕೂಡ ಇದೆ.

ತಾಂತ್ರಿಕ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿರುವ ರಾಜ್ಯದ 40ಕ್ಕೂ ಅಧಿಕ ಸರ್ಕಾರಿ/ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಈ ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮಾ ಕೋರ್ಸ್ ಇದೆ.

ಶಿಕ್ಷಣ ಮುಂದುವರಿಕೆ

ಡಿಪ್ಲೊಮಾ ತೇರ್ಗಡೆಯಾದ ನಂತರ ಶಿಕ್ಷಣವನ್ನು ಮುಂದುವರಿಸಲು ಆಸಕ್ತಿ ಇರುವವರು ನೇರವಾಗಿ 2 ನೇ ಬಿ.ಕಾಂ.-ಪದವಿಗೆ ಸೇರಬಹುದು. ನಂತರ ಎಂ.ಕಾಂ/ ಎಂಬಿಎ ಮತ್ತಿತರ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ಮಾಡಬಹುದು. ಸಿಎ/ಎಸಿಎಸ್ ಗಾಗಿ ಸಿಪಿಟಿ ಪರೀಕ್ಷೆಗಳನ್ನು ತೆಗೆದು ಕೊಳ್ಳಬಹುದು. ಪದವಿ ನಂತರ ಸಿಎ/ಐಸಿಡಬ್ಲ್ಯು ನಂತಹ ಉನ್ನತ ವೃತ್ತಿಪರ ಶಿಕ್ಷಣವನ್ನು ಮಾಡಬಹುದಾಗಿದೆ.

ಉದ್ಯೋಗಾವಕಾಶಗಳು

ಡಿಪ್ಲೊಮಾ ಮುಗಿದ ಮೇಲೆ ಕೇಂದ್ರ/ ರಾಜ್ಯ ಸರ್ಕಾರದ ಇಲಾಖೆಗಳು ಮತ್ತು ಖಾಸಗಿ ಉದ್ಯಮಗಳು/ವಾಣಿಜ್ಯ ಸಂಸ್ಥೆಗಳು 1 ವರ್ಷದ ಅಪ್ರೆಂಟಿಸ್ ತರಬೇತಿಗೆ ಅವಕಾಶ ಮಾಡಿಕೊಡುತ್ತವೆ. ಅಲ್ಲದೆ, ಎಲ್ಲ ವರ್ಗದ ಕಚೇರಿಗಳಿಗೆ ಬೇಕಾದ ಅಕೌಂಟೆಂಟ್/ ಆಪ್ತ ಸಹಾಯಕರು-ಕನ್ನಡ ಮತ್ತು ಇಂಗ್ಲಿಷ್ ಶೀಘ್ರಲಿಪಿಗಾರರರು-ಬೆರಳಚ್ಚುಗಾರರ ಹುದ್ದೆಗಳು/ಕಂಪ್ಯೂಟರ್ ಕೌಶಲ ಆಧಾರಿತ ಉದ್ಯೋಗಾವಕಾಶಗಳು ಎಲ್ಲ ಬಗೆಯ ಉದ್ಯಮಗಳ ಕಚೇರಿಗಳಲ್ಲಿ ಲಭ್ಯವಿವೆ.

ಕನ್ನಡ ಶೀಘ್ರಲಿಪಿ/ ಬೆರಳಚ್ಚು ತೇರ್ಗಡೆಯಾದವರಿಗೆ ರಾಜ್ಯಸರ್ಕಾರದಲ್ಲಿ ಶೀಘ್ರಲಿಪಿ / ಬೆರಳಚ್ಚುಗಾರರು ಹುದ್ದೆಗಳಿಗೆ ಸಾಕಷ್ಟು ಅವಕಾಶ ಗಳಿವೆ. ಅಲ್ಲದೆ ಕನ್ನಡ ಮತ್ತು ಇಂಗ್ಲಿಷ್ ಶೀಘ್ರಲಿಪಿ ತೇರ್ಗಡೆಯಾದವರಿಗೆ ರಾಜ್ಯ ಸರ್ಕಾರದ ಸ್ವಾಯತ್ತ/ ಸ್ಥಳೀಯ ಸಂಸ್ಥೆಗಳು ಮತ್ತು ನ್ಯಾಯಾಲಯಗಳಲ್ಲಿ ಉದ್ಯೋಗಾವಕಾಶವಿದೆ.

ವಿಶೇಷ ಸೂಚನೆ: ಡಿಪ್ಲೊಮಾ ಪೂರ್ಣಗೊಳಿಸಿರದಿದ್ದರೂ, ಕನ್ನಡ ಶೀಘ್ರಲಿಪಿ / ಬೆರಳಚ್ಚು ವಿಷಯಗಳಲ್ಲಿ ತೇರ್ಗಡೆಯಾಗಿದ್ದರೆ, ರಾಜ್ಯ ಸರ್ಕಾರದ ಬೆರಳಚ್ಚು/ ಶೀಘ್ರಲಿಪಿಗಾರರ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಹಾಗೆಯೇ ಪದವಿ ಪಡೆದ ನಂತರ ಐಎಎಸ್ / ಐಪಿಎಸ್ / ಕೆಎಎಸ್ / ಬ್ಯಾಂಕಿಂಗ್ ಹುದ್ದೆಗಳಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು.

ಡಿಪ್ಲೊಮಾ ತೇರ್ಗಡೆಯನ್ನು ಪಿಯುಸಿ ಶಿಕ್ಷಣಕ್ಕೆ ತತ್ಸಮಾನ ಎಂದು ಪರಿಗಣಿಸಲಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಬ್ಯಾಂಕುಗಳ ಲಿಪಿಕ ಹುದ್ದೆಗಳಿಗೆ ಅರ್ಹರೆಂದು ಪರಿಗಣಿಸಲಾಗಿದೆ.

(ಪೂರಕ ಮಾಹಿತಿ: ಸರ್ಕಾರಿ ಜಿ.ಆರ್. ಇನ್‌ಸ್ಟಿಟ್ಯೂಟ್ ಆಫ್ ಕರ್ಮಷಿಯಲ್ ಪ್ರಾಕ್ಟೀಸ್, ಬೆಂಗಳೂರು)

‘ಜಿಆರ್‌ಐಸಿಪಿ’ಯಲ್ಲಿ ಪ್ರವೇಶ ಪ್ರಕ್ರಿಯೆ

ಬೆಂಗಳೂರಿನ ಕೆ.ಆರ್.ವೃತ್ತದಲ್ಲಿರುವ (ಎಸ್‌ಜೆಪಿ ತಾಂತ್ರಿಕ ಮಹಾವಿದ್ಯಾಲಯದ ಆವರಣ) **ಸರ್ಕಾರಿ ಜಿ.ಆರ್.ಐ.ಸಿ.ಪಿ ಕಾಲೇಜಿನಲ್ಲಿ** ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ಕೋರ್ಸ್‌ಗೆ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದೆ.‘ಮೊದಲು ಬಂದವರಿಗೆ ಮೊದಲು ಪ್ರವೇಶ’ (ಮೆರಿಟ್ ಪರಿಗಣನೆ ಇಲ್ಲ) ಆಧಾರದಲ್ಲಿ ಪ್ರವೇಶ ನೀಡಲಾಗುತ್ತಿದೆ.

ಹೆಚ್ಚಿನ ಮಾಹಿತಿಗೆ: ಸರ್ಕಾರಿ ಜಿ.ಆರ್. ಇನ್‌ಸ್ಟಿಟ್ಯೂಟ್ ಆಫ್ ಕರ್ಮಷಿಯಲ್ ಪ್ರಾಕ್ಟೀಸ್, ಎಸ್‌ಜೆಪಿ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರು -560001. ದೂರವಾಣಿ ಸಂಖ್ಯೆ 9880039144, 7204015691

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಅತ್ಯಂತ ಮುಖ್ಯವಾದುದನ್ನೇ ಬಿಟ್ಟು ಅನೇಕ ಸಂಗತಿಗಳನ್ನು ನೀವು ಅರಿತಿರಬಹುದು. ಹೀಗಾಗಿ, ನೀವು ಗಳಿಸಿರುವ ಜ್ಞಾನದ ಪ್ರಮಾಣಕ್ಕಿಂತ ಅದರ ಗುಣಮಟ್ಟ ಮುಖ್ಯವಾಗುತ್ತದೆ.

-ಲಿಯೊ ಟಾಲ್‌ಸ್ಟಾಯ್

ಸೆಂಗೋಲ್‌ನಿಂದ ಸೆಂಥಿಲ್‌ವರೆಗೆ ಅದೇ ನಡೆ, ಅದೇ ಉದ್ದೇಶ

ಸೆಂಗೋಲ್‌ನಿಂದ ಸೆಂಥಿಲ್‌ವರೆಗೆ ರಾಜಕಾರಣದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ತಮಿಳುನಾಡಿನಲ್ಲಿ ನೆಲೆಯೂರಲು ಬಿಜೆಪಿಗೆ ಈವರೆಗೆ ಸಾಧ್ಯವಾಗಿಲ್ಲ. ಹಾಗಾಗಿಯೇ ತಮಿಳುನಾಡಿನಲ್ಲಿ ಕೇಂದ್ರ ಸರ್ಕಾರವು ಒಂದೇ ಮಾದರಿಯ ರಾಜಕಾರಣವನ್ನು ಅನುಸರಿಸುತ್ತಿದೆ. ಸೆಂಗೋಲ್ ಎಂದರೆ ಅಧಿಕಾರದಂಡ. ಇದನ್ನು ಬಳಸಿಕೊಂಡು ತಮಿಳುನಾಡಿನ ಜನರ ಮನಸ್ಸಿನಲ್ಲಿ ಸ್ಥಾನ ಪಡೆದುಕೊಳ್ಳಬೇಕು ಎಂಬುದು ಬಿಜೆಪಿಯ ಕಾರ್ಯತಂತ್ರ. ಅದಕ್ಕಾಗಿಯೇ ಸಂಸತ್ತಿನಲ್ಲಿ ದೊಡ್ಡ ಪ್ರಹಸನವನ್ನೇ ನಡೆಸಲಾಯಿತು. ತಮಿಳುನಾಡಿನ ಇಂಧನ ಸಚಿವರಾಗಿದ್ದ ಸೆಂಥಿಲ್ ಬಾಲಾಜಿಯವರ ಬಂಧನ ಇದೇ ಉದ್ದೇಶವನ್ನೇ ಹೊಂದಿದೆ. ಕೇಂದ್ರವು ಹೊಸ ರಾಜಕೀಯ ರೂಢಿಯೊಂದನ್ನು ಆರಂಭಿಸಿದೆ. ಬಿಜೆಪಿ ಮತ್ತು ಕೇಂದ್ರ ಸರ್ಕಾರದ ಟೀಕಾಕಾರರು ಮತ್ತು ಭಿನ್ನಮತೀಯರ ವಿರುದ್ಧ ಕೇಂದ್ರದ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಕಿರುಕುಳ ನೀಡುವುದರ ಜೊತೆಗೆ ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ನಾಯಕರ ಮೇಲೆಯೂ ಇದೇ ಅಸ್ತ್ರ ಬಳಸುವುದೇ ಹೊಸ ರೂಢಿ. ಈ ಎರಡೂ ನಾಟಕಗಳಿಗೆ ತಮಿಳುನಾಡಿನ ಜನರು ಸಾಕ್ಷಿಯಾದರು. ಸಚಿವಾಲಯ ಹೊಕ್ಕ ಜಾರಿ ನಿರ್ದೇಶನಾಲಯದ ಅಧಿಕಾರಿಗಳು 18 ತಾಸು ಶೋಧ ನಡೆಸಿ, ಸೆಂಥಿಲ್ ಅವರಿಗೆ ವಿರಾಮವನ್ನೇ ಕೊಡದೆ ತನಿಖೆ ನಡೆಸಿದರು. ಭ್ರಷ್ಟಾಚಾರ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪದಲ್ಲಿ ಮಧ್ಯರಾತ್ರಿಯ ಹೊತ್ತಿಗೆ ಬಂಧಿಸಿದರು. ಸೆಂಥಿಲ್ ಅವರು ಈಗ ಹೃದಯ ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆ ಸೇರಿದ್ದಾರೆ.

ತನಿಖಾ ಸಂಸ್ಥೆಗಳ ತನಿಖೆಯು ರಾಜಕೀಯ ಪ್ರಹಸನದ ಸ್ವರೂಪ ಪಡೆದುಕೊಳ್ಳಬಾರದು

ಸೆಂಥಿಲ್ ಅವರ ಮೇಲಿದ್ದ ಆರೋಪಗಳು ಹೊಸವೇನೂ ಅಲ್ಲ. 2011ರಿಂದ 2015ರ ಅವಧಿಯಲ್ಲಿ ಎಐಎಡಿಎಂಕೆ ನೇತೃತ್ವದ ಸರ್ಕಾರದಲ್ಲಿ ಅವರು ಸಚಿವರಾಗಿದ್ದಾಗ ಅವರ ವಿರುದ್ಧ ಈ ಆರೋಪಗಳು ಕೇಳಿಬಂದಿದ್ದವು. ಈ ಆರೋಪಗಳ ಕುರಿತು ತನಿಖೆ ಆಗುವ ಅಗತ್ಯವೂ ಇದೆ. ಆದರೆ ಶೋಧ ಮತ್ತು ಬಂಧನಕ್ಕೆ ಸಂಬಂಧಿಸಿ ಅನುಸರಿಸಬೇಕಾದ ಪ್ರಕ್ರಿಯೆಗಳು ಹಾಗೂ ತೋರಿಸಬೇಕಾದ ಔಚಿತ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳು ಇವೆ. ಈ ಪ್ರಶ್ನೆಗಳು ಪ್ರಸ್ತುತ ಮತ್ತು ಅವುಗಳಿಗೆ ಉತ್ತರವೂ ಬೇಕು. ತನಿಖಾ ಸಂಸ್ಥೆಗಳ ತನಿಖೆಯು ರಾಜಕೀಯ ಪ್ರಹಸನದ ಸ್ವರೂಪ ಪಡೆದುಕೊಳ್ಳಬಾರದು. ಸುದೀರ್ಘ ಶೋಧ, ಮಧ್ಯರಾತ್ರಿಯ ಬಂಧನದಂತಹ ಸಿನಿಮೀಯ ಸ್ಪರ್ಶ ಪಡೆದುಕೊಂಡು ಪ್ರಚೋದನಕಾರಿ ಎನಿಸಿಕೊಳ್ಳಬಾರದು. ಇದಕ್ಕೆ ಭಾವಾತಿರೇಕದ ಪ್ರತಿಕ್ರಿಯೆ ವ್ಯಕ್ತವಾಗಿರುವುದರಲ್ಲಿ ಅಚ್ಚರಿ ಏನೂ ಇಲ್ಲ. ಸೆಂಥಿಲ್ ಅವರು ಎಐಎಡಿಎಂಕೆ ತೊರೆದು ಡಿಎಂಕೆ ಸೇರಿದವರು. ಅವರು ತಮಿಳುನಾಡಿನ ಪಶ್ಚಿಮ ಭಾಗದ ಪ್ರಭಾವಿ ನಾಯಕ. ಬಿಜೆಪಿ ಕೂಡ ರಾಜ್ಯದ ಈ ಪ್ರದೇಶವನ್ನೇ ತನಗೆ ನೆಲೆಯೂರಲು ಸಾಧ್ಯತೆ ಹೆಚ್ಚು ಇರುವ ಭಾಗ ಎಂದು ಗುರುತಿಸಿಕೊಂಡಿದೆ. ಬಿಜೆಪಿ ಜೊತೆಗೆ ಮೈತ್ರಿ ಹೊಂದಿರುವ ಎಐಎಡಿಎಂಕೆ ಕೂಡ ಇಲ್ಲಿ ಬಲವಾಗಿದೆ. ಹಾಗಾಗಿಯೇ ಸೆಂಥಿಲ್ ಅವರು ಕೇಂದ್ರ ಸರ್ಕಾರದ ಗುರಿ ಆಗಿದ್ದರಲ್ಲಿ ಆಶ್ಚರ್ಯ ಇಲ್ಲ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಮೇಲಿನ ದಾಳಿ ಎಂದೂ ಈ ಬಂಧನವನ್ನು ವಿಶ್ಲೇಷಿಸಲಾಗುತ್ತಿದೆ. ಏಕೆಂದರೆ, ಬಿಜೆಪಿ ವಿರುದ್ಧ ವಿರೋಧ ಪಕ್ಷಗಳನ್ನು ಒಗ್ಗೂಡಿಸುವಲ್ಲಿ ಸ್ಟಾಲಿನ್ ಅವರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ.

ಭ್ರಷ್ಟಾಚಾರ ಪ್ರಕರಣಗಳ ತನಿಖೆ ನಡೆಯಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮವೂ ಆಗಬೇಕು. ಆದರೆ, ಆಯ್ದ ಭ್ರಷ್ಟಾಚಾರ ಪ್ರಕರಣಗಳಲ್ಲಿ ಮಾತ್ರ ಕ್ರಮ ಕೈಗೊಳ್ಳುವುದು ಕೂಡ ಭ್ರಷ್ಟಾಚಾರ ಎನಿಸಿಕೊಳ್ಳುತ್ತದೆ. ತಮ್ಮ ವಿರುದ್ಧ ಇರುವವರ ಮೇಲೆ ಕ್ರಮ ಕೈಗೊಂಡು ತಮ್ಮವರನ್ನು ರಕ್ಷಿಸುವ ಯಾವುದೇ ಸರ್ಕಾರವು ತನ್ನದು ನೈತಿಕವಾಗಿ ಹೆಚ್ಚುಗಾರಿಕೆಯ ನಡೆ ಎಂದು ಹೇಳಿಕೊಳ್ಳುವಂತಿಲ್ಲ. ಇದು ರಾಜಕಾರಣ ಮತ್ತು ನೈತಿಕತೆಯು ಭ್ರಷ್ಟಗೊಂಡಿರುವುದನ್ನು ಸೂಚಿಸುತ್ತದೆ. ಭ್ರಷ್ಟಾಚಾರದ ಕುರಿತ ಇಂತಹ ಮಾತುಗಳು ಮತ್ತು ಕ್ರಮಗಳು ರಾಜಕೀಯ ಅನುಕೂಲಕ್ಕಾಗಿಯೇ ಹೊರತು ಇನ್ನೇನಲ್ಲ. ಈ ಪ್ರಕ್ರಿಯೆಯು ಆಳ್ವಿಕೆಯನ್ನು ದುರ್ಬಲಗೊಳಿಸಿ ಕೀಳು ಮಟ್ಟಕ್ಕೆ ಇಳಿಸುತ್ತದೆ. ಏಕೆಂದರೆ, ನಿಯಮಬಾಹಿರ ಮತ್ತು ರಾಜಕೀಯಕರಣಗೊಂಡ ತನಿಖಾ ವ್ಯವಸ್ಥೆಯು ತನಿಖೆಯ ಬಲ ಮತ್ತು ವಿಶ್ವಾಸಾರ್ಹತೆಯನ್ನು ಕುಗ್ಗಿಸುತ್ತದೆ. ಸೆಂಥಿಲ್ ಅವರು ಭ್ರಷ್ಟ ಹೌದೇ ಅಲ್ಲವೇ ಎಂಬುದು ಗೊತ್ತಿಲ್ಲ. ಅವರು ಭ್ರಷ್ಟ ಎಂದಾದರೆ ಅವರಿಗೆ ಶಿಕ್ಷೆ ಆಗಲೇಬೇಕು. ಆದರೆ, ಈಗ ಸೆಂಗೋಲ್‌ನಂತೆಯೇ ಸೆಂಥಿಲ್ ಅವರೂ ಒಂದು ಸಂಕೇತವಾಗಿ ರೂಪುಗೊಂಡಿದ್ದಾರೆ. ರಾಜಕೀಯ ಪ್ರಯೋಜನಕ್ಕಾಗಿ ಅವರನ್ನು ಬಳಸಿಕೊಳ್ಳಲಾಗುತ್ತಿದೆ.

ದಿನದ ಟ್ವೀಟ್

ಬದಲಾವಣೆಗೆ ಚಾಲನೆ

ವಂದೇ ಭಾರತ್ ರೈಲುಗಳು ನಗರಗಳ ನಡುವೆ ಬ್ಯುಸಿನೆಸ್ ಕ್ಲಾಸ್ ಜನರ ಪ್ರಯಾಣದ ಬಗೆಯಲ್ಲಿ ಬದಲಾವಣೆಗೆ ಚಾಲನೆ ನೀಡಿದ್ದು, ಅದು ಈಗ ವಿಮಾನದಿಂದ ರೈಲಿನೆಡೆಗೆ ಹೊರಳಿದೆ. ಚೆನ್ನೈ ಮತ್ತು ಬೆಂಗಳೂರು ನಡುವೆ ವಿಮಾನದಲ್ಲಿ ಸಂಚರಿಸುತ್ತಿದ್ದ ಬಹಳಷ್ಟು ಜನ ಈಗ ವಂದೇ ಭಾರತ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾರೆ ಎಂಬ ಮಾಹಿತಿ ಇದೆ. ಈ ನಗರಗಳ ನಡುವಿನ ವಿಮಾನ ಪ್ರಯಾಣ ದರ ಇಳಿದಿದೆ. ಈ ಬದಲಾವಣೆಯನ್ನು ವ್ಯವಸ್ಥಿತವಾಗಿ ಅವಲೋಕಿಸುವ ಅಗತ್ಯವಿದೆ.

ವಿನಾಯಕ್ ಚಟರ್ಜಿ, ಸಂಸ್ಥಾಪಕ, ದಿ ಇನ್‌ಫ್ರಾವಿಷನ್ ಫೌಂಡೇಷನ್

ಕಿಡಿನುಡಿ

ಮನ್ ಕಿ ಬಾತ್‌ನ ಮತ್ತೊಂದು ಸುತ್ತು ಮುಗಿದಿದೆ. ಆದರೆ ಮಣಿಪುರದ ಬಗ್ಗೆ ಮೌನ. ವಿಪತ್ತು ನಿರ್ವಹಣೆಯಲ್ಲಿ ಭಾರತ ಹೊಂದಿರುವ ಅಗಾಧ ಸಾಮರ್ಥ್ಯದ ವಿಚಾರವಾಗಿ ಪ್ರಧಾನಿಯವರು ತಮ್ಮ ಬೆನ್ನು ತಾವೇ ತಟ್ಟಿಕೊಂಡರು. ಆದರೆ, ಮನುಷ್ಯನಿಂದಲೇ ಆಗಿರುವ (ಸ್ವಯಂಘಾತುಕವಾಗಿರುವ), ಮಣಿಪುರವನ್ನು ಬಾಧಿಸುತ್ತಿರುವ ಸಂಕಷ್ಟದ ಬಗೆಗೆ ಏನು ಹೇಳುವುದು? ಪ್ರಧಾನಿ ಅವರು ಈತನಕ ಶಾಂತಿಗಾಗಿ ಮನವಿಯನ್ನೂ ಮಾಡಿಲ್ಲ. ಲೆಕ್ಕ ಪರಿಶೀಲನೆಗೆ ಅವಕಾಶವಿಲ್ಲದ ಪಿಎಂ-ಕೇರ್ಸ್ ನಿಧಿಯೇನೋ ಇದೆ. ಆದರೆ ಪ್ರಧಾನಿ ಅವರು ಮಣಿಪುರದ ಬಗ್ಗೆ ಕಾಳಜಿ ಹೊಂದಿದ್ದಾರೆಯೇ ಎಂಬುದು ನಿಜವಾದ ಪ್ರಶ್ನೆ.

ಜೈರಾಮ್ ರಮೇಶ್, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 19-6-1998

• **ಸಂಧಾನ ಸಫಲ: ದಳದ ಬಿಕ್ಕಟ್ಟು ಅಂತ್ಯ**

ಬೆಂಗಳೂರು, ಜೂನ್ 18– ಐವರು ವರಿಷ್ಠ ನಾಯಕರ ಸಭೆ ಸೌಹಾರ್ದಯುತವಾಗಿ ನಡೆದು ಜನತಾದಳದಲ್ಲಿನ ಐದು ದಿನಗಳ ಬಿಕ್ಕಟ್ಟು ಸಂಧಾನ ಸೂತ್ರದ ಮೂಲಕ ಇಂದು ಇಲ್ಲಿ ಇತ್ಯರ್ಥವಾಯಿತು.

ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರಿಂದ ಈಗಾಗಲೇ ಗೊತ್ತುಪಡಿಸಿದ ಅವಧಿಯೊಳಗೆ ಸಂಪುಟ ಪುನರ್ರಚನೆ, ಆಡಳಿತದಲ್ಲಿ ಬಿಗಿ ಕ್ರಮ ಹಾಗೂ ಪಕ್ಷದ ಪುನಶ್ಚೇತನಕ್ಕೆ ರಾಜ್ಯದ ಎಲ್ಲ ನಿಗಮ, ಮಂಡಲಿ, ಪ್ರಾಧಿಕಾರಗಳ ಅಧ್ಯಕ್ಷರುಗಳಿಂದ ರಾಜೀನಾಮೆ; ಪಕ್ಷದ ಸಂಘಟನೆಯ ದೃಷ್ಟಿಯಿಂದ ಪಕ್ಷದ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ಅಧ್ಯಕ್ಷರ ರಾಜೀನಾಮೆಗಳನ್ನು ಸ್ವೀಕರಿಸುವ ಕೆಲವು ಪ್ರಮುಖ ನಿರ್ಧಾರಗಳನ್ನು ಸಭೆ ಕೈಗೊಂಡಿತು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರದ ಮಾಜಿ ಸಚಿವ ಎಸ್.ಆರ್. ಬೊಮ್ಮಾಯಿ, ಮುಖ್ಯಮಂತ್ರಿ ಜೆ.ಎಚ್. ಪಟೇಲ್, ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಜನತಾದಳದ ಅಧ್ಯಕ್ಷ ಬಿ.ಎಲ್.ಶಂಕರ್ ಅವರನ್ನು ಒಳಗೊಂಡ ‘ಐವರು ನಾಯಕರ’ ಸಭೆ ರಾಜ್ಯ ಸಚಿವ ಸಂಪುಟ ವಿಸ್ತರಣೆ ನಂತರದ ಬೆಳವಣಿಗೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ‘ಸಂಧಾನ’ ಸೂತ್ರಗಳನ್ನು ರೂಪಿಸಿತು.

50 ವರ್ಷಗಳ ಹಿಂದೆ

ಮಂಗಳವಾರ, 19-6-1973

• **ಕೆರಳಿದ ಗ್ರಾಮಸ್ಥರಿಂದ ಭಾಲ್ಕಿ ಕಚೇರಿಗೆ ಮುತ್ತಿಗೆ: ಲಾಠಿ ಪ್ರಹಾರ**

ಕಲ್ಬುರ್ಗಿ, ಜೂನ್ 18– ಬಂಧಿತ ಮುಖಂಡರನ್ನು ಬಿಡುಗಡೆ ಮಾಡಲು ಒತ್ತಾಯಪಡಿಸಿ, ಭಾಲ್ಕಿ ತಾಲ್ಲೂಕು ಕಚೇರಿಗೆ ನುಗ್ಗಿದ 5 ಸಹಸ್ರ ಜನ ರೈತರ ಗುಂಪಿನ ಮೇಲೆ ನಿನ್ನೆ ಪೊಲೀಸರು ಲಾಠಿ ಪ್ರಹಾರ ಮಾಡಿ, ಆಕಾಶದತ್ತ ಗುಂಡು ಹಾರಿಸಿದರೆಂದು ವರದಿಯಾಗಿದೆ.

ಭಾಲ್ಕಿಯಲ್ಲಿ ಸಂಜೆ 7ರಿಂದ ಬೆಳಿಗ್ಗೆ 6ರ ವರೆಗೆ ಕರ್ಫ್ಯೂ ಜಾರಿಯಲ್ಲಿದೆ. ಸಭೆ, ಮೆರವಣಿಗೆಗಳನ್ನು ನಿಷೇಧಿಸಿ ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆ ವಿಧಿಸಿದ್ದಾರೆ.

ಭಾಲ್ಕಿಯಲ್ಲಿ ಬೀಜದ ದಾಸ್ತಾನು ಮಳಿಗೆಯನ್ನು ಲೂಟಿ ಮಾಡಲು ಪ್ರಯತ್ನಿಸಿದ ಆರೋಪದ ಮೇಲೆ ಲೋಕಸಭೆ ಸದಸ್ಯ ಶ್ರೀ ಶಂಕರದೇವ್, ಮಾಜಿ ಶಾಸಕರುಗಳಾದ ಶ್ರೀ ಭೀಮಣ್ಣ ಖಂಡ್ರೆ, ಶ್ರೀ ಕೇಶವರಾವ್ ನಿಟ್ಟೂರ್‌ಕರ್ ಮತ್ತು ಇತರ 7 ಜನ ಕಾಂಗ್ರೆಸ್ ಮುಖಂಡರನ್ನು ಪೊಲೀಸರು ಬಂಧಿಸಿದ್ದಾರೆ.

• **ಕೇಂದ್ರ ನೌಕರರಿಗೆ ಹೆಚ್ಚು ತುಟ್ಟಿಭತ್ಯೆ**

ನವದೆಹಲಿ, ಜೂನ್ 18– ತಿಂಗಳಿಗೆ 575 ರೂ.ಗಳವರೆಗೆ ವೇತನ ಪಡೆಯುತ್ತಿರುವ ಕೇಂದ್ರ ಸರ್ಕಾರಿ ನೌಕರರು ಈ ವರ್ಷದ ಮೇ ತಿಂಗಳಿಂದ 7 ರೂ.ಗಳಿಂದ 10 ರೂ.ಗಳ ಹೆಚ್ಚುವರಿ ತುಟ್ಟಿಭತ್ಯೆಯನ್ನು ಪಡೆಯುವರು ಎಂದು ಇಂದು ಪ್ರಕಟಿಸಲಾಗಿದೆ.

ಈ ಜ್ಞಾನ ತಾಣವೀಗ ಪುಸ್ತಕ ಸಂರಕ್ಷಣೆಗಷ್ಟೇ ಸೀಮಿತವಾಗಿಲ್ಲ, ಅದರ ವ್ಯಾಪ್ತಿ ವಿಸ್ತರಿಸುತ್ತಿದೆ

ಗ್ರಂಥಾಲಯ ಮಹತ್ವ: ಪುನಶ್ಚೇತನ ಕ್ರಮ

ವಿಶ್ಲೇಷಣೆ

ಸುಧೀಶ್ ವೆಂಕಟೇಶ್

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯಿತಿ ವ್ಯಾಪ್ತಿಯ 5,600 ಗ್ರಂಥಾಲಯಗಳನ್ನು ಮೇಲ್ದರ್ಜೆಗೆ ಏರಿಸಿದೆ ಮತ್ತು ಇವುಗಳಲ್ಲಿ ಸುಮಾರು 4,000 ಗ್ರಂಥಾಲಯಗಳಿಗೆ ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಸಂಪರ್ಕವನ್ನು ಒದಗಿಸಲಾಗಿದೆ. ಈ ಗ್ರಂಥಾಲಯಗಳ ಸೇವೆ ಸಂಪೂರ್ಣ ಉಚಿತವಾಗಿದ್ದು, 6ರಿಂದ 18 ವರ್ಷ ವಯಸ್ಸಿನ 30 ಲಕ್ಷಕ್ಕಿಂತಲೂ ಹೆಚ್ಚು ಮಕ್ಕಳು ಹೆಸರು ನೋಂದಾಯಿಸಿಕೊಂಡಿದ್ದಾರೆ.

ಈ ಸಾರ್ವಜನಿಕ ಗ್ರಂಥಾಲಯಗಳ ಪುನಶ್ಚೇತನಕ್ಕಾಗಿ ಕೈಗೊಳ್ಳುವ ಕ್ರಮಗಳು, ಹೆಚ್ಚಿನ ಕಾಳಜಿ ವಹಿಸಿ ಆಯ್ಕೆ ಮಾಡಿದ ಮಕ್ಕಳ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಸೇರಿಸುವುದು, ಗ್ರಂಥಪಾಲಕರಿಗೆ ತರಬೇತಿ, ನೆರೆಹೊರೆಯ ಶಾಲೆಗಳಲ್ಲಿನ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು ಮತ್ತು ಹೊಸ ನೋಂದಣಿಗಾಗಿ ಮಕ್ಕಳನ್ನು ತಲುಪುವ ಪ್ರಯತ್ನಗಳನ್ನು ಒಳಗೊಂಡಿವೆ. ‘ಓದುವ ಬೆಳಕು’ ಮತ್ತು ‘ಪುಸ್ತಕ ಜೋಳಿಗೆ’ಯಂತಹ ಕಾರ್ಯಕ್ರಮಗಳ ಮೂಲಕ ಮಕ್ಕಳು ತಮ್ಮ ಹಿರಿಯರಿಗಾಗಿ ಪುಸ್ತಕಗಳನ್ನು ಓದುವುದು ಹಾಗೂ ಮನೆ ಮನೆಗೆ ಹೋಗಿ ಪುಸ್ತಕಗಳನ್ನು ಸಂಗ್ರಹಿಸುವುದನ್ನು ನೋಡಬಹುದು.

ಮತ್ತೊಂದು ಸಂತಸದ ಬೆಳವಣಿಗೆ ಎಂದರೆ, ಈವರೆಗೆ ಪ್ರವೇಶವನ್ನು ನಿರ್ಬಂಧಿಸಿದ್ದ, ಮಹಾರಾಷ್ಟ್ರ ಸ್ಟೇಟ್ ಟೆಕ್ಸ್ಟ್ ಬುಕ್ ಪ್ರೊಡಕ್ಷನ್ ಆ್ಯಂಡ್ ಕರಿಕುಲಮ್ ರಿಸರ್ಚ್ ಬೋರ್ಡ್‌ಗೆ ಸೇರಿದ ಪುಣೆಯ ಬಾಲಭಾರತಿ ಗ್ರಂಥಾಲಯವು ತನ್ನ ಒಂದು ಲಕ್ಷಕ್ಕೂ ಹೆಚ್ಚು ಪುಸ್ತಕಗಳ ಸಂಗ್ರಹವನ್ನು ಸಾರ್ವಜನಿಕರಿಗೆ ಮುಕ್ತವಾಗಿಸಿದೆ.

ಸಾರ್ವಜನಿಕ ಗ್ರಂಥಾಲಯವು ಒಂದು ಸಾಮಾಜಿಕ ಸಂಸ್ಥೆಯಾಗಿದ್ದು ಡಿಜಿಟಲ್ ಕಂಟೆಂಟ್‌ಗಳ (ಡಿಜಿಟಲ್ ರೂಪದಲ್ಲಿ ದೊರೆಯುತ್ತಿರುವ ಮಾಹಿತಿಯ) ವ್ಯಾಪ್ತಿ ಹೆಚ್ಚಾಗುತ್ತಿದ್ದರೂ, ಸಮಾಜದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಂಡಿದೆ. ಡಿಜಿಟಲ್ ಪ್ರಪಂಚ ತಂದೊಡ್ಡುವ ಪ್ರತ್ಯೇಕತಾ ಭಾವನೆಗೆ ಇದು ಒಂದು ಸಂಜೀವಿನಿಯಂತಿದೆ. ನಾನು ಶಾಲೆಯಲ್ಲಿದ್ದಾಗ ನನ್ನ ಅಜ್ಜ ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಲೈಬ್ರರಿಯಲ್ಲಿದ್ದ ಪುಸ್ತಕಗಳನ್ನು ನನಗೆ ಪರಿಚಯಿಸಿದ್ದರು. ಹಾಗೆಯೇ ಕೋಲ್ಕತ್ತದಲ್ಲಿ ನಾನು ಓದಿದ ಸಂಸ್ಥೆಯಲ್ಲಿಯ ಬಿ.ಸಿ. ರಾಯ್ ಮೆಮೋರಿಯಲ್ ಲೈಬ್ರರಿಯ ಪುಸ್ತಕಗಳ ವಿಶಿಷ್ಟವಾದ ಘಮಲಿನ (ಆಹ್ಲಾದಕರ ವೆನಿಲ್ಲಾ!) ನೆನಪುಗಳು ಇಂದಿಗೂ ನನ್ನೊಳಗೆ ಹಾಗೆಯೇ ಉಳಿದಿವೆ. ನನ್ನ ಪ್ರಯಾಣದಲ್ಲಿ, ನಾನು ಸದಾ ಗ್ರಂಥಾಲಯಗಳಿಂದ ಆಕರ್ಷಿತನಾಗಿದ್ದೇನೆ. ಅವುಗಳಲ್ಲಿ ಎಂದಿಗೂ ನೆನಪಿನಲ್ಲಿ ಉಳಿಯುವಂಥವು, ಆಕ್ಸ್‌ಫರ್ಡ್‌ನಲ್ಲಿರುವ ಬೋಡ್ಲಿಯನ್, ವಾಷಿಂಗ್ಟನ್ ಡಿ.ಸಿ.ಯ ಲೈಬ್ರರಿ ಆಫ್ ಕಾಂಗ್ರೆಸ್ ಮತ್ತು ಇಸ್ತಾನ್‌ಬುಲ್‌ನಲ್ಲಿನ, ಮೆಡಿಟರೇನಿಯನ್ ಸಮುದ್ರದ ವಿಹಂಗಮ ನೋಟವನ್ನು ಹೊಂದಿರುವ ವಿಶಿಷ್ಟ ಸಾರ್ವಜನಿಕ ಗ್ರಂಥಾಲಯ ಸೇರಿವೆ.

ಕ್ರಿಸ್ತಪೂರ್ವ 7ನೇ ಶತಮಾನದಲ್ಲಿ ಮೆಸಪಟೋಮಿಯಾದಲ್ಲಿ ಮೊದಲ ಬಾರಿಗೆ ಗ್ರಂಥಾಲಯಗಳನ್ನು ಸ್ಥಾಪಿಸಲಾಯಿತು ಎಂದು ಹೇಳಲಾಗುತ್ತದೆ. ಸಾವಿರಾರು ವರ್ಷಗಳಷ್ಟು ಪ್ರಾಚೀನ ಮಾನವ ಇತಿಹಾಸದಿಂದ ಆರಂಭಗೊಂಡ ಗ್ರಂಥಾಲಯಗಳು ಈಗಲೂ ಅಸ್ತಿತ್ವ ಉಳಿಸಿಕೊಂಡಿವೆ ಎಂಬುದು ನಾಗರಿಕರಿಗೆ ಅವುಗಳಿಂದ ದೊರಕುವ ಉಪಯುಕ್ತತೆಗೆ ನಿದರ್ಶನವಾಗಿದೆ. ಹೀಗಾಗಿ, ಸಾರ್ವಜನಿಕ ಗ್ರಂಥಾಲಯಗಳನ್ನು ಎಂಥದ್ದೇ ಸಂದರ್ಭ ಎದುರಾದರೂ ರಕ್ಷಿಸಬೇಕಾಗಿದೆ. ನಾಗರಿಕತೆಯ ಮೌಲ್ಯಗಳ ಪ್ರಸಾರಕ್ಕೆ ಅವು ಅತಿ ಅಗತ್ಯವಾಗಿವೆ. 2014ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಫರ್ಗ್ಯುಸನ್ ಗಲಭೆಯ ಸಮಯದಲ್ಲಿ ಇತರೆಲ್ಲ ಸಾರ್ವಜನಿಕ ಸೇವೆಗಳು ಸ್ಥಗಿತಗೊಂಡಿದ್ದರೂ ತೆರೆದಿದ್ದ ಏಕೈಕ ಸ್ಥಳವೆಂದರೆ ಸಾರ್ವಜನಿಕ ಗ್ರಂಥಾಲಯ ಮಾತ್ರ.

ಇದರ ಹೊರತಾಗಿಯೂ, ಇತಿಹಾಸದುದ್ದಕ್ಕೂ ದಾಳಿಗಳು ಮತ್ತು ಸಂಘರ್ಷಗಳು ಗ್ರಂಥಾಲಯಗಳನ್ನು ನಾಶಪಡಿಸಿವೆ. ಮೂವತ್ತು ಲಕ್ಷ ಪುಸ್ತಕಗಳನ್ನು ಹೊಂದಿದ್ದ ಸರಜೆವೊದಲ್ಲಿನ ರಾಷ್ಟ್ರೀಯ ಗ್ರಂಥಾಲಯವು 1992ರಲ್ಲಿ ಮುತ್ತಿಗೆಯ ಸಮಯದಲ್ಲಿ ನಾಶವಾಯಿತು ಮತ್ತು ಅಲೆಕ್ಸಾಂಡ್ರಿಯಾದ ಗ್ರೇಟ್ ಲೈಬ್ರರಿಯು ಕ್ರಿಸ್ತಪೂರ್ವ 48ರಲ್ಲಿ ನಡೆದ ಅಂತರ್ಯುದ್ಧದಲ್ಲಿ ನಾಶವಾಯಿತು (ಈ ಅಂತರ್ಯುದ್ಧದಿಂದಾಗಿ ಮಾನವ ಅಭಿವೃದ್ಧಿಯ ಗಡಿಯಾರ ಎರಡು ಸಹಸ್ರಮಾನಗಳಷ್ಟು ಹಿಮ್ಮುಖವಾಗಿ ತಿರುಗಿದೆ ಎಂದು ಹೇಳಲಾಗುತ್ತದೆ). ಬಾಗ್ದಾದ್ ಮತ್ತು ನಳಂದಾದಲ್ಲೂ ಇದೇ ರೀತಿಯ ಕಥೆಗಳಿವೆ.

ನಮ್ಮ ಹತ್ತಿರದಲ್ಲೇ ನಡೆದ ಘಟನೆಯನ್ನು ಉದಾಹರಿಸುವುದಾದರೆ, ಬಿಹಾರದಲ್ಲಿ 113 ವರ್ಷಗಳಷ್ಟು ಹಳೆಯದಾದ ಗ್ರಂಥಾಲಯವನ್ನು ಉದ್ರಿಕ್ತ ಗುಂಪೊಂದು ಇತ್ತೀಚೆಗೆ ಧ್ವಂಸಗೊಳಿಸಿ, ಬೆಂಕಿ ಹಚ್ಚಿ, ಅದರಲ್ಲಿದ್ದ 4,500 ಪುಸ್ತಕಗಳನ್ನು ಬೂದಿಯಾಗಿಸಿತು.

ಆ್ಯಂಡ್ರ್ಯೂ ಕಾರ್ನೆಗಿ (1835-1919) ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 1,600ಕ್ಕೂ ಹೆಚ್ಚು ಗ್ರಂಥಾಲಯಗಳನ್ನು ಸ್ಥಾಪಿಸಲು ಲಕ್ಷಾಂತರ ಡಾಲರ್‌ಗಳನ್ನು ದೇಣಿಗೆಯಾಗಿ ನೀಡಿದರು. ಗ್ರಂಥಾಲಯಗಳಿಗೆ ಉದಾರವಾಗಿ ದಾನಧರ್ಮ ನೀಡಿದವರ ಅನೇಕ ಉದಾಹರಣೆಗಳಿವೆ. ನಾನು ಕೆಲಸ ಮಾಡುತ್ತಿರುವ ಸಂಸ್ಥೆಯು ದೇಶದಾದ್ಯಂತ ವಿವಿಧ ಪಟ್ಟಣಗಳಲ್ಲಿ 278 ಗ್ರಂಥಾಲಯಗಳನ್ನು ನಿರ್ವಹಿಸುತ್ತಿದೆ. ಪ್ರತಿಯೊಂದು ಗ್ರಂಥಾಲಯವೂ ಸರಿಸುಮಾರು 2,500 ಪುಸ್ತಕಗಳನ್ನು ಹೊಂದಿದೆ. ಬೆಂಗಳೂರಿನಲ್ಲಿರುವ ದೊಡ್ಡ ಗ್ರಂಥಾಲಯವು ಒಂದು ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿದೆ. ವಿಜ್ಞಾನಿ ಪಿ.ಎಂ.ಭಾರ್ಗವ, ಅರ್ಥಶಾಸ್ತ್ರಜ್ಞ ಎಚ್.ಎಂ.ಪಟೇಲ್, ಶಿಕ್ಷಣತಜ್ಞ ಡೇವಿಡ್ ಹರ್ಸೆಬುರೊ ಸೇರಿದಂತೆ ಹಲವು ದಾನಿಗಳಿಂದ ಹಲವಾರು ದೊಡ್ಡ ಮಟ್ಟದ ಪುಸ್ತಕ ಸಂಗ್ರಹಗಳು ಗ್ರಂಥಾಲಯಕ್ಕೆ ಸಂದಿವೆ. ತಾವು ಸಂಗ್ರಹಿಸಿರುವ ಪುಸ್ತಕಗಳಿಂದ ಮುಂಬರುವ ಪೀಳಿಗೆಯವರು ಪ್ರಯೋಜನ ಪಡೆಯುತ್ತಾರೆ ಎಂಬ ಭಾವನೆ ಇದರ ಹಿಂದೆ ಕೆಲಸ ಮಾಡುತ್ತದೆ.

ಗ್ರಂಥಾಲಯಗಳು ಪುಸ್ತಕಗಳ ಸಂರಕ್ಷಣೆಯ ಉದ್ದೇಶಕ್ಕೆ ಮಾತ್ರ ಸೀಮಿತವಾಗದೆ, ಅವುಗಳ ವ್ಯಾಪ್ತಿ ವಿಸ್ತರಿಸುತ್ತಿದೆ. ಗ್ರಂಥಾಲಯಗಳು ಅನೇಕ ಸ್ಥಳಗಳಲ್ಲಿ, ಪೋಷಕರು ಮನೆಗೆ ಹಿಂದಿರುಗುವವರೆಗೆ ಸೃಜನಶೀಲವಾಗಿ ಕಾಲ ಕಳೆಯಲು ಸೂಕ್ತ ಸ್ಥಳದ ಅಗತ್ಯವಿರುವ ಮಕ್ಕಳಿಗೆ, ಪರೀಕ್ಷೆಗೆ ತಯಾರಿ ನಡೆಸುವ ಆಕಾಂಕ್ಷಿಗಳಿಗೆ ಅಥವಾ ಜೊತೆಗಾರರನ್ನು ಹುಡುಕುತ್ತಿರುವ ಹಿರಿಯ ನಾಗರಿಕರಿಗೆ ಆಶ್ರಯ ತಾಣಗಳಾಗಿವೆ. ಗ್ರಂಥಾಲಯಗಳು ಇತ್ತೀಚೆಗೆ ಡಿಜಿಟಲ್ ತಾಣಗಳಾಗಿ ಎಕ್ಸ್‌ಪ್ಲೋರಟೋರಿಯಮ್‌ಗಳಾಗಿ (ವಿಜ್ಞಾನ, ತಂತ್ರಜ್ಞಾನದಂತಹ ವಿಷಯಗಳ ಪ್ರಯೋಗಶಾಲೆಗಳಾಗಿ) ವಿಸ್ತರಿಸುತ್ತಿವೆ. ಉತ್ತರ ಕೆರೊಲಿನಾದ ಜೇಮ್ಸ್ ಬಿ. ಹಂಟ್ ಜೂನಿಯರ್ ಗ್ರಂಥಾಲಯವು ತಂತ್ರಜ್ಞಾನ ಪ್ರಯೋಗಾಲಯಗಳು, ಮೀಡಿಯಾ ಪ್ರೊಡಕ್ಷನ್ ಹೌಸ್ ಮತ್ತು ಸೃಜನಶೀಲ ಸ್ಟುಡಿಯೊಗಳನ್ನು ಹೊಂದಿದ್ದು, ಅದನ್ನು ಗ್ರಂಥಾಲಯ, ಪ್ರಯೋಗಾಲಯ ಎರಡನ್ನೂ ಒಳಗೊಂಡ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ.

ಪುಸ್ತಕ ಸೂಚಿ (ಇಂಡೆಕ್ಸಿಂಗ್) ಮತ್ತು ಸಂಗ್ರಹ (ಆರ್ಕೈವಿಂಗ್) ಕಾರ್ಯದಲ್ಲಿ ತಂತ್ರಜ್ಞಾನದ ಬಳಕೆಯು ಗ್ರಂಥಾಲಯಗಳನ್ನು ಹೆಚ್ಚು ಬಳಕೆದಾರಸ್ನೇಹಿ ಆಗಿಸುತ್ತದೆ ಹಾಗೂ ಗ್ರಂಥಗಳು ಸುಲಭವಾಗಿ ಲಭಿಸುವಂತೆ ಮಾಡುತ್ತದೆ. ಕೆಲವು ಸಾರ್ವಜನಿಕ ಗ್ರಂಥಾಲಯಗಳು ಓದುಗರು ಇರುವ ಸ್ಥಳಕ್ಕೇ ಪುಸ್ತಕಗಳನ್ನು ತಲುಪಿಸುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯ ಕುಗ್ರಾಮವಾದ ಮಂಡೆಕೋಲಿನಲ್ಲಿ ಸಾವಿತ್ರಿರಾಮ್ ಕಣೆಮರಡ್ಕ ಅವರು ‘ಅಮ್ಮನಿಗಾಗಿ ಒಂದು ಪುಸ್ತಕ’ ಕಾರ್ಯಕ್ರಮ ಪ್ರಾರಂಭಿಸಿದರು. ಈ ವಿಶಿಷ್ಟ ಉಪಕ್ರಮದಲ್ಲಿ ಗ್ರಂಥಾಲಯದ ಪುಸ್ತಕಗಳನ್ನು ತಾಯಿಗಾಗಿ ಪುಸ್ತಕ ಓದುವ ಮಕ್ಕಳಿಗೆ ಮತ್ತು ಮಕ್ಕಳಿಗಾಗಿ ಓದುವ ತಾಯಂದಿರಿಗಾಗಿ ನೀಡಲಾಯಿತು.

ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯವನ್ನು ಹೊಂದಿರುವ ಶಾಲೆಗಳಲ್ಲಿನ ವಿದ್ಯಾರ್ಥಿಗಳಲ್ಲಿ ಉತ್ತಮ ಕಲಿಕಾ ಫಲಿತಾಂಶಗಳು ವರದಿಯಾಗುತ್ತಿವೆ. ನ್ಯಾಷನಲ್ ಅಚೀವ್‌ಮೆಂಟ್ ಸರ್ವೆ 2017ರ ಪ್ರಕಾರ, ಅತ್ಯಧಿಕ ಕಲಿಕಾ ಸಾಧನೆ ಮಾಡುವ (ರಾಜಸ್ಥಾನ, ಆಂಧ್ರಪ್ರದೇಶ, ಕರ್ನಾಟಕದಂತಹ) ಹತ್ತು ರಾಜ್ಯಗಳ ಪೈಕಿ ಶೇ 91ರಷ್ಟು ಶಾಲೆಗಳು ಗ್ರಂಥಾಲಯವನ್ನು ಹೊಂದಿದ್ದರೆ, ಕಲಿಕೆಯಲ್ಲಿ ಕಡಿಮೆ ಸಾಧನೆ ಮಾಡಿರುವ ಹತ್ತು ರಾಜ್ಯಗಳ ಪೈಕಿ (ಅರುಣಾಚಲ ಪ್ರದೇಶ, ಪಂಜಾಬ್, ಉತ್ತರ ಪ್ರದೇಶದಂತಹ) ಶೇ 62ರಷ್ಟು ಶಾಲೆಗಳು ಮಾತ್ರ ಗ್ರಂಥಾಲಯ ಹೊಂದಿವೆ. ಸಮಗ್ರ ಶಿಕ್ಷಣ ಅಭಿಯಾನವು ಶಾಲಾ ಗ್ರಂಥಾಲಯಗಳನ್ನು ವಿದ್ಯಾರ್ಥಿಗಳೊಂದಿಗೆ ಸಮುದಾಯಕ್ಕೂ ಸೇವೆ ಸಲ್ಲಿಸುವ ದಿಸೆಯಲ್ಲಿ ಒಂದಕ್ಕೊಂದು ಜೋಡಿಸಲು ಯತ್ನಿಸುತ್ತಿದೆ.

ಕೇಂದ್ರ ಸರ್ಕಾರದ ಇತ್ತೀಚಿನ ಬಜೆಟ್, ರಾಷ್ಟ್ರೀಯ ಡಿಜಿಟಲ್ ಲೈಬ್ರರಿ ಸ್ಥಾಪನೆಗೆ ಅನುಮೋದನೆ ನೀಡಿದೆ. ಈ ಗ್ರಂಥಾಲಯವನ್ನು ಪ್ರವೇಶಿಸುವುದಕ್ಕೆ ಪೂರಕವಾಗಿ ಪಂಚಾಯತ್ ಮತ್ತು ವಾರ್ಡ್ ಮಟ್ಟದಲ್ಲಿ ಅಗತ್ಯವಿರುವ ಭೌತಿಕ ಗ್ರಂಥಾಲಯಗಳ ಸ್ಥಾಪನೆಗೆ ಹಣವನ್ನು ಒದಗಿಸಿದೆ.

ಲೇಖಕ: ಮುಖ್ಯ ಸಂವಹನ ಅಧಿಕಾರಿ
ಅಜೀಂ ಪ್ರೇಮ್‌ಜಿ ಫೌಂಡೇಷನ್

ಚುರುಮುರಿ

ಪ್ರಧಾನಿ ತಾರಾಲಯ!

• ಸುಮಂಗಲಾ

ಬೆಕ್ಕಣ್ಣ ಬಲು ಗಂಭೀರವಾಗಿ ಇ-ಮೇಲ್ ಬರೆಯುತ್ತ ಕೂತಿತ್ತು.

‘ಏನಲೇ... ಮೋದಿಮಾಮಾಗೆ ಅಕ್ಕಿ ಕೇಳಿ, ಇ-ಮೇಲ್ ಮಾಡಾಕೆ ಹತ್ತೀಯೇನ್’ ಕುತೂಹಲ ತಡೆಯದೇ ಕೇಳಿದೆ.

‘ನಾ ಎದಕ್ಕ ಕೇಳಲಿ... ಗ್ಯಾರಂಟಿ ಅಂತ ಬಾಜಾ ಬಾರಿಸೋದಕ್ಕಿಂತ ಮೊದಲೇ ಸಿದ್ದು ಅಂಕಲ್ಲು ಕೇಳಬೇಕಿತ್ತು. ಕೊಟ್ಟೇ ಕೊಡ್ತೀವಿ ಅಂತ ಕೇಂದ್ರದವರು ಗ್ಯಾರಂಟಿ ಕೊಟ್ಟದ್ರೇನ್’ ಬೆಕ್ಕಣ್ಣ ಬಡಬಡನೆ ವದರಿತು.

‘ಮತ್ತ ಇದೇನು ಇ-ಮೇಲ್?’

‘ದಿಲ್ಲೀ ನೆಹರೂ ಮ್ಯೂಸಿಯಂವಳಗ ನೆಹರೂ ತಾರಾಲಯ ಇತ್ತಲ್ಲ, ಆ ಮ್ಯೂಸಿಯಂ ಹೆಸರನ್ನ ಈಗ ಪ್ರಧಾನಿ ಮ್ಯೂಸಿಯಂ ಅಂತ ಮಾಡ್ಯಾರೆ. ಹಂಗೇ ನಮ್ ಬೆಂಗಳೂರಿನಾಗೆ ಇರೋ ನೆಹರೂ ತಾರಾಲಯದ ಹೆಸರು ಬದಲಿಸಿ, ಪ್ರಧಾನಿ ತಾರಾಲಯ ಎಂದು ಹೆಸರಿಡಬಕು ಅಂತ ಕೇಂದ್ರಕ್ಕೆ ಪ್ರಸ್ತಾವ ಕಳಿಸಾಕೆ ಹತ್ತೀನಿ’ ಬೆಕ್ಕಣ್ಣ ಬಲು ಹುರುಪಿನಿಂದ ಇ-ಮೇಲ್ ತೋರಿಸಿತು.

‘ದಿಲ್ಲಿ ನೆಹರೂ ತಾರಾಲಯವು ಮ್ಯೂಸಿಯಂ ಜೊತಿಗೆ ಐತಿ, ಹಂಗಾಗಿ ಎಲ್ಲ ಪ್ರಧಾನಿಗಳಿಗೂ ಪ್ರಾಮುಖ್ಯತೆ ಕೊಡಬಕು, ಒಬ್ಬರಿಗೇ ಅಲ್ಲ ಅಂತ ಬದಲಿ ಮಾಡ್ಯಾರ. ಇಲ್ಲೀದು ಬರೀ ತಾರಾಲಯ ಮಾತ್ರ ಕಣಲೇ’.

‘ನೋಡಾ, ಎಲ್ಲೆಲ್ಲಿ ನೆಹರೂ ಹೆಸರು ಐತೋ ಅಲ್ಲೆಲ್ಲ ಪ್ರಧಾನಿ ಅಂತ ಹೆಸರು ಬದಲಿ ಮಾಡಬಕು. ಪ್ರಧಾನಿ ತಾರಾಲಯ ಅಂತ ಮಾಡೂಣಲ್ಲ, ಆವಾಗ ನಾವು ಆಕಾಶದಾಗೆ ಬ್ಯಾರೆ ಪ್ರಧಾನಿಗಳ ಚಿತ್ರನೂ ತೋರಿಸಬೌದು’ ಬೆಕ್ಕಣ್ಣ ವಾದಿಸಿತು.

‘ಮಂಗ್ಯಾನಂಥವ್ನೇ... ನೆಹರೂ ತಾರಾಲಯ ಅಂತ ಹೆಸರಿದ್ದಾಕ್ಷಣ ಆಕಾಶದ ತಾರೆಗಳು, ಗ್ರಹಗಳು ಎಲ್ಲ ತೋರಿಸೂಮುಂದ ನೆಹರೂ ಚಿತ್ರ ತೋರಿಸತಾರ ಅಂತ ಮಾಡೀಯೇನ್’.

‘ಈಗ ತೋರಿಸೂಣಲ್ಲ... ಇನ್ನಾ ಮೂರು ನಾಲ್ಕು ನೆಹರೂ ತಾರಾಲಯ ಅದಾವಲ್ಲ, ಅವೆಲ್ಲದರ ಹೆಸರನ್ನೂ ಪ್ರಧಾನಿ ತಾರಾಲಯ ಅಂತ ಬದಲು ಮಾಡಬಕು. ಎಲ್ಲ ತಾರಾಲಯದೊಳಗ ಮೊದ್ಲಿಗೆ ಹಿಂದಿನ ಪ್ರಧಾನಿಗಳನ್ನು ಸಣ್ಣ ನಕ್ಷತ್ರದಂಗೆ ಮಿಣುಕುಮಿಣುಕು ತೋರಿಸಬಕು, ಮೋದಿಮಾಮಾನ ಎಲ್ಲಕ್ಕಿಂತ ಪ್ರಕಾಶಮಾನ ಸೂರ್ಯನಂಗೆ ತೋರಿಸಬಕು’ ಬೆಕ್ಕಣ್ಣ ಪ್ರಧಾನಿ ತಾರಾಲಯದ ಹೊಸ ಸ್ವರೂಪವನ್ನು ವರ್ಣಿಸಿತು!

ಸಂಗತ

ವಿಷದ ವಿಚಾರ: ಇರಲಿ ಎಚ್ಚರ

ಕಳೆನಾಶಕ, ಕೀಟನಾಶಕಗಳ ಅಸಮರ್ಪಕ ಸಂಗ್ರಹ ಹಾಗೂ ತ್ಯಾಜ್ಯ ವಿಲೇವಾರಿ ಒಮ್ಮೊಮ್ಮೆ ಆಪತ್ತು ತರುವುದಲ್ಲದೆ ಜೀವಹಾನಿಗೂ ಕಾರಣವಾಗಬಹುದು

• ಡಾ. ಮುರಳೀಧರ ಕಿರಣಕೆರೆ

ಮಧ್ಯರಾತ್ರಿ ನಿದ್ರೆಯಲ್ಲಿದ್ದವನನ್ನು ಎಚ್ಚರಿಸಿದ್ದು ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿಯ ಫೋನಿನ ಸದ್ದು. ಹೊತ್ತಲ್ಲದ ಹೊತ್ತಿನಲ್ಲಿ ಕರೆ ಮಾಡಿದ್ದಕ್ಕೆ ಮುಜುಗರ ವ್ಯಕ್ತಪಡಿಸುತ್ತಾ, ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ಹೇನು, ಉಣ್ಣೆಗೆ ಸಾಮಾನ್ಯವಾಗಿ ಕೊಡುವ ಔಷಧ ಯಾವುದೆಂದು ಕೇಳಿದಾಗ ಆಶ್ಚರ್ಯದ ಜೊತೆಗೆ ಗೊಂದಲ! ಇದನ್ನು ಈ ಅವೇಳೆಯಲ್ಲಿ ವಿಚಾರಿಸುವ ಅವಸರ ಏನಿದೆ? ಹೌದು, ನಿಜಕ್ಕೂ ಅಲ್ಲಿ ಅಂತಹದ್ದೊಂದು ತುರ್ತು ಸ್ಥಿತಿಯೇ ಇತ್ತು!

ಮಧ್ಯಾಹ್ನ ಆಸ್ಪತ್ರೆಗೆ ಬಂದ ಮಹಿಳೆಯೊಬ್ಬಳು ಜಾನುವಾರುಗಳ ವಣಗಿನ ಕಾಟಕ್ಕೆ ಉಣ್ಣೆನಾಶಕ ದ್ರಾವಣವನ್ನು ತೆಗೆದುಕೊಂಡು ಹೋಗಿದ್ದಳು. ಇಂತಹ ಔಷಧ ಕೊಡುವಾಗ ಪಶುವೈದ್ಯಕೀಯ ಸಿಬ್ಬಂದಿ, ಇದು ತುಂಬಾ ಅಪಾಯಕಾರಿ ವಿಷವಾದ್ದರಿಂದ ನೀರು ಬೆರೆಸಿ ದುರ್ಬಲಗೊಳಿಸಿ, ಜಾನುವಾರುಗಳ ಮೈಗೆ ಹೇಗೆ ಎಚ್ಚರಿಕೆಯಿಂದ ಹಚ್ಚಬೇಕು, ಯಾವಾಗ ಮೈತೊಳೆಯಬೇಕು ಎಂಬುದನ್ನು ವಿವರವಾಗಿ ಹೇಳಿಯೇ ಕಳುಹಿಸುತ್ತಾರೆ.

ತಾನು ಒಯ್ದ ಪೀಡೆನಾಶಕದ ಬಾಟಲನ್ನು ಮನೆಯ ಮಕ್ಕಳಿಗೆ ಸಿಗದಂತೆ ಕೊಟ್ಟಿಗೆಯ ಮೋಟು ಗೋಡೆಯ ಮೇಲಿಟ್ಟಿದ್ದಳು ಆಕೆ. ಗಂಡನೋ ಮದ್ಯವ್ಯಸನಿ. ಅದೇ ಅಮಲಿನಲ್ಲಿ ಆ ಉಣ್ಣೆನಾಶಕ ದ್ರಾವಣವನ್ನು ಬ್ರ್ಯಾಂಡಿಯೆಂದು ತಿಳಿದು ಪೂರ್ತಿ ಕುಡಿದುಬಿಟ್ಟಿದ್ದ.

ಸ್ವಲ್ಪ ಹೊತ್ತಿನಲ್ಲೇ ಹೊಟ್ಟೆಯಲ್ಲಿ ಸಂಕಟ, ಉರಿ, ವಾಂತಿ, ಭೇದಿ ಶುರುವಾಗಿ ಒದ್ದಾಡುತ್ತಿದ್ದವನನ್ನು ಆಸ್ಪತ್ರೆಗೆ ತಂದು ಸೇರಿಸಿದ್ದರು. ವಿಷ ಯಾವುದೆಂದು ಖಚಿತವಾಗಿ ತಿಳಿದಿದ್ದರೆ ನಿರ್ದಿಷ್ಟ ಪ್ರತಿವಿಷ ಕೊಡುವುದರಿಂದ ಪರಿಣಾಮಕಾರಿ ಚಿಕಿತ್ಸೆ ಸಾಧ್ಯ. ಸೈಪರ್‌ಮೆಥ್ರಿನ್ ಎಂಬ ರಾಸಾಯನಿಕವದು ಎಂಬ ಮಾಹಿತಿಯಿಂದಾಗಿ, ತುರ್ತು ಉಪಶಮನಕಾರಿ ಚಿಕಿತ್ಸೆ ನೀಡಿ ಆ ರೋಗಿಯನ್ನು ಉಳಿಸಲು ಸಾಧ್ಯವಾಯಿತು.

ಸಾಧಾರಣವಾಗಿ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಉಣ್ಣೆನಾಶಕವಾಗಿ ಸೈಪರ್‌ಮೆಥ್ರಿನ್, ಫ್ಲುಮೆಥ್ರಿನ್ ರಾಸಾಯನಿಕಗಳ ಬಳಕೆ ಹೆಚ್ಚು. ಇವೆರಡೂ ತಮ್ಮ ಮೂಲ ರೂಪದಲ್ಲಿ ಅಪಾಯಕಾರಿ ವಿಷಗಳೇ ಆಗಿರುವುದರಿಂದ ಸಂಗ್ರಹ, ಬಳಕೆಯಲ್ಲಿ ತುಂಬಾ ಎಚ್ಚರ ಅಗತ್ಯ. ನಿಗದಿತ ಪ್ರಮಾಣದಲ್ಲಿ ನೀರು ಸೇರಿಸಿ ಪೂರ್ಣವಾಗಿ ದುರ್ಬಲಗೊಳಿಸಿದ ನಂತರವೇ ಜಾನುವಾರುಗಳ ಮೈಗೆ ಹಚ್ಚಬೇಕು. ಸಾಮಾನ್ಯವಾಗಿ ಒಂದು ಲೀಟರ್ ನೀರಿಗೆ ಬೆರೆಸಬೇಕಿರುವ ಈ ರಾಸಾಯನಿಕದ ಪ್ರಮಾಣ ಐದು ಮಿ.ಲೀ.ಗಿಂತಲೂ ಕಮ್ಮಿ. ವಿಷವಾದ್ದರಿಂದ ಜೋಪಾನವಾಗಿ ಇಡುವುದಷ್ಟೇ ಅಲ್ಲ, ಬಾಟಲಿಯ ಒಳಗೆ ಏನಿದೆಯೆಂಬ ಮಾಹಿತಿ ಮನೆಯವರಿಗೆಲ್ಲಾ ತಿಳಿದಿರಬೇಕು.

ಬರಿಗೈಯಲ್ಲಿ ಮುಟ್ಟದಿರುವುದು, ಆಕಸ್ಮಿಕವಾಗಿ ತಾಗಿದರೆ ನೀರು, ಸಾಬೂನು ಬಳಸಿ ಚೆನ್ನಾಗಿ ತೊಳೆದುಕೊಳ್ಳುವುದು ಅತಿ ಮುಖ್ಯ. ಗಾಯದ ಮೇಲೆ ಬಿದ್ದರೆ, ಆಕಸ್ಮಿಕವಾಗಿ ಹೊಟ್ಟೆ ಸೇರಿದರೆ ವೈದ್ಯಕೀಯ ಸಲಹೆ, ನೆರವಿನ ಅಗತ್ಯವಿದೆ. ಹಾಗಾಗಿಯೇ ರೈತರು ಯಾವುದೇ ಕಾರಣಕ್ಕೂ ಉಣ್ಣೆನಾಶಕ ಔಷಧ ತರಲು ಮಕ್ಕಳನ್ನು ಪಶು ಚಿಕಿತ್ಸಾಲಯಕ್ಕೆ ಕಳುಹಿಸಬಾರದು. ಅವರ ಕೈಯಲ್ಲಿ ಕಳುಹಿಸುವಂತೆ ಒತ್ತಡವನ್ನೂ ತರಬಾರದು.

ಕಳೆನಾಶಕ, ಕೀಟನಾಶಕಗಳ ಅಸಮರ್ಪಕ ಸಂಗ್ರಹ, ತ್ಯಾಜ್ಯ ವಿಲೇವಾರಿಯೂ ಒಮ್ಮೊಮ್ಮೆ ಆಪತ್ತು ತರುವುದಲ್ಲದೆ ಜೀವಹಾನಿಗೂ ಕಾರಣವಾಗಬಹುದು. ಕೃಷಿಕರು ಬೆಳೆ ಸಂರಕ್ಷಣೆಗಾಗಿ ಸಾಮಾನ್ಯವಾಗಿ ಉಪಯೋಗಿಸುವ ಪೀಡೆನಾಶಕಗಳು ದನಕರುಗಳ ಸಾವಿಗೆ ಕಾರಣವಾಗಿರುವ ಹಲವು ಪ್ರಕರಣಗಳು ವೃತ್ತಿಜೀವನದಲ್ಲಿ ಎದುರಾಗಿವೆ. ರೈತರು ಫೋರೆಟ್‌ನಂತಹ ಕಳೆನಾಶಕ ಹುಡಿ, ಹರಳುಗಳನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಭದ್ರವಾಗಿ ಸುತ್ತಿ ಮನೆ ಅಥವಾ ಕೊಟ್ಟಿಗೆಯ ಗೋಡೆಯ ಮೇಲೊ, ಮಾಡಿನಡಿಯಲ್ಲೊ ಸಿಕ್ಕಿಸಿಡುವುದು ಸಾಮಾನ್ಯ. ಹಾಗೆಯೆ ಮರೆತುಬಿಡುವುದೂ ಇದೆ. ಇದರಿಂದಾಗುವ ಅನಾಹುತದ ಅರಿವು ಹಲವರಿಗಿಲ್ಲ.

ಇಲಿ, ಹೆಗ್ಗಣಗಳು ಆ ಪ್ಯಾಕೆಟ್‌ಗಳನ್ನು ಕಚ್ಚಿ ತೂತು ಮಾಡಿ ಒಳಗಿನ ಪುಡಿಯನ್ನು ಎಲ್ಲೆಡೆ ಹರಡುವುದುಂಟು. ಅದರಲ್ಲೂ ತೆರೆದಿಟ್ಟ ಮರಿಗೆ, ಡ್ರಮ್ಮುಗಳಲ್ಲಿ ಸಂಗ್ರಹಿಸಿಟ್ಟ ಬೂಸ, ಹಿಂಡಿಯಂತಹ ಪಶು ಆಹಾರ, ಹುಲ್ಲಿನ ಜೊತೆಗೆ ಈ ಕೀಟನಾಶಕಗಳು ಸೇರುವ ಸಂಭವ ಹೆಚ್ಚು. ಇದನ್ನು ತಿಂದ ಜಾನುವಾರುಗಳು ಒಮ್ಮೊಮ್ಮೆ ಚಿಕಿತ್ಸೆಗೂ ಸಮಯ ಕೊಡದೆ ದಾರುಣವಾಗಿ ಒದ್ದಾಡಿ ಸಾಯುತ್ತವೆ!

ನಮ್ಮ ರೈತರು ಮಾಡುವ ಮತ್ತೊಂದು ಮಹಾ ಪ್ರಮಾದವೆಂದರೆ, ಇಲಿ, ಹೆಗ್ಗಣಗಳಿಗೆ ಪಾಷಾಣ ಇಟ್ಟು ಆಮೇಲೆ ಮರೆತುಬಿಡುವುದು. ಹತ್ತಾರು ಬಗೆಯ ಉಪಟಳ ಕೊಡುವ ದಂಶಕಗಳನ್ನು ಕೊಲ್ಲಲು ಜನರು ಕಂಡುಕೊಂಡಿರುವ ಸುಲಭ ಮಾರ್ಗ ಜಿಂಕ್ ಸಲ್ಫೈಡ್‌ನಂತಹ ಇಲಿ ಪಾಷಾಣದ ಬಳಕೆ. ತಿಂಡಿ ತಿನಿಸುಗಳಲ್ಲಿ ಕಲಸಿಟ್ಟ ವಿಷವನ್ನು ಅರಿವಿಲ್ಲದೆ ತಿನ್ನುವ ನಾಯಿ, ಬೆಕ್ಕುಗಳು ಮರಣವನ್ನಪ್ಪುತ್ತವೆ. ಮಳೆಗಾಲದಲ್ಲಿ ನೀರಿಗೆ ಸೇರುವ ಈ ಅಪಾಯಕಾರಿ ರಾಸಾಯನಿಕ ನೀರು ಕುಡಿಯುವ, ಅಲ್ಲಿಯ ಹುಲ್ಲು ಮೇಯುವ ಜಾನುವಾರುಗಳು, ಇತರ ಪಶು-ಪಕ್ಷಿಗಳ ಜೀವಕ್ಕೂ ಕಂಟಕಕಾರಿ.

ಹಳ್ಳಿಗಳಲ್ಲಿ ನಾಯಿ, ಬೆಕ್ಕುಗಳ ಸಾವಿಗೆ ಕಾಯಿಲೆಗಿಂತಲೂ ವಿಷಪ್ರಾಶನವೇ ಪ್ರಮುಖ ಕಾರಣವಾಗುತ್ತಿರುವುದು ನಿಜಕ್ಕೂ ಆತಂಕಕಾರಿ. ಪರಿಸರ, ಜೀವಸಂಕುಲದ ಹಿತದೃಷ್ಟಿಯಿಂದ ವಿಷದ ವಿಷಯದಲ್ಲಿ ಹೆಚ್ಚು ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದನ್ನು ನಾವು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕಿದೆ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶುಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಹೊರಟ್ಟಿ ನಡೆ ಸ್ವಾಗತಾರ್ಹ

ಕಾಂಗ್ರೆಸ್ ಪಕ್ಷವು ಚುನಾವಣಾ ಪೂರ್ವದಲ್ಲಿ ನೀಡಿದ್ದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ 200 ಯೂನಿಟ್‌ವರೆಗಿನ ಉಚಿತ ವಿದ್ಯುತ್ ಯೋಜನೆ ತಮಗೆ ಮತ್ತು ತಮ್ಮ ಕುಟುಂಬದ ಸದಸ್ಯರಿಗೆ ಬೇಡ ಎಂದು ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಅವರು ಹೆಸ್ಕಾಂಗೆ ಪತ್ರ ಬರೆದಿರುವುದು ಮತ್ತು ಇದೊಂದು ಜನಪರ ಯೋಜನೆ ಎಂದು ಸರ್ಕಾರವನ್ನು ಅಭಿನಂದಿಸಿರುವುದು ಸ್ವಾಗತಾರ್ಹ ನಡೆಯಾಗಿದೆ.

ಸರ್ಕಾರ ರೂಪಿಸುವ ಹೊಸ ಯೋಜನೆಗಳು ಜನಸಾಮಾನ್ಯರಿಗಾಗಿ ಮೀಸಲಿದ್ದರೂ ‘ಶಕ್ತಿ ಕೇಂದ್ರ’ದ ಕೆಲವು ಸದಸ್ಯರು ‘ಮೊದಲು ನನಗೆ, ನಂತರ ಜನರಿಗೆ’ ಎಂಬಂತೆ, ತಾವೇ ಅದರ ಮೊದಲ ಫಲಾನುಭವಿಗಳಾಗಿರುವ ಕಾಲಘಟ್ಟ ಇದು. ಹೀಗಿರುವಾಗ, ಹೊರಟ್ಟಿಯವರ ಇಂತಹ ತೀರ್ಮಾನ ಇತರ ರಾಜಕಾರಣಿಗಳಿಗೆ ಮಾದರಿಯಾಗಿದೆ. ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಭಾಗ್ಯಗಳೆಂದು ಹೀಯಾಳಿಸುವ ವಿರೋಧಿಗಳು ಸ್ವಇಚ್ಛೆಯಿಂದ ಈ ರೀತಿ ಉಚಿತ ಯೋಜನೆಗಳನ್ನು ಬಿಟ್ಟುಕೊಡುವ ಮೂಲಕ ತಮ್ಮ ನಿಲುವಿನ ಬದ್ಧತೆ ಪ್ರದರ್ಶಿಸಲಿ.

ಗಣಪತಿ ನಾಯ್ಕ್, ಕಾನಗೋಡ

ದಂಡು... ಗಂಡು!

ಅತ್ತ,
ಬೆಟ್ಟ, ಗುಡ್ಡ, ದೇವಸ್ಥಾನ
ಪುಣ್ಯಕ್ಷೇತ್ರಗಳಲ್ಲೆಲ್ಲೆಡೆ ಈಗ
ಮಹಿಳೆಯರದೇ ದಂಡು!
ಇತ್ತ,
ಸುರಕ್ಷಿತವಾಗಿ
ಮರಳಿದರೆ ಸಾಕೆಂದು
ಬೇಡಿಕೊಳ್ಳುತಿಹನು
ಮನೆಯಲ್ಲೇ ಕುಳಿತ ಗಂಡು!

ಮ.ಗು.ಬಸವಣ್ಣ
ನಂಜನಗೂಡು

ಮಹಿಳೆಯರ ಈ ನಡೆ ಅನುಚಿತ

‘ನಾವು ಸಾಲ ಕಟ್ಟಲ್ಲ ಅಂದರೆ ಕಟ್ಟಲ್ಲ, ಏನ್ಮಾಡ್ತೀರೋ ಮಾಡ್ಕೊಳ್ಳಿ’ ಎಂದು ಕೋಲಾರ ತಾಲ್ಲೂಕಿನ ಹೊಸಮಟ್ನಹಳ್ಳಿಯ ಸ್ತ್ರೀಶಕ್ತಿ ಸಂಘದ ಸದಸ್ಯರು ಸರ್ಕಾರಕ್ಕೆ ಧಮಕಿ ಹಾಕಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 14). ಸಾಲದೆಂಬಂತೆ, ಸಾಲ ವಸೂಲಿಗೆ ಬರುವ ಅಧಿಕಾರಿಗಳು ಗ್ರಾಮ ಪ್ರವೇಶ ಮಾಡದಂತೆ ತಾಕೀತು ಮಾಡಿದ್ದಾರೆ. ಮತ್ತೊಂದು ಪ್ರಕರಣದಲ್ಲಿ, ಮುಳಬಾಗಿಲು ತಾಲ್ಲೂಕಿನ ಹಿರಣ್ಯಗೌಡನ ಹಳ್ಳಿಯ ಸ್ತ್ರೀಶಕ್ತಿ ಸಂಘದ ಮಹಿಳೆಯರು, ಸಾಲ ವಸೂಲಿಗೆ ಬಂದ ಬೈರಕೂರಿನ ವ್ಯವಸಾಯ ಸಹಕಾರ ಸೇವಾ ಸಂಘದ ಕಾರ್ಯದರ್ಶಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಯಾರೂ ಸಾಲ ಪಾವತಿಸುವುದಿಲ್ಲ ಎಂದು ಹೇಳಿದ್ದಲ್ಲದೆ, ಆ ಅಧಿಕಾರಿಯನ್ನು ಹಗ್ಗದಿಂದ ಕಟ್ಟಿಹಾಕಲು ಪ್ರಯತ್ನಿಸಿದ್ದಾರೆ ಎಂದು ವರದಿಯಾಗಿದೆ (ಪ್ರ.ವಾ., ಜೂನ್ 17).

ಈ ಮಹಿಳೆಯರ ಇಂಥ ದರ್ಪದ ಮಾತುಗಳು ಮತ್ತು ನಡವಳಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಚುನಾವಣಾ ಪ್ರಚಾರ ಭಾಷಣದ ಸಂದರ್ಭದಲ್ಲಿ ನೀಡಿದ್ದ ಭರವಸೆಗಳು ಕಾನೂನಾಗುವವರೆಗೂ ಅವು ಕೇವಲ ಭರವಸೆಗಳಾಗಿಯೇ ಉಳಿಯುತ್ತವೆ. ಆದ್ದರಿಂದ ಭರವಸೆಗಳನ್ನು ಕಾನೂನಾಗುವಂತೆ ಒತ್ತಡ ತರಬೇಕು ಇಲ್ಲವೇ ಪಡೆದ ಸಾಲವನ್ನು ಮರುಪಾವತಿ ಮಾಡಬೇಕು. ಈ ಎರಡು ಸಾಧ್ಯತೆಗಳನ್ನು ಬಿಟ್ಟು ಸ್ತ್ರೀಶಕ್ತಿ ಸಂಘಗಳಿಗೆ ಬೇರೆ ಆಯ್ಕೆಗಳಿಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ರೈತರಿಂದಲೇ ಭತ್ತ ಖರೀದಿಸಲಿ

ಅನ್ನಭಾಗ್ಯ ಯೋಜನೆ ಜಾರಿಗೆ ಕೇಂದ್ರ ಸರ್ಕಾರ ಅಕ್ಕಿ ಕೊಡುತ್ತಿಲ್ಲ ಎಂದು ಹೇಳಿ ರಾಜ್ಯ ಸರ್ಕಾರವು ಬೇರೆ ರಾಜ್ಯಗಳಿಂದ ಅಕ್ಕಿ ಖರೀದಿಸಲು ಮುಂದಾಗಿದೆ. ಆದರೆ ಮಂಡ್ಯ ಜಿಲ್ಲೆ ಸೇರಿದಂತೆ ವಿವಿಧೆಡೆ ಭತ್ತದ ಒಕ್ಕಣೆ ನಡೆಯುತ್ತಿದೆ. ಆ ಸ್ಥಳದಲ್ಲೇ ವ್ಯಾಪಾರಿಗಳಿಗೆ ರೈತರು ಕಡಿಮೆ ಬೆಲೆಗೆ ಭತ್ತವನ್ನು ಮಾರಾಟ ಮಾಡುತ್ತಿದ್ದಾರೆ. ಹೊರ ರಾಜ್ಯಗಳಿಂದ ಹೆಚ್ಚು ಬೆಲೆಗೆ ಅಕ್ಕಿ ಖರೀದಿ ಮಾಡುವ ಬದಲು ರೈತರಿಂದ ನೇರವಾಗಿ ಭತ್ತ, ರಾಗಿ, ಜೋಳ ಖರೀದಿ ಮಾಡಿದರೆ ಅನ್ನಭಾಗ್ಯ ಯೋಜನೆ ಜಾರಿಗೆ ಸಹಾಯಕವಾಗುತ್ತದೆ.

ಸರ್ಕಾರ ಮನಸ್ಸು ಮಾಡಿ, ಹಳ್ಳಿಗಳಲ್ಲಿ ಇರುವ ರೈತರ ಸಹಕಾರ ಸೊಸೈಟಿಗಳ ಮೂಲಕ ಧಾನ್ಯ ಖರೀದಿ ಮಾಡಬೇಕು. ಆಗ ರೈತರಿಗೂ ಒಳ್ಳೆಯ ಬೆಲೆ ಸಿಗುತ್ತದೆ, ಸರ್ಕಾರಕ್ಕೂ ಕಡಿಮೆ ಬೆಲೆಗೆ ಧಾನ್ಯ ಸಿಗುತ್ತದೆ. ಜೊತೆಗೆ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿದಂತೆ ಆಗುತ್ತದೆ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಸಾಂಸ್ಕೃತಿಕ ವಲಯ: ಸಭೆ ನಡೆಯಲಿ

ಸಾಂಸ್ಕೃತಿಕ ನೀತಿ ರಚನೆಯ ಅಗತ್ಯವನ್ನು ಪ್ರತಿಪಾದಿಸುವ ವಿಶೇಷ ವರದಿ (ಪ್ರ.ವಾ., ಜೂನ್ 17) ಸಕಾಲಿಕವಾಗಿದೆ. ಸರ್ಕಾರವನ್ನು ಮುನ್ನಡೆಸುವ ಪಕ್ಷ ಬದಲಾದಾಗಲೆಲ್ಲಾ ಸಾಂಸ್ಕೃತಿಕ ನೀತಿಯ ಬಗ್ಗೆ ಚರ್ಚೆಗಳು ಆರಂಭವಾಗುತ್ತವೆ. ಪಕ್ಷವು ತನ್ನ ಧೋರಣೆಗೆ ತಕ್ಕಂತಹ ಬದಲಾವಣೆಗೆ ಮುಂದಾಗುತ್ತದೆ. ಪಠ್ಯಪುಸ್ತಕಗಳ ಬದಲಾವಣೆಯಲ್ಲಿ ಗೊಂದಲಗಳು ಉಂಟಾದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲೂ ಗೊಂದಲ ಸೃಷ್ಟಿಯಾಗಿ ಕಲೆ, ಕಲಾವಿದರು ನಲುಗಿಹೋಗುತ್ತಾರೆ. ಅಕಾಡೆಮಿಗಳ ಬೈಲಾ, ರಂಗಾಯಣ, ರಂಗಸಮಾಜ ಎಲ್ಲದರಲ್ಲೂ ಸರ್ಕಾರ ಮಧ್ಯಪ್ರವೇಶಿಸಿ, ತನ್ನ ಪಕ್ಷದ ಸಿದ್ಧಾಂತದ ಪ್ರತಿಪಾದಕರನ್ನು ಆಯಕಟ್ಟಿನ ಸ್ಥಳಗಳಲ್ಲಿ ಪ್ರತಿಷ್ಠಾಪಿಸುತ್ತದೆ. ಈ ಹಿಂದಿನ ಸರ್ಕಾರವಂತೂ ಸಂಸ್ಕೃತಿ ಇಲಾಖೆಯ ಉಸ್ತುವಾರಿಗೆ ಸಂಘ ಪರಿವಾರದ ಒಬ್ಬ ಪ್ರತಿನಿಧಿಯನ್ನು ನೇಮಿಸಿತ್ತು. ಒಂದು ಇಲಾಖೆಯ ನಿಯಂತ್ರಣವನ್ನು ಸಚಿವರ ಪರವಾಗಿ ಮತ್ತೊಬ್ಬ ವ್ಯಕ್ತಿ ಮಾಡುವ ಸನ್ನಿವೇಶ ಸೃಷ್ಟಿಯಾಗಿತ್ತು.

ಇಂತಹ ವ್ಯವಸ್ಥೆಯ ನಡುವೆ ರಂಗಸಮಾಜ ಅಪ್ರಸ್ತುತವಾಗಿದೆ. ವಾರ್ಷಿಕವಾಗಿ ಸರ್ಕಾರ ನೀಡುವ ಗುಬ್ಬಿ ಪ್ರಶಸ್ತಿ, ಕಾರಂತ ಪ್ರಶಸ್ತಿಯಂತಹವುಗಳನ್ನು ನಿಗದಿತ ಸಮಯದಲ್ಲಿ ನೀಡದೆ ಗೊಂದಲದ ಪರಿಸ್ಥಿತಿ ಉಂಟಾಗಿದೆ. ಪ್ರಶಸ್ತಿ ಆಯ್ಕೆ ಸಮಿತಿಯು ಪ್ರಶಸ್ತಿಗಳನ್ನು ಘೋಷಿಸಿದ್ದರೂ ಅಧಿಕೃತ ಕಾರ್ಯಕ್ರಮ ನಡೆದಿಲ್ಲ. ಆಯಾ ಆರ್ಥಿಕ ವರ್ಷದಲ್ಲಿ ಪ್ರಶಸ್ತಿ ಪ್ರದಾನ ಮಾಡದೆ, ಆರೋಗ್ಯದ ಕಾರಣಕ್ಕಾಗಿ ಅಥವಾ ವಯಸ್ಸಿನ ಕಾರಣಕ್ಕಾಗಿ ತೀರಿಕೊಂಡ ಪ್ರಶಸ್ತಿ ಪುರಸ್ಕೃತರು ಅದನ್ನು ಖುದ್ದಾಗಿ ಪಡೆಯುವಲ್ಲಿ ವಂಚಿತರಾದ ಉದಾಹರಣೆಗಳು ಇವೆ. ಹಿಂದಿನ ಸರ್ಕಾರ ಈಗಾಗಲೇ ಘೋಷಣೆ ಮಾಡಿರುವ ಪ್ರಶಸ್ತಿಗಳನ್ನು ಪಡೆದ ಪುರಸ್ಕೃತರು ಸಮಾರಂಭಕ್ಕಾಗಿ ಎದುರು ನೋಡುತ್ತಿದ್ದಾರೆ. ಸಚಿವರು ಸಾಂಸ್ಕೃತಿಕ ರಂಗದ ಪ್ರತಿನಿಧಿಗಳನ್ನು ಆಹ್ವಾನಿಸಿ ಸಭೆ ನಡೆಸುವಂತಾಗಲಿ. ಆಗ ಸಾಂಸ್ಕೃತಿಕ ವಲಯದ ಅನೇಕ ವಿಷಯಗಳು ಸಚಿವರಿಗೆ ಮನವರಿಕೆಯಾಗಬಹುದು. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಸೇರಿದಂತೆ ಜಿಲ್ಲಾ ರಂಗಮಂದಿರಗಳ ಅವ್ಯವಸ್ಥೆಯಂತಹ ಅನೇಕ ವಿಷಯಗಳನ್ನು ಕಲಾವಿದರೊಂದಿಗೆ ಸಮಾಲೋಚಿಸಿ ಪರಿಹಾರ ಒದಗಿಸಲು ಸಚಿವರು ಮುಂದಾಗುತ್ತಾರೆ ಎಂದು ನಿರೀಕ್ಷಿಸಬಹುದೇ?

ಶಶಿಧರ ಭಾರಿಘಾಟ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಸಿಗಾಳಿ ನಿರ್ವಹಣೆಗೆ ಸಜ್ಜಾಗದ ಸರ್ಕಾರ

‘ಉತ್ತರ ಪ್ರದೇಶದ ಬಲಿಯಾ ಜಿಲ್ಲಾ ಆಸ್ಪತ್ರೆಯಲ್ಲಿ ಶುಕ್ರವಾರದಿಂದ ಭಾನುವಾರದವರೆಗೆ 54 ಜನರು ಮೃತಪಟ್ಟಿದ್ದಾರೆ. ಬಿಸಿಗಾಳಿಯ ಕಾರಣದಿಂದಲೇ, ಅಷ್ಟು ಜನರು ಮೃತಪಟ್ಟಿದ್ದಾರೆ. ಜತೆಗೆ 400ಕ್ಕೂ ಹೆಚ್ಚು ಜನರು ಆಸ್ಪತ್ರೆಗೆ ದಾಖಲಾಗಿದ್ದಾರೆ’ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಆದರೆ, ಬಿಸಿಗಾಳಿಯ ಕಾರಣದಿಂದಲೇ ಇಷ್ಟೆಲ್ಲಾ ಜನರು ಮೃತಪಟ್ಟಿದ್ದಾರೆ ಎಂಬುದನ್ನು ಜಿಲ್ಲಾಸ್ಪತ್ರೆ ನಿರಾಕರಿಸಿದೆ. ಬಿಸಿಗಾಳಿಯಿಂದ ಪ್ರತಿ ವರ್ಷ ನೂರಾರು ಜನರು ಮೃತಪಡುತ್ತಿದ್ದರೂ, ಅವು ಬಿಸಿಗಾಳಿಯಿಂದ ಸಂಭವಿಸಿದ ಸಾವು ಎಂದು ಪರಿಗಣಿಸುವ ವ್ಯವಸ್ಥೆ ಇಲ್ಲ. ಬಿಸಿಗಾಳಿಯಿಂದ ಆಗುವ ಪರಿಣಾಮಗಳನ್ನು ತಡೆಯಲು ಯಾವ ಮುನ್ನೆಚ್ಚರಿಕಾ ಕ್ರಮವನ್ನೂ ಸರ್ಕಾರ ತೆಗೆದುಕೊಳ್ಳುವುದಿಲ್ಲ. ಇದಕ್ಕಾಗಿ ಒಂದು ಕಾರ್ಯಯೋಜನೆಯನ್ನು ರೂಪಿಸಿದ್ದರೂ ಕೇಂದ್ರ ಗೃಹ ಸಚಿವಾಲಯ ಅದನ್ನು ಅನುಷ್ಠಾನಕ್ಕೆ ತಂದೇ ಇಲ್ಲ

ಪ್ರಜಾವಾಣಿ ವಾರ್ತೆ

‘ಭಾರತದ ಶೇ 90ರಷ್ಟು ಜನರು ಬಿಸಿಗಾಳಿಯ ಪರಿಣಾಮಗಳಿಗೆ ನೇರವಾಗಿ ಗುರಿಯಾಗುತ್ತಾರೆ. ಆದರೆ, ಅದರ ಪರಿಣಾಮಗಳನ್ನು ಗುರುತಿಸುವುದನ್ನು ಭಾರತ ಸರ್ಕಾರ ಕಡೆಗಣಿಸಿದೆ. ಬಿಸಿಗಾಳಿಯ ಮುನ್ಸೂಚನೆ, ಅದಕ್ಕೆ ಒಳಗಾಗಲಿರುವ ಜನರನ್ನು ರಕ್ಷಿಸುವ ವ್ಯವಸ್ಥೆ ಭಾರತದಲ್ಲಿ ಇಲ್ಲ’ ಎಂದು ಕೇಂಬ್ರಿಜ್ ವಿಶ್ವವಿದ್ಯಾಲಯದ ಅಧ್ಯಯನ ವರದಿಯೊಂದು ಹೇಳಿತ್ತು. ಇದೇ ಏಪ್ರಿಲ್‌ನಲ್ಲಿ ‘ಪಿಎಲ್‌ಒಎಸ್ ಕ್ಲೈಮೇಟ್’ ನಿಯತಕಾಲಿಕದಲ್ಲಿ ಆ ವರದಿ ಪ್ರಕಟವಾಗಿತ್ತು. ವರದಿ ಪ್ರಕಟವಾದ ಬೆನ್ನಲ್ಲೇ, ‘ಈ ಬಗ್ಗೆ ಗಮನ ಹರಿಸುತ್ತೇವೆ’ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಹೇಳಿತ್ತು.

ಬಿಸಿಗಾಳಿ ಪರಿಸ್ಥಿತಿಯನ್ನು ನಿರ್ವಹಣೆ ಮಾಡುವ ಸಂಬಂಧ 2019ರ ಅಕ್ಟೋಬರ್‌ನಲ್ಲಿ ಕೇಂದ್ರ ಗೃಹ ಸಚಿವಾಲಯವು ಒಂದು ಕಾರ್ಯಯೋಜನೆಯನ್ನು ಸಿದ್ಧಪಡಿಸಿತ್ತು. ಬಿಸಿಗಾಳಿ ಪರಿಸ್ಥಿತಿ ನಿರ್ವಹಣೆ ಮಾಡುವುದು ಹೇಗೆ? ಜನರು ಬಿಸಿಗಾಳಿಗೆ ಬಲಿಯಾಗುವುದನ್ನು ತಡೆಯುವುದು ಹೇಗೆ? ಇದಕ್ಕಾಗಿ ಏನೆಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದನ್ನು ಈ ಕಾರ್ಯಯೋಜನೆಯಲ್ಲಿ ವಿವರಿಸಲಾಗಿತ್ತು. ಗೃಹ ಸಚಿವಾಲಯವೇ ಸಿದ್ಧಪಡಿಸಿದ್ದ ಈ ಕಾರ್ಯಯೋಜನೆ ಮತ್ತು ಮಾರ್ಗಸೂಚಿಯನ್ನು ಆ ಸಚಿವಾಲಯವೇ ಅನುಷ್ಠಾನಕ್ಕೆ ತರಬೇಕಿತ್ತು. ಆದರೆ ಅದನ್ನು ಅನುಷ್ಠಾನಕ್ಕೆ ತಂದಿಲ್ಲ.

‘ಬಿಸಿಗಾಳಿಯನ್ನು ವಿಪತ್ತು ಎಂದು ಪರಿಗಣಿಸುವುದಿಲ್ಲ. ಇದಕ್ಕೆ ವಿಪತ್ತು ನಿರ್ವಹಣಾ ನಿಧಿಯ ಅಡಿಯಲ್ಲಿ ಹಣಕಾಸು ನೆರವು ಸಿಗುವುದಿಲ್ಲ. ರಾಜ್ಯ ಸರ್ಕಾರಗಳು ತಮ್ಮಲ್ಲಿರುವ ವಿಪತ್ತು ನಿರ್ವಹಣಾ ನಿಧಿಯಲ್ಲಿ, ಬಿಸಿಗಾಳಿ ನಿರ್ವಹಣೆಗೆ ಶೇ 10ರಷ್ಟು ಮೊತ್ತವನ್ನು ವೆಚ್ಚ ಮಾಡಬಹುದು’ ಎಂದು ಈ ಕಾರ್ಯಸೂಚಿಯಲ್ಲಿ ಹೇಳಲಾಗಿದೆ. ‘ಬಿಸಿಗಾಳಿಯಿಂದ ಸಂಭವಿಸುವ ಸಾವಿನ ಬಗ್ಗೆ ನಿಖರವಾದ ದಾಖಲೆ/ಅಂಕಿಅಂಶ ಲಭ್ಯವಿಲ್ಲ. ಅದನ್ನು ಸಂಗ್ರಹಿಸಿದ ನಂತರವಷ್ಟೇ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ’ ಎಂದು ಈ ಕ್ರಿಯಾಯೋಜನೆಯಲ್ಲಿ ಹೇಳಲಾಗಿದೆ. ಆದರೆ, ಅದು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ.

ಬಿಸಿಲಿನ ಆಘಾತ/ಸೂರ್ಯಾಘಾತದಿಂದ ಸಾವು ಸಂಭವಿಸಿದಾಗಲಷ್ಟೇ ಅದನ್ನು ‘ಬಿಸಿಗಾಳಿಯಿಂದ ಸಂಭವಿಸಿದ ಸಾವು’ ಎಂದು ಪರಿಗಣಿಸಲಾಗುತ್ತದೆ. ಇತರೆ ಕಾಯಿಲೆಗಳಿದ್ದು, ಬಿಸಿಲಿನ ತೀವ್ರತೆಯಿಂದ ಸಾವು ಸಂಭವಿಸಿದ್ದರೆ ಅದನ್ನು ‘ಬಿಸಿಗಾಳಿಯಿಂದ ಸಂಭವಿಸಿದ ಸಾವು’ ಎಂದು ಪರಿಗಣಿಸುವುದಿಲ್ಲ. ಉತ್ತರ ಪ್ರದೇಶದ ಬಲಿಯಾ ಜಿಲ್ಲಾ ಆಸ್ಪತ್ರೆಯಲ್ಲಿ ಬಿಸಿಲಿನ ಆಘಾತದಿಂದ ಸತ್ತವರ ಲೆಕ್ಕವನ್ನಷ್ಟೇ ಆಸ್ಪತ್ರೆ ನೀಡುತ್ತಿದೆ. ಉಳಿದವರ ಸಾವಿಗೆ ಬೇರೆ ಕಾರಣ ಎಂದು ಜಿಲ್ಲಾಸ್ಪತ್ರೆ ಹೇಳುತ್ತಿದೆ. ಎರಡೂ ರೀತಿಯ ಸಾವುಗಳನ್ನು ಬಿಸಿಗಾಳಿಯಿಂದ ಸಂಭವಿಸಿದ ಸಾವು ಎಂದೇ ಪರಿಗಣಿಸಬೇಕು ಎಂದು ಕಾರ್ಯಯೋಜನೆಯಲ್ಲಿ ಶಿಫಾರಸು ಮಾಡಲಾಗಿದೆ. ಆದರೆ, ಅದು ಅನುಷ್ಠಾನಕ್ಕೆ ಬರದೇ ಇರುವ ಕಾರಣ, ಗೊಂದಲ ಮುಂದುವರಿದೆ.

ಶಿಫಾರಸುಗಳ ಕಡೆಗಣನೆ

ಬಿಸಿಗಾಳಿ ನಿರ್ವಹಣೆ ಮಾರ್ಗಸೂಚಿ ಕಾರ್ಯಯೋಜನೆಯಲ್ಲಿ ಮಾಡಲಾಗಿದ್ದ ಹಲವು ಶಿಫಾರಸುಗಳು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಅಂತಹ ಕೆಲವು ಶಿಫಾರಸುಗಳು ಇಂತಿವೆ

ಮುನ್ನೆಚ್ಚರಿಕೆ ಮತ್ತು ಆಸ್ಪತ್ರೆ ಸಿದ್ಧತೆ

ಬಿಸಿಗಾಳಿ ಪರಿಸ್ಥಿತಿ ತಲೆದೋರುವುದಕ್ಕೂ 2ರಿಂದ 3 ವಾರ ಮೊದಲು ಮುನ್ಸೂಚನೆ ನೀಡುವ ವ್ಯವಸ್ಥೆ ರೂಪಿಸಬೇಕು. ಮುನ್ಸೂಚನೆ ನೀಡಿದರೆ, ಜನರು ಬಿಸಿಲಿನ ತೀವ್ರತೆಗೆ ಸಿಲುಕುವುದನ್ನು ತಪ್ಪಿಸಬಹುದು. ಇದರಿಂದ ಬಿಸಿಗಾಳಿಯ ಸಾವಿನ ಸಂಖ್ಯೆ ಕಡಿಮೆ ಮಾಡಬಹುದು ಎಂದು ಈ ಕಾರ್ಯಸೂಚಿಯಲ್ಲಿ ಶಿಫಾರಸು ಮಾಡಲಾಗಿತ್ತು. ಆದರೆ ಈ ವ್ಯವಸ್ಥೆ ಜಾರಿಗೆ ಬಂದಿಲ್ಲ. ಇದೇ ಜೂನ್ 18ರ ಭಾನುವಾರದಿಂದ ನಾಲ್ಕು ದಿನ ಹಲವು ರಾಜ್ಯಗಳಲ್ಲಿ ಬಿಸಿಗಾಳಿ ತಲೆದೋರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆದರೆ, ಮುನ್ಸೂಚನೆ ನೀಡಿದ್ದು ಜೂನ್ 18ರಂದೇ. 2ರಿಂದ 3 ವಾರ ಮೊದಲು ಮುನ್ಸೂಚನೆ ನೀಡಬೇಕು ಎಂದು ಶಿಫಾರಸು ಮಾಡಿದ್ದರೂ, ಅಂತಹ ವ್ಯವಸ್ಥೆ ರೂಪುಗೊಂಡಿಲ್ಲ. ಹೀಗಾಗಿ ಸಂಬಂಧಿಸಿದ ರಾಜ್ಯ ಸರ್ಕಾರ/ಜಿಲ್ಲಾಡಳಿತಗಳು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಿಲ್ಲ.

ಬಿಸಿಗಾಳಿ ಪರಿಸ್ಥಿತಿಯ ಬಗ್ಗೆ ಮುಂಚಿತವಾಗಿಯೇ ಮಾಹಿತಿ ದೊರೆತರೆ, ವೈದ್ಯಕೀಯ ಸವಲತ್ತನ್ನು ಅದಕ್ಕೆ ಸಜ್ಜುಗೊಳಿಸಬಹುದು. ಆಸ್ಪತ್ರೆಗಳಲ್ಲಿ ಹೆಚ್ಚುವರಿ ಹಾಸಿಗೆಗಳನ್ನು ಸಿದ್ಧಮಾಡಿಕೊಳ್ಳಬೇಕು, ಆಂಬುಲೆನ್ಸ್‌ಗಳು ಲಭ್ಯವಿರುವಂತೆ ನೋಡಿಕೊಳ್ಳಬೇಕು, ಅಗತ್ಯ ಸಿಬ್ಬಂದಿ ಮತ್ತು ಔಷಧವನ್ನು ಸಿದ್ಧಪಡಿಸಿಕೊಳ್ಳಬೇಕು ಎಂದು ಕಾರ್ಯಸೂಚಿಯಲ್ಲಿ ಶಿಫಾರಸು ಮಾಡಲಾಗಿತ್ತು. ಆದರೆ, ಅದು ಅನುಷ್ಠಾನಕ್ಕೆ ಬಂದಿಲ್ಲ. ಮುನ್ಸೂಚನೆ ಇಲ್ಲದೇ ಇದ್ದರೆ, ಆಸ್ಪತ್ರೆ ಮತ್ತು ವೈದ್ಯಕೀಯ ಸಿಬ್ಬಂದಿಯನ್ನು ಆ ಪರಿಸ್ಥಿತಿ ನಿರ್ವಹಣೆಗೆ ಸಜ್ಜುಪಡಿಸಲು ಸಾಧ್ಯವಾಗುವುದಿಲ್ಲ. ಇದು ಅಂತಿಮವಾಗಿ, ಬಿಸಿಲಿನ ತಾಪದಿಂದ ಬಳಲಿದ ಜನರಿಗೆ ತ್ವರಿತವಾಗಿ ಚಿಕಿತ್ಸೆ ದೊರೆಯುವಲ್ಲಿ ವಿಳಂಬಕ್ಕೆ ಕಾರಣವಾಗುತ್ತದೆ ಎಂಬ ಕಳವಳ ವ್ಯಕ್ತವಾಗಿದೆ.

ಅಪಾಯದಲ್ಲಿರುವವರನ್ನು ಗುರುತಿಸಿ

‘ಒಂದು ದಿನಕ್ಕೆ ನಾನು ಸುಮಾರು 12 ತಾಸು ಕೆಲಸ ಮಾಡುತ್ತೇನೆ. ಬಿರು ಬಿಸಿಲಿನ ದಿನಗಳಲ್ಲಿ ಕೆಲಸ ಮಾಡುವುದು ಎಂದರೆ ಅದು ನರಕವೇ. ಹೀಗೆ 12 ತಾಸು ಕೆಲಸ ಮಾಡಿದರೆ, ಸಂಜೆಯ ಹೊತ್ತಿಗೆಲ್ಲಾ ತಲೆ ಸಿಡಿಯಲು ಆರಂಭಿಸುತ್ತದೆ. ಆದರೆ, ಏನು ಮಾಡುವುದು ಜೀವನಕ್ಕಾಗಿ ನಾನು ದುಡಿಯುವುದು ಅನಿವಾರ್ಯ’ ಎನ್ನುತ್ತಾರೆ ಮಮತಾ. ಇವರು ದೆಹಲಿಯ ಕಟ್ಟಡ ಕಾರ್ಮಿಕ ಮಹಿಳೆ.

ಬಿಸಿಗಾಳಿಯಿಂದ ಅಪಾಯಕ್ಕೆ ಒಳಗಾಗುವ ಮಮತಾರಂತಹ ಕೋಟ್ಯಂತರ ಕಾರ್ಮಿಕರು ಭಾರತದಲ್ಲಿ ಇದ್ದಾರೆ. ದಿನವಿಡೀ ಸೂರ್ಯನ ಜೊತೆ ಹೆಣಗಾಡುವ ಈ ವರ್ಗವೇ ಬಿಸಿಗಾಳಿಯ ಹೆಚ್ಚಿನ ಅಪಾಯಕ್ಕೆ ಒಳಗಾಗುವುದು. ಮನೆ ಒಳಗಿದ್ದರೂ ಬಿಸಿಗಾಳಿಯಿಂದ ಅಪಾಯ ಇದ್ದೇ ಇದೆ. ತಾಪಮಾನ ಹೆಚ್ಚಳದ ಕಾರಣಕ್ಕಾಗಿಯೇ ಹಲವು ರೋಗಗಳು ಬಾಧಿಸುತ್ತವೆ. ಆದ್ದರಿಂದ ಇಂಥ ರೋಗಿಗಳು ಕೂಡ ಬಿಸಿಗಾಳಿಯಿಂದ ಅಪಾಯಕ್ಕೊಳಗಾದವರು ಎಂದೇ ಹೇಳಬೇಕಾಗುತ್ತದೆ.

ಸಮೀಕ್ಷೆ ನಡೆಸಿ: ಈ ಎಲ್ಲಾ ಕಾರಣಗಳಿಂದಾಗಿ ಮನೆ ಮನೆ ಸಮೀಕ್ಷೆ ನಡೆಸಬೇಕು ಎಂದು ಕಾರ್ಯಯೋಜನೆಯಲ್ಲಿ ಹೇಳಲಾಗಿದೆ. ಸಾಮಾಜಿಕ–ಭೌಗೋಳಿಕ ಅಂಕಿ ಅಂಶ, ವೈದ್ಯಕೀಯ ಸ್ಥಿತಿಗತಿ, ಬಿಸಿಲಿಗೆ ಯಾರು ಹೇಗೆ ಸಿದ್ಧತೆ ನಡೆಸಿಕೊಳ್ಳುತ್ತಾರೆ, ಬೇಸಿಗೆಯಲ್ಲಿ ಜನರು ಎದುರಿಸುವ ಸವಾಲುಗಳು, ಬೇಸಿಗೆ ತಾಳಿಕೊಳ್ಳಲು ಸಾಮುದಾಯಿಕ ಪ್ರಯತ್ನ ಏನಿದೆ ಹೀಗೆ ಈ ಎಲ್ಲದರ ಕುರಿತು ಸಮೀಕ್ಷೆ ನಡೆಸಬೇಕು ಎಂದು ಕಾರ್ಯಯೋಜನೆ ಹೇಳಿದೆ.

ಯಾರು ಯಾವ ಕೆಲಸ ಮಾಡುತ್ತಾರೆ ಎನ್ನುವ ಮಾಹಿತಿ ಕಲೆಹಾಕಬೇಕು. ಆಗ ಬಿಸಿಲಿಗೆ ತಮ್ಮನ್ನು ನೇರವಾಗಿ ಒಡ್ಡಿಕೊಂಡು ಕೆಲಸ ಮಾಡುವ ಮತ್ತು ಕಚೇರಿಯೊಳಗೆ ಕೆಲಸ ಮಾಡುವವರು ಎಂಬ ವರ್ಗೀಕರಣ ಸಾಧ್ಯವಾಗುತ್ತದೆ ಎನ್ನುತ್ತದೆ ಕಾರ್ಯಯೋಜನೆ. ಆದರೆ, ಈ ಯಾವುದೂ ಅನುಷ್ಠಾನವಾಗಿಲ್ಲ.

ಸಾವಿನ ಲೆಕ್ಕಾಚಾರ

122 ವರ್ಷಗಳ ಇತಿಹಾಸದಲ್ಲೇ 2022ರಲ್ಲಿ ಭಾರತದಲ್ಲಿ ಅತ್ಯಂತ ತೀವ್ರತೆಯ ಬಿರು ಬೇಸಿಗೆ ದಾಖಲಾಗಿತ್ತು. ಇದೇ ವರ್ಷ 25 ಜನರು ಬಿಸಿಗಾಳಿಯಿಂದ ಮೃತಪಟ್ಟಿದ್ದರು. 1995ರಿಂದ 2015ರವರೆಗೆ 24,223 ಮಂದಿ, ಅಧಿಕ ತಾಪಮಾನದ ಕಾರಣಕ್ಕಾಗಿ ಮೃತಪಟ್ಟಿದ್ದಾರೆ ಎಂದು ಸರ್ಕಾರವು ಅಂಕಿ ಅಂಶ ನೀಡುತ್ತಿದೆ.

ನಗರ ಪ್ರದೇಶಗಳಿಗಿಂತ ಗ್ರಾಮೀಣ ಭಾಗದಲ್ಲೇ ಹೆಚ್ಚು ಜನರು ಬಿಸಿಲಿನ ಕಾರಣಕ್ಕಾಗಿ ಮೃತಪಡುತ್ತಿದ್ದಾರೆ. ಆದರೆ, ಈ ಸಾವುಗಳು ದಾಖಲಾಗುತ್ತಿಲ್ಲ ಎಂದು ಈ ಕಾರ್ಯಯೋಜನೆಯಲ್ಲಿ ಹೇಳಲಾಗಿದೆ. ಹವಾನಿಯಂತ್ರಣ ವ್ಯವಸ್ಥೆ ಮಾಡಿಕೊಳ್ಳಲು ಸಾಧ್ಯವಾಗದ, ದಿನದ ಕೂಳಿಗಾಗಿ ಮನೆಯಿಂದ ಹೊರಗೆ ಕೆಲಸ ಮಾಡಬೇಕಾದ ದೊಡ್ಡ ವರ್ಗದ ಜನರೇ ಬಿಸಿಗಾಳಿಯ ಕಾರಣಕ್ಕೆ ಮೃತಪಡುತ್ತಿದ್ದಾರೆ ಎಂದು ಕಾರ್ಯಯೋಜನೆಯಲ್ಲಿ ಹೇಳಲಾಗಿದೆ.

ಯಾವ ಜನರು ಬಿಸಿಗಾಳಿಗೆ ಬಲಿಯಾಗುತ್ತಾರೆ ಎಂಬುದನ್ನು ಗುರುತಿಸಲು ತಳಮಟ್ಟದಿಂದ ಮಾಹಿತಿ ಕಲೆಹಾಕಬೇಕು. ಮೃತವ್ಯಕ್ತಿಯ ವಯಸ್ಸು, ಲಿಂಗ, ವ್ಯಕ್ತಿಯ ಕೆಲಸದ ವಿವರ. ಜೊತೆಗೆ ಮನೆಯೊಳಗೆ ಸಾವು ಸಂಭವಿಸಿತೇ ಅಥವಾ ಹೊರಗಡೆಯೇ ಎಂಬ ಮಾಹಿತಿಯುಳ್ಳ ಅಂಕಿ ಅಂಶ ಸಿದ್ಧಪಡಿಸಬೇಕು. ಒಂದು ಪ್ರದೇಶದಲ್ಲಿ ಬಿರುಬೇಸಿಗೆ ಅಥವಾ ಬಿಸಿಗಾಳಿಯ ಅವಧಿಯಲ್ಲಿ ಸಂಭವಿಸಿದ ಸಾವುಗಳ ಮಾಹಿತಿ ಕಲೆ ಹಾಕಬೇಕು. ಆ ಅವಧಿಯಲ್ಲಿ ಸಾವಿನ ಪ್ರಮಾಣ ಹೆಚ್ಚಾಗಿದ್ದರೆ, ಅವನ್ನು ಪರಿಶೀಲಿಸಬೇಕು. ಬಿಸಿಲಿನ ತೀವ್ರತೆಯಿಂದಲೇ ಸಾವು ಸಂಭವಿಸಿದ್ದರೆ, ಆ ಪ್ರದೇಶ ಮತ್ತು ಅಲ್ಲಿನ ಜನ ಬಿಸಿಗಾಳಿಯಿಂದ ಅಪಾಯಕ್ಕೆ ಒಳಗಾಗುವ ವರ್ಗ ಎಂದು ವರ್ಗೀಕರಿಸಬೇಕು.

ಇದರಿಂದ ಬಿಸಿಗಾಳಿ ವಿಚಾರದಲ್ಲಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಶಿಫಾರಸು ಮಾಡಲಾಗಿತ್ತು. ಆದರೆ, ಈ ಶಿಫಾರಸುಗಳು ಇನ್ನೂ ಶಿಫಾರಸುಗಳಾಗಿಯೇ ಉಳಿದಿವೆ.

ಆಧಾರ: ಕೇಂದ್ರ ಗೃಹ ಸಚಿವಾಲಯದ ‘ಬಿಸಿಗಾಳಿ ನಿರ್ವಹಣೆ ಮಾರ್ಗಸೂಚಿ ರಚನೆಗೆ ಕಾರ್ಯಯೋಜನಾ ವರದಿ’, ರಾಷ್ಟ್ರೀಯ ವಿಪತ್ತು ನಿರ್ವಹಣಾ ನೀತಿ, ಪಿಟಿಐ

ಸಿನಿ ಬಿಟ್ಸ್

ರಾಜ್ ಕಪ್: ಆಟಗಾರರ ಆಯ್ಕೆ

ಹರಾಜು ಪ್ರಕ್ರಿಯೆಯಲ್ಲಿ ಭಾಗಿಯಾದ ಕನ್ನಡ ಸಿನಿತಾರೆಯರು.

ಕನ್ನಡ ಚಿತ್ರರಂಗದ ಕ್ರಿಕೆಟ್ ಹಬ್ಬ ಡಾ.ರಾಜ್ ಕಪ್‌ನ 6ನೇ ಆವೃತ್ತಿಗೆ ದುಬೈನಲ್ಲಿ ಚಾಲನೆ ದೊರೆತಿದೆ. ಇತ್ತೀಚೆಗಷ್ಟೆ ಆಟಗಾರರ ಹರಾಜು ಪ್ರಕ್ರಿಯೆ ಮುಕ್ತಾಯಗೊಂಡಿದ್ದು, 12 ತಂಡದ ನಾಯಕರು ತಮ್ಮ ನೆಚ್ಚಿನ ಆಟಗಾರರನ್ನು ತಂಡಕ್ಕೆ ಬರಮಾಡಿಕೊಂಡರು.

ಈ ಸಲ ಪುನೀತ್ ರಾಜ್ ಕುಮಾರ್ ಅವರ ಸ್ಮರಣಾರ್ಥವಾಗಿ ರಾಜ್ ಕಪ್ ಆಯೋಜಿಸಲಾಗಿದ್ದು, ಅಶ್ವಿನಿ ಪುನೀತ್ ರಾಜ್‌ಕುಮಾರ್ ಆಯ್ಕೆ ಪ್ರಕ್ರಿಯೆಯ ಮುಖ್ಯ ಅತಿಥಿಗಳಾಗಿದ್ದರು. ಶ್ರೀಲಂಕಾ, ಸಿಂಗಪುರ, ಮಲೇಷ್ಯಾ, ಬ್ಯಾಂಕಾಕ್ ಮತ್ತು ದುಬೈನಲ್ಲಿ ಒಟ್ಟು 27 ಪಂದ್ಯಗಳು ನಡೆಯಲಿವೆ. ನಟರಾದ ಡಾಲಿ ಧನಂಜಯ, ಅನಿರುದ್ಧ್, ಡಾರ್ಲಿಂಗ್ ಕೃಷ್ಣ, ಅಭಿಷೇಕ್ ಅಂಬರೀಶ್, ನೀನಾಸಂ ಸತೀಶ್, ಲೂಸ್ ಮಾದ ಯೋಗಿ, ವಶಿಷ್ಠ ಸಿಂಹ, ಪ್ರಜ್ವಲ್, ಕೋಮಲ್, ಶ್ರೀನಗರ ಕಿಟ್ಟಿ, ರಾಜುಗೌಡ ನೇತೃತ್ವದ ತಂಡಗಳು ಕಣದಲ್ಲಿವೆ. ಸಿನಿ ತಾರೆಯರು, ತಂತ್ರಜ್ಞರು, ರಾಜಕೀಯ ರಂಗದವರು, ಮಾಧ್ಯಮದವರು ಸೇರಿದಂತೆ ಸುಮಾರು ಸಾವಿರಕ್ಕೂ ಹೆಚ್ಚು ಆಟಗಾರರು ಈ ಸರಣಿಯಲ್ಲಿ ಭಾಗಿಯಾಗಲು ಅರ್ಜಿ ಸಲ್ಲಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಸೆಟ್ಟೇರಿತು ‘ಫೈರ್ ಫ್ಲೈ’

ಈಗಾಗಲೇ ಮೂರು ವೆಬ್ ಸರಣಿಗಳನ್ನು ನಿರ್ಮಾಣ ಮಾಡಿರುವ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರ ಪುತ್ರಿ ನಿವೇದಿತಾ ಶಿವರಾಜ್‌ಕುಮಾರ್ ಇದೀಗ ಸಿನಿಮಾ ನಿರ್ಮಾಣ ಮುಖಾಂತರ ಸ್ಯಾಂಡಲ್‌ವುಡ್‌ಗೆ ಅಧಿಕೃತವಾಗಿ ಪ್ರವೇಶ ಮಾಡಿದ್ದಾರೆ.

ಹೊಸ ಪ್ರತಿಭೆಗಳಿಗೆ ಅವಕಾಶ ನೀಡಲೆಂದು ಆರಂಭಿಸಿರುವ ‘ಶ್ರೀ ಮುತ್ತು ಸಿನಿ ಸರ್ವೀಸ್’ ಬ್ಯಾನರ್‌ನಡಿ ಚೊಚ್ಚಲ ಸಿನಿಮಾ ಸೆಟ್ಟೇರಿದೆ. ನಟ ಶಿವರಾಜ್ ಕುಮಾರ್ ದಂಪತಿ ಮಗಳ ಚೊಚ್ಚಲ ನಿರ್ಮಾಣ ಸಿನಿಮಾಗೆ ಶುಭ ಹಾರೈಸಿದರು.

‘ಫೈರ್ ಫ್ಲೈ’: ನಿವೇದಿತಾ ಅವರ ನಿರ್ಮಾಣದ ಮೊದಲ ಚಿತ್ರಕ್ಕೆ ‘ಫೈರ್ ಫ್ಲೈ’ ಎಂಬ ಶೀರ್ಷಿಕೆ ಇಡಲಾಗಿದೆ. ಚಿತ್ರಕ್ಕೆ ವಂಶಿ ಅವರು ಆ್ಯಕ್ಷನ್ ಕಟ್ ಹೇಳಲಿದ್ದು, ನಾಯಕನ ಪಾತ್ರಕ್ಕೂ ಬಣ್ಣಹಚ್ಚಲಿದ್ದಾರೆ. ‘ಪಿಆರ್‌ಕೆ ಪ್ರೊಡಕ್ಷನ್ಸ್’ ನಿರ್ಮಾಣದ ‘ಮಯಾಬಜಾರ್’ ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದ ಅವರು, ಇತ್ತೀಚೆಗೆ ಬಂದ ‘ಪೆಂಟಗನ್’ ಚಿತ್ರದಲ್ಲೂ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದರು. ಈಗ ನಿವೇದಿತಾ ಅವರು ಬಂಡವಾಳ ಹೂಡುತ್ತಿರುವ ಮೊದಲ ಚಿತ್ರಕ್ಕೆ ನಿರ್ದೇಶನ ಮಾಡುವ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಮತ್ತು ಹೀರೊ ಆಗಿ ಚಿತ್ರರಂಗದಲ್ಲಿ ಹೊಸ ಪಯಣ ಆರಂಭಿಸಿದ್ದಾರೆ. ಚಿತ್ರಕ್ಕೆ ಜಯ್ ರಾಮ್ ಸಹ-ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಅಭಿಲಾಷ್ ಕಲ್ಲತ್ತಿ ಛಾಯಾಗ್ರಹಣ, ಚರಣ್ ರಾಜ್ ಸಂಗೀತ ನಿರ್ದೇಶನ ಹಾಗೂ ರಘು ನಿಡುವಳ್ಳಿ ಅವರ ಸಂಭಾಷಣೆ ಇದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಆನೆಯೊಂದು ಮಗುವೊಂದನ್ನು ತನ್ನ ಸೊಂಡಲಿನಿಂದ ತಳ್ಳಿದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದಕ್ಕೆ ಕೋಮುಬಣ್ಣ ನೀಡಲಾಗಿದ್ದು, ಆನೆಯನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಲು ಯತ್ನಿಸಲಾಗುತ್ತಿದೆಯೇ ಎಂಬಂಥ ವ್ಯಂಗ್ಯಭರಿತ ಬರಹಗಳನ್ನು ಬರೆದು ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಎಂ.ಎಸ್. ಶ್ರೀನಿವಾಸ ರಾವ್ ಎಂಬವರು ಈ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದು, ‘ಕೇರಳದ ಮುಸ್ಲಿಂ ವ್ಯಕ್ತಿಯೊಬ್ಬ ಆನೆಗೆ ಮಾಂಸವನ್ನು ನೀಡಲು ಯತ್ನಿಸುತ್ತಿದ್ದಾನೆ. ಆಮೇಲೆ ನೋಡಿ ಏನಾಯಿತು. ಇಂಥ ವ್ಯಕ್ತಿಗಳಿಗೆ ಸಾಮಾನ್ಯ ಜ್ಞಾನ ಇಲ್ಲವೇ ಅಥವಾ ಇವರು ಆನೆಯನ್ನೂ ಮತಾಂತರ ಮಾಡಲು ಯತ್ನಿಸುತ್ತಿದ್ದಾರೆಯೇ?’ ಎಂದು ಬರೆದುಕೊಂಡಿದ್ದಾರೆ. ಇಂಥ ಬರಹ ಇರುವ ನೂರಾರು ಟ್ವೀಟ್‌ಗಳನ್ನು ಹಂಚಿಕೊಳ್ಳಲಾಗಿದೆ. ಆದರೆ, ಇದು ತಿರುಚಲಾದ ಮಾಹಿತಿ.

ಇದೊಂದು ಸುಳ್ಳು ಸುದ್ದಿ. ‘ಆನೆಯಿಂದ ದಾಳಿಗೊಳಲಾದ ತಂದೆ ಮತ್ತು ಮಗ’ ಎಂಬ ಶೀರ್ಷಿಕೆಯೊಂದಿಗೆ ಏಷಿಯಾನೆಟ್ ನ್ಯೂಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಇದೊಂದು ಹಳೆಯ ವಿಡಿಯೊವಾಗಿದ್ದು, 2022 ಏಪ್ರಿಲ್‌ನಲ್ಲಿ ಕೇರಳದ ಮಲ್ಲಪ್ಪುರದಲ್ಲಿ ನಡೆದ ಘಟನೆಯದ್ದಾಗಿದೆ. ತಂದೆ ನಬೀಲ್ ಹಾಗೂ ಅವರ 4 ವರ್ಷದ ಮಗ ಸೇರಿ ಆನೆಗೆ ಕೊಬ್ಬರಿ ನೀಡಲು ಮುಂದಾಗಿದ್ದರು. ಈ ವೇಳೆ ಆನೆ ದಾಳಿ ಮಾಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಇದನ್ನು ‘ಮಲಯಾಳ ಮನೋರಮಾ’ ಕೂಡ ವರದಿ ಮಾಡಿದೆ. ಆನೆಗೆ ಮಾಂಸ ತಿನ್ನಿಸಲು ಮತ್ತು ಮತಾಂತರದ ಯತ್ನ ಎಂಬುದು ಸುಳ್ಳು ಮಾಹಿತಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜೂನ್ 19, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ಪ್ರತಿಪದ್ ಗಂ. 11-26, ನಕ್ಷತ್ರ: ಆರ್ದ್ರಾ ಗಂ. 20-11 ಯೋಗ: ವೃದ್ಧಿ 25-15 ಕರಣ: ಬವ ಗಂ. 11-26, ಮಿಥುನ ಮಾಸದ 04 ನೇ ದಿನ, ಮಳೆನಕ್ಷತ್ರ: ಮೃಗಶಿರ 4. ರಾಹುಕಾಲ : ಬೆಳಿಗ್ಗೆ 07-30–09-00, ಸೂರ್ಯೋದಯ : 06-08 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 30 ಜುಲ್ಕಾಯಿದ್
ದಿನ ವಿಶೇಷ : ಮನೋರಥ ದ್ವಿತೀಯ ವ್ರತ (ಬಂಗಾಳ),
ಅದೃಷ್ಟ ಸಂಖ್ಯೆ : 6, 4

ಮೇಷ: ಮನೆಯಲ್ಲಿ ಎಲ್ಲರ ಆರೋಗ್ಯ ಚೆನ್ನಾಗಿದ್ದು, ಮನಸ್ಸಿಗೆ ನೆಮ್ಮದಿ ಇರುವುದು. ಮುಂಚೆಯೇ ನಿರ್ಧರಿಸಲಾಗಿದ್ದಂಥ ಪ್ರಯಾಣವನ್ನು ಅನಿವಾರ್ಯ ಕಾರಣಗಳಿಂದಾಗಿ ಮುಂದೂಡುವ ಅಥವಾ ಕೈಬಿಡುವ ಯೋಚನೆ ಮಾಡುವಿರಿ.

ವೃಷಭ: ಕೃತಕ ಅಂಗಾಂಗಗಳ ಕಸಿ ಮಾಡಿಸಿಕೊಂಡಿರುವವರಿಗೆ ಅದರಿಂದಾಗಿ ಆರೋಗ್ಯ ತಪ್ಪುವ ಸಾಧ್ಯತೆ ಇದೆ. ಸೃಷ್ಟಿಯಾದ ಕೌಟುಂಬಿಕ ಕಲಹವನ್ನು ನೀವೇ ಬುದ್ಧಿವಂತಿಕೆ ಉಪಯೋಗಿಸಿ ತಿಳಿಗೊಳಿಸಬೇಕಾಗುತ್ತದೆ.

ಮಿಥುನ: ಜೆರಾಕ್ಸ್ ಅಥವಾ ಪ್ರಿಂಟಿಂಗ್ ಪ್ರೆಸ್‌ನವರಿಗೆ ಅತ್ಯಧಿಕ ಮಟ್ಟದ ಗ್ರಾಹಕರು ಬರುತ್ತಾರೆ. ಕಳೆಯಿತು ಎಂದುಕೊಂಡ ರೋಗವೊಂದು ಮತ್ತೆ ಬೆಂಬಿಡದೇ ಕಾಡಿಸುತ್ತದೆ. ಮನೆಯ ಹೊರತು ಇನ್ನೆಲ್ಲಿನ ಆಹಾರ ಸೇವನೆ ಬೇಡ.

ಕರ್ಕಾಟಕ: ಮೇಧಾವಿ ಜನರೊಂದಿಗಿನ ಸಂಪರ್ಕ ಬೆಳೆಯುವುದರಿಂದ ಕೆಲಸ ಕಾರ್ಯ ಸಾಧಿಸಿಕೊಳ್ಳುವಿರಿ. ಕನಸು ಕೈಗೂಡುವ ದಿನ ಇದಾಗಿದೆ. ಸಮಸ್ಯೆ ಶೀಘ್ರವಾಗಿ ಬಗೆಹರಿಸಿಕೊಳ್ಳಲು ಬೇಕಾದ ಧಾರ್ಮಿಕ ಪ್ರಯತ್ನ ಮಾಡಿ.

ಸಿಂಹ: ಆಪ್ತಸ್ನೇಹಿತರ ಸಹಾಯದಿಂದ ಗೃಹ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸುವಿರಿ. ಮರಮಟ್ಟು, ಕೃಷಿ, ಹೈನುಗಾರಿಕೆ ಇತ್ಯಾದಿ ವೃತ್ತಿಗಳಲ್ಲಿರುವವರಿಗೆ ನಿರೀಕ್ಷಿತ ವರಮಾನ ದೊರೆಯಲಿದೆ.

ಕನ್ಯಾ: ಸರ್ಕಾರ ಅಥವಾ ಸಂಸ್ಥೆಗಳ ನಿಯಮಗಳಿಗೆ ಬೆಲೆ ಕೊಡುವುದನ್ನು ಕಲಿಯಿರಿ. ಅನಗತ್ಯ ಸಮಯ ವ್ಯರ್ಥ ಮಾಡದಿರಿ. ಮನೆ ಬದಲಾಯಿಸುವ ಯೋಚನೆ ಮಾಡಬೇಕಾಗಲಿದೆ. ಹಸಿರು ಬಣ್ಣ ಶುಭಕರವಾಗುವುದು.

ತುಲಾ: ಕೌಟುಂಬಿಕವಾಗಿ ಖರ್ಚುಗಳು ಅಧಿಕವೆನಿಸಿದರೂ ಆರ್ಥಿಕ ಆದಾಯ ಉತ್ತಮವಾಗಿರುವುದು. ರಸಗೊಬ್ಬರದ ವ್ಯಾಪಾರ ಮಾಡುವವರಿಗೆ ಹೆಚ್ಚಿನ ಲಾಭ. ಮನೆಯ ಜವಾಬ್ದಾರಿಗಳನ್ನು ಮಗನಿಗೆ ಕೊಡುವ ಬಗ್ಗೆ ಯೋಚಿಸಿ.

ವೃಶ್ಚಿಕ: ಬರಬೇಕಾಗಿದ್ದ ಹಣಕ್ಕೆ ತುಸು ಅಡಚಣೆಗಳನ್ನು ನಿವಾರಿಸಿಕೊಳ್ಳಬೇಕಾಗುವುದು. ನಿವೃತ್ತಿ ಜೀವನದ ನಂತರದ ಕೆಲಸ ಬಗ್ಗೆ ಯೋಜನೆ ರೂಪಿಸಿಕೊಳ್ಳುವಿರಿ. ಸಾಧು ಸಂತರ ಅಥವಾ ಪೀಠಾಧಿಪತಿ ದರ್ಶನ ಆಕಸ್ಮಿಕ ಸಿಗಲಿದೆ.

ಧನು: ಹಣಕಾಸು ಸಂಸ್ಥೆಗೆ ಪಾಲುದಾರರಾಗಿ ಸೇರಿಕೊಳ್ಳುವ ಯೋಚನೆಯಲ್ಲಿರುವವರಿಗೆ ವ್ಯವಹಾರದ ಉದ್ದಗಲ ತಿಳಿಯುವುದು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹಾಗೂ ತಂದೆ-ತಾಯಿಯ ಆರೋಗ್ಯದ ಬಗ್ಗೆ ಗಮನವಹಿಸುವುದು ಅಗತ್ಯ.

ಮಕರ: ಕೆಲಸ ಸಾಧಿಸಲು ಹೊಸ ಮಾರ್ಗವನ್ನು ಅರಿಸಿಕೊಳ್ಳಬೇಕಾಗುವುದು. ಸುತ್ತಲಿನ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ. ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು ದೊರಕುವುದು.

ಕುಂಭ: ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣಿತಿ ಪಡೆದುಕೊಳ್ಳಬಹುದು. ಪ್ರಾಧ್ಯಾಪಕರಿಗೆ ಮತ್ತು ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಶುಭದಿನ. ವಿದೇಶ ವ್ಯವಹಾರಗಳಿಂದ ಆದಾಯ ಕೈಗೂಡಲಿದೆ. ಆರ್ಥಿಕವಾಗಿ ಸಂತೃಪ್ತಿ ಇರುವುದು.

ಮೀನ: ಮನೋಬಲದ ಜೊತೆ ಆರ್ಥಿಕ ಬಲ ದೃಢವಾಗಿಸಿಕೊಂಡರೆ ಕಾರ್ಯ ಸಾಧಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಮಹಿಳೆಯರಿಗೆ ಉದ್ಯೋಗದಲ್ಲಿ ಲಾಭ. ಗೃಹ ನಿರ್ಮಾಣದ ಸಾಮಗ್ರಿಗಳ ಮಾರಾಟಗಾರರಿಗೆ ಅನುಕೂಲವಾಗಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ತ್ಯಜಿಸಿ ಭುಜಿಸು

ತ್ಯಜಿಸಿ ಭುಜಿಸಲ್ಕಲಿತವನೆ ಜಗಕೆ ಯಜಮಾನ |
ನಿಜಕುಕ್ಷಿ ಚಿಂತೆಯೇ ಮೊದಲು ಮನೆತಾಯ್ಗೆ? ||
ಭುಜಿಪ ಪತಿಸುತರೊಪ್ಪು ತುಪ್ಪವವಳೂಟಕ್ಕೆ |
ಭಜಿಸು ನೀನಾ ವ್ರತವ – ಮಂಕುತಿಮ್ಮ || 908 ||

ಪದ-ಅರ್ಥ: ಭುಜಿಸಲ್ಕಲಿತವನೆ = ಭುಜಿಸಲು(ಊಟಮಾಡಲು, ಅನುಭೋಗಿಸಲು) + ಕಲಿತವನೆ, ನಿಜಕುಕ್ಷಿ = ತನ್ನ ಹೊಟ್ಟೆ, ಮನೆತಾಯ್ಗೆ = ಮನೆ + -ತಾಯಿಗೆ, ಪತಿಸುತರೊಪ್ಪು = ಪತಿ + ಸುತರ + ಒಪ್ಪು(ತೃಪ್ತಿ), ತುಪ್ಪವವಳೂಟಕ್ಕೆ = ತುಪ್ಪ + ಅವಳ + ಊಟಕ್ಕೆ, ಭಜಿಸು = ಧ್ಯಾನಿಸು, ಸೇವಿಸು, ನೀನಾ = ನೀನು + ಆ

ವಾಚ್ಯಾರ್ಥ: ಪರರಿಗೆ ನೀಡಿ ನಂತರ ತಾನು ಊಟಮಾಡುವವನೇ ಜಗತ್ತಿಗೆ ಯಜಮಾನ. ಮನೆಯಲ್ಲಿ ತಾಯಿ ತನ್ನ ಹೊಟ್ಟೆಯ ಬಗ್ಗೆ ಯೋಚಿಸುತ್ತಾಳೆಯೇ? ತನ್ನ ಗಂಡ ಮತ್ತು ಮಕ್ಕಳು ಉಂಡು ಸಂತೋಷಿಸಿದರೆ ಅದೇ ಅವಳಿಗೆ ತುಪ್ಪ, ತೃಪ್ತಿ. ಆ ವ್ರತವನ್ನು ನೀನೂ ಅನುಸರಿಸು.

ವಿವರಣೆ: ಈಶಾವಾಸ್ಯೋಪನಿಷತ್ತು ಗಾತ್ರದಲ್ಲಿ ಚಿಕ್ಕದಾಗಿ ಕೇವಲ ಹದಿನೆಂಟು ಮಂತ್ರಗಳಿರುವಂಥದ್ದು. ಆದರೆ ಅರ್ಥದಲ್ಲಿ ಮಹತ್ತಾದದ್ದು. ಅದರ ಮೊದಲನೇ ಮಂತ್ರದ ಎರಡನೆಯ ಸಾಲೇ ಈ ಕಗ್ಗದ ಮೂಲವಸ್ತು. ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ | ತೇನ ತ್ಯಕ್ತೇನ ಭುಂಜೀಥಾ: ಮಾಗೃಧ: ಕಸ್ಯಸ್ವಿದ್ಧನಂ || “ಜಗತ್ತಿನಲ್ಲಿ ಏನೆಲ್ಲ ಇದೆಯೋ ಅದೆಲ್ಲ ಈಶನದೇ. ಇದು ಅವನ ಆವಾಸ. ಅದ್ದರಿಂದ ಮತ್ತೊಬ್ಬರಿಗೆ ನೀಡಿ, ನೀನೂ ಅನುಭವಿಸು. ಮತ್ತೊಬ್ಬರ ಸೊತ್ತನ್ನು ಅಪಹರಿಸಬೇಡ”.

ಇಡೀ ಲೋಕವೇ ಪರಮಾತ್ಮನದು, ಅದರ ಎಲ್ಲದರಲ್ಲಿ ಅವನ ಆವಾಸವಿದೆ ಎಂದಾಗ ‘ನನ್ನದು’ ಎನ್ನುವುದು ಯಾವುದು? ನನ್ನದು ಎಂದು ನಾನು ಅಹಂಕಾರ ಪಡುವುದೆಲ್ಲವೂ ಅವನದೇ ಕಾಣಿಕೆ, ಅವನದೇ ವಸ್ತು. ‘ನನ್ನತ್ವ’ವನ್ನು ಮೀರುವುದೇ ಆನಂದದ ದಾರಿ. ಕಗ್ಗ, ಜಗಕ್ಕೆ ಯಜಮಾನ ಯಾರು ಎಂಬುದನ್ನು ಹೇಳುತ್ತದೆ. ಯಾರು ನೀಡುತ್ತಾರೋ ಅವರು ಯಜಮಾನರು. ಕೈ ಚಾಚಿ ಬೇಡುವವರು ಸೇವಕರು. ಉಪನಿಷತ್ತಿನ ಮಾತಿನಂತೆ ಮೊದಲು ಮತ್ತೊಬ್ಬರಿಗೆ ನೀಡಿ ನಂತರ ತಾನು ಅನುಭವಿಸಬೇಕು. ನೀಡುವವನು ‘ಸ್ವಾಮ್ಯತ್ವ’ವನ್ನು ತ್ಯಜಿಸಿ ‘ವಿಶ್ವಸ್ಥ’ ನಾಗುತ್ತಾನೆ. ಆಗ ಅವನು ಎಲ್ಲದಕ್ಕೂ ಒಡೆಯನಾಗುತ್ತಾನೆ. ಹೀಗೆ ಪ್ರಪಂಚಕ್ಕೆ, ಪಡೆದುಕೊಂಡದ್ದಕ್ಕಿಂತ ಹೆಚ್ಚಾಗಿ ನೀಡಿದವರು ನಾಯಕರಾಗಿದ್ದಾರೆ, ದೇವರಾಗಿದ್ದಾರೆ. ರಾಮ, ಕೃಷ್ಣ, ಬುದ್ಧ, ಮಹಾವೀರ, ಬಸವಣ್ಣ, ಗಾಂಧೀ ಇವರನ್ನೆಲ್ಲ ನಾವು ನೆನಪಿಟ್ಟು ಗೌರವಿಸುವುದು ಅವರು ಪ್ರಪಂಚಕ್ಕೆ ನೀಡಿದ ಕಾಣಿಕೆಗಳಿಂದ, ಅವರು ಜಗತ್ತಿನಿಂದ ಪಡೆದುಕೊಂಡದ್ದಕ್ಕಲ್ಲ. ಹಾಗೆ ನೀಡಿದ್ದಕ್ಕೇ ಅವರು ಒಡೆಯರಾದರು. ಕಗ್ಗ ಒಂದು ಸುಂದರ ಉದಾಹರಣೆಯನ್ನು ಕಣ್ಣ ಮುಂದೆ ತರುತ್ತದೆ. ಮನೆಯಲ್ಲಿ ತಾಯಿ ಕಷ್ಟಪಟ್ಟು ಅಡಿಗೆ ಮಾಡಿ ಪತಿ ಮತ್ತು ಮಕ್ಕಳಿಗೆ ಬಡಿಸುವಾಗ ತನ್ನ ಹಸಿವನ್ನು ಕುರಿತು ಚಿಂತಿಸುವುದೇ ಇಲ್ಲ. ಅವರು ಇಷ್ಟಪಟ್ಟು ಊಟಮಾಡಿ ತೃಪ್ತರಾದರೆ, ಆಕೆಗೆ ತೃಪ್ತಿ. ತನಗೆ ಎಷ್ಟು ಉಳಿದೀತು ಅಥವಾ ಉಳಿಸಿಕೊಳ್ಳಬೇಕು ಎಂಬ ಚಿಂತೆಯನ್ನೇ ಮಾಡುವುದಿಲ್ಲ. ಇದೇ ‘ತೇನ ತ್ಯಕ್ತೇನ ಭುಂಜೀಥಾ:’ ಪರರಿಗೆ ನೀಡಿ ಸಂತೋಷಪಡುವುದು. ಹೀಗೆ ನೀಡಿ ಸಂತೋಷಪಡುವ ವೃತ್ತಿಯನ್ನು ಮನಸಿಟ್ಟು ಅನುಸರಿಸು ಎನ್ನುತ್ತದೆ ಕಗ್ಗ.

ಪದಬಂಧ 5354

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
4.ಗಟ್ಟಿಯಾದ ಕೂಗು (3)
5.ಈಕೆ ದುಷ್ಟಸ್ವಭಾವದ ಹೆಂಗಸು (3)
6.ಕಾರು ಓಡಿಸಿದವ ಹಬ್ಬಿಸಿರುವ ಗಾಳಿಸುದ್ದಿ! (3)
7.ನೀರಾಗಿ ಕಲಸಿದ ಮಣ್ಣು (3)
9.ಮಂಕ ಹೊತ್ತಿರುವ ಬುಟ್ಟಿ (3)
10.ನಿಂಬೆ ಹಣ್ಣಿನ ಷರಬತ್ತು (3)
13.ಸೀರೆಯ ಹೊದೆಯುವ ಭಾಗ (3)
15.ತಿರುಗಿಸಿ ನೋಡಿದರೂ ಸುವರ್ಣವೇ (3)
16.ಬಹು ಹೆಚ್ಚಿನ ಅವಶ್ಯಕತೆ (3)
17.ಕೋಟೆಯ ಸುತ್ತಣ ಮೇಲು ಗೋಡೆ (3)
18.ಸಾಯುವ ಸಮಯವಿದು (5)

ಮೇಲಿಂದ ಕೆಳಕ್ಕೆ
1.ಸ್ಥಾನವನ್ನು ಕಳೆದುಕೊಂಡವನು (4)
2.ವಿದ್ಯಾರ್ಥಿಗಳಿಗೆ ಓದಲು ಗೊತ್ತುಪಡಿಸಿದ ಪುಸ್ತಕ (5)
3.ಗುರುಗುಟ್ಟುತ್ತಿರುವ ಗಂಡುಕುರಿ (3)
4.ಸಂಪಾದನೆಯನ್ನು ಹೀಗೆ ನ್ನಿ (3)
8.ಸಭೆಯಲ್ಲಿ ಕುಳಿತಿರುವವನು (3)
9.ಜನ ಹೊಕ್ಕಿರುವ ಗುಡಿ (3)
11.ಹಳೆಯದನ್ನು ಹೊಸದು ಮಾಡುವಿಕೆ (5)
12.ಅವನತಿಯ ಸಮಯ (4)
14.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
15.ಉಲ್ಟಾ ಪಲ್ಟಾ ಆಗಿರುವ ದಯೆ (3)



5353ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸೆರೆವಾಸ 3.ಗುಪ್ತಲಿಪಿ
4.ಮೀಸಲು 5.ಅಪರೂಪ
7.ನಜರು 9.ಶವ
10.ನಾರು 11.ಬಿತ್ತನೆ
13.ಮರಕತ 14.ನವೀನ
15.ನರುಗಂಪು 16.ವಿಜಗೀಷು

ಮೇಲಿಂದ ಕೆಳಕ್ಕೆ:
2.ಸಮೀಪ 3.ಗುಲುನ
6.ಪರಾವಲಂಬಿ 8.ರುದ್ರನಾಟಕ
12.ನೆನಪು 13.ಮನವಿ

ಸುಡೊಕು 5740

	6			9				8
1			8			5		2
		2		6				
		7			9	6		
4	2			3			5	9
6			7		8			
2		5	4		7	9		6
								5
9		6	3		5		4	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5739 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

₹2 ಸಾವಿರದ ನೋಟು ವಿಲೇವಾರಿಗೆ ತರಾತುರಿ

ಅಡಿಕೆ ಧಾರಣೆ ಕೃತಕ ಏರಿಕೆ

ಪ್ರಜಾವಾಣಿ ವಾರ್ತೆ

ಶಿರಸಿ: 'ಮಾರುಕಟ್ಟೆಯಲ್ಲಿ ಇರುವ ದರಕ್ಕಿಂತ ಹೆಚ್ಚಿನ ದರ ನಿಮ್ಮ ಅಡಿಕೆಗೆ ಕೊಡ್ತೇವೆ. ಆದರೆ ₹2 ಸಾವಿರದ ನೋಟು ತಗೋಬೇಕು...'

ಇದು ಸದ್ಯಕ್ಕೆ ಏರುಹಾದಿಯಲ್ಲಿ ಇರುವ ಅಡಿಕೆ ಮಾರುಕಟ್ಟೆಯಲ್ಲಿ ಬೆಳೆಗಾರರ ಎದುರು ವರ್ತಕರು ಹಾಗೂ ಮಧ್ಯವರ್ತಿಗಳು ಇಡುತ್ತಿರುವ ಬೇಡಿಕೆ!

ವರ್ಷದ ನಂತರ ಚಾಲಿ ಅಡಿಕೆ ಹಾಗೂ ರಾಶಿ ಅಡಿಕೆ ದರ ಏರಿಕೆ ಕಾಣುತ್ತಿದೆ. ತಿಂಗಳೀಚೆಗೆ ಕ್ವಿಂಟಲ್ ಅಡಿಕೆಗೆ ₹2 ಸಾವಿರದಿಂದ ₹3 ಸಾವಿರದಷ್ಟು ದರ ಏರಿಕೆಯಾಗಿದೆ. ಏಪ್ರಿಲ್–ಮೇ ತಿಂಗಳಿನಲ್ಲಿ ರಾಶಿ ದರ ಕ್ವಿಂಟಲ್‌ಗೆ ಗರಿಷ್ಠ ₹45–₹47 ಸಾವಿರ ಆಸುಪಾಸು ಇತ್ತು. ಆದರೆ ಈಗ ರಾಶಿ ಅಡಿಕೆ ದರ ಕ್ವಿಂಟಲ್‌ಗೆ ₹50 ಸಾವಿರ ದಾಟಿದೆ.



ಶಿರಸಿ ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಬಂದ ಅಡಿಕೆ

ಚಾಲಿ ದರದಲ್ಲಿಯೂ ಏರಿಕೆಯಾಗಿದ್ದು, ಏಪ್ರಿಲ್, ಮೇ ತಿಂಗಳಿನಲ್ಲಿ ₹35–₹37 ಸಾವಿರ ಇದ್ದ ದರವು ಈಗ ಎಪಿಎಂಸಿಯಲ್ಲಿ ಕ್ವಿಂಟಲ್‌ಗೆ ₹40 ಸಾವಿರದ ಗಡಿ ದಾಟಿದೆ. ಕೆಲವು ವರ್ತಕರ ವಲಯದಲ್ಲಿ ಈ ದರ ಇನ್ನಷ್ಟು ಹೆಚ್ಚಿದೆ.

₹2 ಸಾವಿರ ಮುಖಬೆಲೆಯ ನೋಟುಗಳನ್ನು ಬ್ಯಾಂಕ್‌ಗಳಿಗೆ ಮರಳಿಸಲು ಅಥವಾ ವಿನಿಮಯ ಮಾಡಿಕೊಳ್ಳಲು ಸರ್ಕಾರ ಗಡುವು ನೀಡಿರುವುದೇ ಇದಕ್ಕೆ ಕಾರಣ ಎಂಬ ಮಾತು ಈ ಭಾಗದಲ್ಲಿ ಚಾಲ್ತಿಯಲ್ಲಿದೆ.

> ಅಡಿಕೆ ಖರೀದಿಸಲು ಕೆಲವು ವರ್ತಕರು ₹2 ಸಾವಿರದ ನೋಟುಗಳನ್ನೇ ಕೊಡುತ್ತಿದ್ದಾರೆ. ಹಾಗಾಗಿ ಈಗಿನ ಅಡಿಕೆ ದರ ಏರಿಕೆ ತಾತ್ಕಾಲಿಕ
>
> **ರವೀಶ ಹೆಗಡೆ,** ಪ್ರಧಾನ ವ್ಯವಸ್ಥಾಪಕ, ಟಿಎಸ್‌ಎಸ್ ಸಂಸ್ಥೆ

ಶಿರಸಿ ಮಾರುಕಟ್ಟೆಗೆ ಬರುವ ಅಡಿಕೆಯಲ್ಲಿ ಶೇ 40ರಷ್ಟನ್ನು ಸಹಕಾರ ಸಂಘಗಳು ಖರೀದಿಸುತ್ತವೆ. ಇನ್ನುಳಿದ ಪಾಲನ್ನು ಇತರ ವರ್ತಕರು ಖರೀದಿಸುತ್ತಿದ್ದಾರೆ.

'₹2 ಸಾವಿರ ಮುಖಬೆಲೆಯ ನೋಟನ್ನು ತಮ್ಮಿಂದ ಖಾಲಿ ಮಾಡಿಕೊಳ್ಳಲು ವರ್ತಕರು 'ಹೆಚ್ಚಿನ ದರ'ದ ತಂತ್ರ ಅನುಸರಿಸುತ್ತಿದ್ದಾರೆ. ₹2 ಸಾವಿರದ ನೋಟು ಪಡೆಯುವುದಾದರೆ ಅಡಿಕೆಗೆ ಮಾರುಕಟ್ಟೆ ದರಕ್ಕಿಂತ ₹500ರಿಂದ ₹1 ಸಾವಿರದವರೆಗೆ ಹೆಚ್ಚು ನೀಡುವುದಾಗಿ ಹೇಳುತ್ತಿದ್ದಾರೆ' ಎಂಬುದು ಮಾರುಕಟ್ಟೆ ತಜ್ಞರ ಹೇಳಿಕೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಸವಿನೆನಪು



ಆರ್. ಸುಬ್ಬರಾಜು

ನಿಧನ: 19-06-2005

ನೀವು ನಮ್ಮನ್ನಗಲಿ ಇಂದಿಗೆ ಹದಿನೆಂಟು ವರ್ಷಗಳು ನಿಮ್ಮ ನೆನಪು ಸದಾ ಹಸಿರು. ನಿಮ್ಮ ತಾಳ್ಮೆ, ತ್ಯಾಗ, ಪ್ರೀತಿ, ಆದರ್ಶಮಯ ಜೀವನ ನಮಗೆ ದಾರಿದೀಪ... ಪ್ರತಿ ದಿನವೂ ಪ್ರತಿ ಕ್ಷಣವೂ ಹೆಮ್ಮೆಯಿಂದ ಸ್ಮರಿಸುವ..

ಮಗ ಬಿ.ಎಸ್. ಕೃಷ್ಣ ಮತ್ತು ಕುಟುಂಬವರ್ಗ

ಸಿಬ್ಬಂದಿ ವರ್ಗ, ಬನಶಂಕರಿ ಗ್ಲಾಸ್ ಅಂಡ್ ಪ್ಲೈವುಡ್ಸ್

ಪರಿಸರ ಸ್ನೇಹಿ ಇಂಧನ: ರಿಲಯನ್ಸ್‌ಗೆ ₹1.22 ಲಕ್ಷ ಕೋಟಿ ವರಮಾನ ನಿರೀಕ್ಷೆ

ನವದೆಹಲಿ (ಪಿಟಿಐ): ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ತನ್ನ ಪರಿಸರ ಸ್ನೇಹಿ ಇಂಧನ ವಹಿವಾಟುಗಳಿಂದ 2030ರ ವೇಳೆಗೆ ₹1.22 ಲಕ್ಷ ಕೋಟಿ ವರಮಾನ ಗಳಿಸುವ ಸಾಧ್ಯತೆ ಇದೆ ಎಂದು ಬ್ರೋಕಿಂಗ್ ಕಂಪನಿ ಸ್ಯಾನ್‌ಫೋರ್ಡ್ ಸಿ. ಬರ್ನ್‌ಸ್ಟೈನ್ ವರದಿ ಹೇಳಿದೆ.

2050ರ ವೇಳೆಗೆ ₹164 ಲಕ್ಷ ಕೋಟಿ ಬಂಡವಾಳ ಹೂಡಿಕೆಯೊಂದಿಗೆ ಶುದ್ಧ ಇಂಧನವು (ಸೌರ ವಿದ್ಯುತ್, ಬ್ಯಾಟರಿ, ಫ್ಯೂಯೆಲ್ ಸೆಲ್) ರಿಲಯನ್ಸ್ ಕಂಪನಿಯ ಬೆಳವಣಿಗೆಗೆ ಹೊಸ ವಹಿವಾಟುಗಳಾಗಿವೆ. ಭಾರತವು 2030ರ ವೇಳೆಗೆ 280 ಗಿಗಾವಾಟ್ ಸಾಮರ್ಥ್ಯ ಸೌರ ವಿದ್ಯುತ್ ಉತ್ಪಾದಿಸುವ ಗುರಿ ಇಟ್ಟುಕೊಂಡಿದೆ.

2030ರ ವೇಳೆಗೆ ರಿಲಯನ್ಸ್ ಕಂಪನಿಯು ಸೌರ ವಿದ್ಯುತ್ ಕ್ಷೇತ್ರದಲ್ಲಿ ಶೇ 60ರಷ್ಟು, ಬ್ಯಾಟರಿ ತಯಾರಿಕೆಯಲ್ಲಿ ಶೇ 30ರಷ್ಟು ಮತ್ತು ಹೈಡ್ರೋಜನ್ ಕ್ಷೇತ್ರದಲ್ಲಿ ಶೇ 20ರಷ್ಟು ಮಾರುಕಟ್ಟೆ ಪಾಲು ಹೊಂದುವ ಅಂದಾಜು ಮಾಡಲಾಗಿದೆ ಎಂದು ಅದು ಹೇಳಿದೆ.

ಕಂಪನಿಯು 2035ರ ವೇಳೆಗೆ ಇಂಗಾಲದ ಹೊರಸೂಸುವಿಕೆಯನ್ನು ಶೂನ್ಯ ಮಟ್ಟಕ್ಕೆ ತರುವುದಾಗಿ ಹೇಳಿದೆ. ಈ ನಿಟ್ಟನಲ್ಲಿ ಗ್ರಾಹಕರಿಗೆ ನವೀಕರಿಸಬಹುದಾದ ಇಂಧನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು		
	100 ಮೊಟ್ಟೆಗೆ	₹590
	12 ಮೊಟ್ಟೆಗೆ	₹78
ಮೈಸೂರು	100 ಮೊಟ್ಟೆಗೆ	₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹302-472
ದ್ವಿತಳಿ (ಬಿ.ವಿ)	₹335-632

ಏನಿದು ಸಿಸ್ಟಮ್ಯಾಟಿಕ್ ವಿತ್‌ಡ್ರಾವಲ್?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಪ್ರತಿ ತಿಂಗಳು ನಿರ್ದಿಷ್ಟ ಆದಾಯ ಬೇಕು ಎನ್ನುವವರು ಸಾಮಾನ್ಯವಾಗಿ ನಿಶ್ಚಿತ ಠೇವಣಿ (ಎಫ್.ಡಿ) ಅಥವಾ ಅಂಚೆ ಕಚೇರಿ ಠೇವಣಿ (ಪೋಸ್ಟಲ್ ಡೆಪಾಸಿಟ್) ಮೊರೆ ಹೋಗುತ್ತಾರೆ. ಆದರೆ ಬ್ಯಾಂಕುಗಳಲ್ಲಿ ಬಡ್ಡಿ ದರ ಇಳಿಕೆ, ನಿರಂತರ ಹಣದುಬ್ಬರದ ಕಾರಣದಿಂದ ನಿಶ್ಚಿತ ಠೇವಣಿಗಳಂತಹ ಹೂಡಿಕೆಗಳಲ್ಲಿ ಹೆಚ್ಚು ಲಾಭ ಎಲ್ಲ ಕಾಲಕ್ಕೂ ಸಿಗುವುದಿಲ್ಲ.

ಹೆಚ್ಚು ಲಾಭವೂ ಬೇಕು, ನಿಗದಿತ ಸಮಯಕ್ಕೆ ನಿಶ್ಚಿತ ಆದಾಯವೂ ಬೇಕು ಎನ್ನುವವರು ಮ್ಯೂಚುವಲ್ ಫಂಡ್ ಕಂಪನಿಗಳು ಒದಗಿಸುವ ಎಸ್‌ಡಬ್ಲ್ಯುಪಿ ಯೋಜನೆಯ ಮೊರೆ ಹೋಗಬಹುದು. ಎಸ್‌ಡಬ್ಲ್ಯುಪಿ ಎಂದರೆ ಸಿಸ್ಟಮ್ಯಾಟಿಕ್ ವಿತ್‌ಡ್ರಾವಲ್ ಪ್ಲಾನ್ (ಹೂಡಿಕೆ ಮಾಡಿದ ಹಣವನ್ನು ವ್ಯವಸ್ಥಿತವಾಗಿ ಹಿಂದಕ್ಕೆ ಪಡೆಯುವ ಯೋಜನೆ). ಇದರ ಲಾಭ ಪಡೆಯುವುದು ಹೇಗೆ ಎಂಬ ಬಗ್ಗೆ ಪರಿಶೀಲಿಸೋಣ.

ಎಸ್‌ಡಬ್ಲ್ಯುಪಿ ಎಂದರೇನು?: ನೀವು ಮ್ಯೂಚುವಲ್ ಫಂಡ್ ಹೂಡಿಕೆದಾರ ಆಗಿದ್ದರೆ ಎಸ್‌ಐಪಿ ಬಗ್ಗೆ ಗೊತ್ತೇ ಇರುತ್ತದೆ. ಮ್ಯೂಚುವಲ್ ಫಂಡ್ ಪರಿಭಾಷೆಯಲ್ಲಿ ಎಸ್‌ಐಪಿ ಅಂದರೆ ಸಿಸ್ಟಮ್ಯಾಟಿಕ್ ಇನ್ವೆಸ್ಟ್‌ಮೆಂಟ್ ಪ್ಲಾನ್. ಇದು ಮ್ಯೂಚುವಲ್ ಫಂಡ್‌ಗಳಲ್ಲಿ ವ್ಯವಸ್ಥಿತವಾಗಿ ಹೂಡಿಕೆ ಮಾಡಲು ಇರುವ ಸೌಲಭ್ಯ. ಮ್ಯೂಚುವಲ್ ಫಂಡ್ ಹೂಡಿಕೆಗೆ ಎಸ್‌ಐಪಿ ಹೇಗೆ ಲಭ್ಯವಿದೆಯೋ, ಹೂಡಿಕೆ ಮೊತ್ತ ಹಾಗೂ ಅದರ ಮೇಲಿನ ಲಾಭವನ್ನು ವ್ಯವಸ್ಥಿತವಾಗಿ ಹಿಂಪಡೆಯಲು ಸಿಸ್ಟಮ್ಯಾಟಿಕ್ ವಿತ್‌ಡ್ರಾವಲ್ ಪ್ಲಾನ್ (ಎಸ್‌ಡಬ್ಲ್ಯುಪಿ) ಇದೆ. ಹೂಡಿಕೆ ಮಾಡಿರುವ ಮೊತ್ತವನ್ನು ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ, ಆರು ತಿಂಗಳಿಗೊಮ್ಮೆ ಅಥವಾ ವರ್ಷಕ್ಕೊಮ್ಮೆ... ನಿಮ್ಮ ಅನುಕೂಲಕ್ಕೆ ತಕ್ಕಂತೆ ಮ್ಯೂಚುವಲ್ ಫಂಡ್‌ನಿಂದ ನಿರ್ದಿಷ್ಟ ಮೊತ್ತವನ್ನು ನಿಯಮಿತವಾಗಿ ಹೊರತೆಗೆಯುವ ವ್ಯವಸ್ಥೆಯೇ ಎಸ್‌ಡಬ್ಲ್ಯುಪಿ.

ಎಸ್‌ಡಬ್ಲ್ಯುಪಿ ಹೇಗೆ ಕೆಲಸ ಮಾಡುತ್ತದೆ?: ಉದಾಹರಣೆಗೆ, ನಿಮ್ಮ ಮ್ಯೂಚುವಲ್ ಫಂಡ್ ಒಂದರಲ್ಲಿ ₹5 ಲಕ್ಷ ಇದೆ ಎಂದು ಭಾವಿಸೋಣ. ಪ್ರತಿ ತಿಂಗಳು ಅದರಿಂದ ₹20 ಸಾವಿರ ಮೊತ್ತ ವಾಪಸ್ ಪಡೆಯಲು ತೀರ್ಮಾನಿಸುತ್ತೀರಿ ಎಂದು ಭಾವಿಸೋಣ. ಹೀಗೆ ನಿರ್ಧರಿಸಿದ ಬಳಿಕ ಮ್ಯೂಚುವಲ್ ಫಂಡ್ ಕಂಪನಿಗೆ ಸೂಚನೆಯೊಂದನ್ನು ಕೊಡುತ್ತೀರಿ. ಸೂಚನೆ ಕೊಟ್ಟ ಬಳಿಕ ಪ್ರತಿ ತಿಂಗಳು, ಆ ಫಂಡ್‌ನಿಂದ ₹20 ಸಾವಿರ ನಿಮ್ಮ ಬ್ಯಾಂಕ್ ಖಾತೆಗೆ ಜಮಾ ಆಗುತ್ತದೆ. ಹೀಗೆ ಒಟ್ಟು ₹5 ಲಕ್ಷ ಹಂತಹಂತವಾಗಿ ಮುಂದಿನ 24 ತಿಂಗಳ ಕಾಲ ನಿಮ್ಮ ಖಾತೆಗೆ ಸಂದಾಯವಾಗುತ್ತದೆ.

ಎರಡು ಮಾದರಿಗಳು: ಎಸ್‌ಡಬ್ಲ್ಯುಪಿ ಆಯ್ಕೆ ಮಾಡಿಕೊಳ್ಳುವಾಗ ಸಾಮಾನ್ಯವಾಗಿ ಎರಡು ಆಯ್ಕೆಗಳು ಸಿಗುತ್ತವೆ. ಒಂದನೆಯದು, ಹೂಡಿಕೆ ಮೇಲೆ ಬಂದ ಲಾಭವನ್ನು ಮಾತ್ರ ನಿಯಮಿತವಾಗಿ ಹಿಂಪಡೆದುಕೊಳ್ಳುವುದು. ಮತ್ತೊಂದು, ಹೂಡಿಕೆ ಮತ್ತು ಲಾಭಾಂಶವನ್ನು ಅನುಕೂಲಕ್ಕೆ ತಕ್ಕಂತೆ ನಿಗದಿತ ಸಮಯಕ್ಕೆ ನಗದೀಕರಣ ಮಾಡಿಕೊಳ್ಳುವುದು. ಈ ಎರಡರ ಪೈಕಿ ನಿಮಗೆ ಯಾವುದು ಅನುಕೂಲವೋ ಅದರ ಮೊರೆ ಹೋಗಬಹುದು.

ಎಸ್‌ಡಬ್ಲ್ಯುಪಿಯಿಂದ ಹಲವು ಅನುಕೂಲ: ಷೇರು ಮಾರುಕಟ್ಟೆ ನಕಾರಾತ್ಮಕ ಹಾದಿಯಲ್ಲಿದ್ದಾಗ ನಿಮ್ಮ ಹೂಡಿಕೆ ಮೊತ್ತವನ್ನು ಒಂದೇ ಬಾರಿಗೆ ಹಿಂಪಡೆದರೆ ನಷ್ಟ ಉಂಟಾಗುವ ಸಾಧ್ಯತೆ ಹೆಚ್ಚು. ಇಂತಹ ಸಂದರ್ಭದಲ್ಲಿ ಎಸ್‌ಡಬ್ಲ್ಯುಪಿ ಮೊರೆ ಹೋದರೆ ಆಗುವ ನಷ್ಟವನ್ನು ತಪ್ಪಿಸಬಹುದು. ನಿಗದಿತ ಮೊತ್ತವನ್ನು ಹಂತಹಂತವಾಗಿ ಪಡೆಯುವುದರಿಂದ, ನಷ್ಟ ಉಂಟಾಗುವ ಸಾಧ್ಯತೆ ಕಡಿಮೆ ಇರುತ್ತದೆ. ಪ್ರತಿ ತಿಂಗಳು ಆದಾಯ ಪಡೆಯಲು ಸಾಧ್ಯವಿರುವುದರಿಂದ ನಿವೃತ್ತಿ ಜೀವನ ನಡೆಸುತ್ತಿರುವವರಿಗೆ ಎಸ್‌ಡಬ್ಲ್ಯುಪಿ ಯೋಜನೆ ಹೆಚ್ಚು ಸೂಕ್ತವಾಗುತ್ತದೆ.

ಮ್ಯೂಚುವಲ್ ಫಂಡ್ ಎಸ್‌ಡಬ್ಲ್ಯುಪಿ ಬಳಸಿಕೊಂಡು ಪರ್ಯಾಯ ಆದಾಯ ಕಂಡುಕೊಳ್ಳಲು ಸಾಧ್ಯ. ಉದಾಹರಣೆಗೆ, ನಿಮ್ಮ ಬಳಿ ₹10 ಲಕ್ಷ ಇದ್ದು ಅದನ್ನು ಹೂಡಿಕೆ ಮಾಡುವ ಮೂಲಕ ಪ್ರತಿ ತಿಂಗಳು ಕೆಲ ಅವಧಿಯವರೆಗೆ ನಿಗದಿತ ಆದಾಯ ಕಂಡುಕೊಳ್ಳಬಹುದು. ಹೀಗೆ ಮಾಡಿದಾಗ ಮಾಸಿಕ ಆದಾಯದ ಜೊತೆ ಹೆಚ್ಚುವರಿ ಆದಾಯಕ್ಕೆ ಒಂದು ಮೂಲ ದೊರಕಿದಂತಾಗುತ್ತದೆ.

ಎಸ್‌ಡಬ್ಲ್ಯುಪಿ ಒಂದು ಒಳ್ಳೆಯ ಸಾಧನ. ನೀವು ಹೂಡಿಕೆಗೆ ಹೊಸಬರಾಗಿರಲಿ ಅಥವಾ ಅನುಭವಿಯಾಗಿರಲಿ, ಹಣಕಾಸಿನ ಗುರಿಗಳನ್ನು ತಲುಪಲು ಎಸ್‌ಡಬ್ಲ್ಯುಪಿ ಒಂದು ಉತ್ತಮ ಮಾರ್ಗ. ಹಣಕಾಸು ಯೋಜನೆ ರೂಪಿಸುವಾಗ ಇದು ಗಮನದಲ್ಲಿರಲಿ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಉತ್ತಮ ಗಳಿಕೆ ಕಂಡ ಷೇರುಪೇಟೆ

ಎರಡು ವಾರಗಳಿಂದ ಬಹುತೇಕ ಯಥಾಸ್ಥಿತಿ ಕಾಯ್ದುಕೊಂಡಿದ್ದ ಷೇರುಪೇಟೆ ಸೂಚ್ಯಂಕಗಳು ಪುಟಿದೆದ್ದಿವೆ. ಜೂನ್ 16ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 63,384 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.21ರಷ್ಟು ಜಿಗಿದಿದೆ. 18,826 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.41ರಷ್ಟು ಹೆಚ್ಚಳವಾಗಿದೆ. ಜಾಗತಿಕ ವಿದ್ಯಮಾನಗಳು ಮತ್ತು ದೇಶಿ ಬೆಳವಣಿಗೆಗಳು ಪೂರಕವಾಗಿದ್ದ ಕಾರಣ ಮಾರುಕಟ್ಟೆ ಸೂಚ್ಯಂಕಗಳು ಜಿಗಿತ ದಾಖಲಿಸಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4ರಷ್ಟು ಗಳಿಸಿಕೊಂಡಿದೆ. ಆರೋಗ್ಯ ವಲಯ ಶೇ 3.6ರಷ್ಟು, ಬಿಎಸ್‌ಇ ಎಫ್‌ಎಂಸಿಜಿ ಶೇ 3.3ರಷ್ಟು ಮತ್ತು ಲೋಹ ಸೂಚ್ಯಂಕ ಶೇ 2.2ರಷ್ಟು ಹೆಚ್ಚಳ ಕಂಡಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹6,645.99 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹1,319.21 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅವೆನ್ಯೂ ಸೂಪರ್‌ಮಾರ್ಟ್ಸ್, ಪೇಟಿಎಂ, ಟಾಟಾ ಮೋಟರ್ಸ್ ಡಿವಿಆರ್, ಜೈಡಸ್ ಲೈಫ್ ಸೈನ್ಸಸ್ ಮತ್ತು ಐಸಿಐಸಿಐ ಪ್ರೂಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ ಗಳಿಸಿಕೊಂಡಿವೆ. ಮಿಡ್ ಕ್ಯಾಪ್‌ನಲ್ಲಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್, ಎಲ್ ಆ್ಯಂಡ್ ಟಿ ಫೈನಾನ್ಸ್ ಹೋಲ್ಡಿಂಗ್ಸ್, ಡೆಲಿವರಿ, ಒರಾಕಲ್ ಫೈನಾನ್ಶಿಯಲ್ ಸರ್ವಿಸಸ್, ರಾಜೇಶ್ ಎಕ್ಸ್‌ಪೋರ್ಟ್ಸ್, ಅಶೋಕ್ ಲೇಲೆಂಡ್, ಲಾರಸ್ ಲ್ಯಾಬ್ಸ್, ಗೋದ್ರೆಜ್ ಪ್ರಾಪರ್ಟೀಸ್, ದಾಲ್ಮಿಯಾ ಭಾರತ್, ಮಹೀಂದ್ರ ಆ್ಯಂಡ್ ಮಹೀಂದ್ರ ಫೈನಾನ್ಶಿಯಲ್ ಸರ್ವಿಸಸ್, ಗೋದ್ರೆಜ್ ಇಂಡಸ್ಟ್ರೀಸ್ ಮತ್ತು ದೀಪಕ್ ನೈಟ್ರೇಟ್ ಶೇ 7ರಿಂದ ಶೇ 14ರಷ್ಟು ಗಳಿಸಿಕೊಂಡಿವೆ. ಸ್ಮಾಲ್ ಕ್ಯಾಪ್‌ನಲ್ಲಿ ಜೈ ಭಾರತ್ ಮಾರುತಿ, ವಕಾರ್ಡ್, ಪಿಟಿಸಿ ಇಂಡಸ್ಟ್ರೀಸ್, ಟ್ರೂ ಕ್ಯಾಪ್ ಫೈನಾನ್ಸ್, ಗೋದಾವರಿ ಪವರ್ ಶೇ 20ರವರೆಗೆ ಗಳಿಸಿಕೊಂಡಿವೆ.

ಮುನ್ನೋಟ: ಷೇರು ಮಾರುಕಟ್ಟೆಯಲ್ಲಿ ಸದ್ಯ ತ್ವರಿತ ಮತ್ತು ಹರಿತ ಏರಿಳಿತ ಕಂಡುಬರುತ್ತಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬರುತ್ತಿರುವ ಸಕಾರಾತ್ಮಕತೆಯು ದೇಶಿ ಮಾರುಕಟ್ಟೆಗಳ ಮೇಲೂ ಪರಿಣಾಮ ಬೀರುತ್ತಿದೆ. ಜುಲೈನಿಂದ ಹಣಕಾಸು ವರ್ಷದ ಎರಡನೇ ತ್ರೈಮಾಸಿಕ ಅವಧಿ ಶುರುವಾಗಲಿದ್ದು ಹೂಡಿಕೆದಾರರು ಕಂಪನಿಗಳ ಬೆಳವಣಿಗೆ ಮುನ್ನೋಟ ಅರಿಯಲು ಕಾತರರಾಗಿದ್ದಾರೆ. ಉಳಿದಂತೆ, ಜಾಗತಿಕ ವಿದ್ಯಮಾನಗಳು ಮತ್ತು ದೇಶಿ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಎನ್‌ಪಿಎಸ್: ವ್ಯವಸ್ಥಿತವಾಗಿ ಹಣ ಹಿಂಪಡೆಯಲು ಅವಕಾಶ

ನವದೆಹಲಿ (ಪಿಟಿಐ): ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ರಾಷ್ಟ್ರೀಯ ಪಿಂಚಣಿ ಯೋಜನೆಯ (ಎನ್‌ಪಿಎಸ್) ಸದಸ್ಯರಿಗೆ ಹೂಡಿಕೆಯ ಹಣವನ್ನು ವ್ಯವಸ್ಥಿತವಾಗಿ ಹಿಂದಕ್ಕೆ ಪಡೆಯುವ (ಎಸ್‌ಡಬ್ಲ್ಯುಪಿ) ಸೌಲಭ್ಯವನ್ನು ಜಾರಿಗೊಳಿಸುವ ಆಲೋಚನೆ ಹೊಂದಿದೆ.

ಮುಖ್ಯಾಂಶಗಳು

- ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ಹಣ ಪಡೆಯಲು ಅವಕಾಶ
- ಮುಂದಿನ ತ್ರೈಮಾಸಿಕದ ಅಂತ್ಯಕ್ಕೂ ಮುನ್ನ ಜಾರಿ ನಿರೀಕ್ಷೆ

ಚಂದಾದಾರರಿಗೆ 60 ವರ್ಷ ತುಂಬಿದ ನಂತರ ಅವರು ತಮ್ಮ ಎನ್‌ಪಿಎಸ್ ಖಾತೆಯಲ್ಲಿ ಇರುವ ಹಣವನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಹಿಂದಕ್ಕೆ ಪಡೆಯುವ ಆಯ್ಕೆಯನ್ನು ಈ ಸೌಲಭ್ಯವು ನೀಡಲಿದೆ. 'ಮುಂದಿನ ತ್ರೈಮಾಸಿಕದ ಅಂತ್ಯಕ್ಕೂ ಮೊದಲು ನಮಗೆ ಇದನ್ನು ಜಾರಿಗೆ ತರಲು ಆಗಬಹುದು' ಎಂದು ಪಿಎಫ್‌ಆರ್‌ಡಿಎ ಅಧ್ಯಕ್ಷ ದೀಪಕ್ ಮೊಹಂತಿ ಹೇಳಿದ್ದಾರೆ.

ಈಗಿರುವ ನಿಯಮಗಳ ಅನ್ವಯ, ಎನ್‌ಪಿಎಸ್ ಚಂದಾದಾರರು ತಮಗೆ 60 ವರ್ಷ ಆದ ನಂತರದಲ್ಲಿ ಎನ್‌ಪಿಎಸ್ ಖಾತೆಯಲ್ಲಿನ ಶೇಕಡ 60ರಷ್ಟು ಮೊತ್ತವನ್ನು ಒಂದೇ ಬಾರಿಗೆ ಹಿಂಪಡೆಯಬಹುದು. ಇನ್ನುಳಿದ ಶೇ 40ರಷ್ಟು ಹಣವನ್ನು ಅವರು ಕಡ್ಡಾಯವಾಗಿ ಪಿಂಚಣಿ ಯೋಜನೆಯೊಂದರ ಖರೀದಿಗೆ ಬಳಸಬೇಕು.

ಆದರೆ, ಹೂಡಿಕೆ ಹಣವನ್ನು ವ್ಯವಸ್ಥಿತವಾಗಿ ಹಿಂದಕ್ಕೆ ಪಡೆಯುವ ಯೋಜನೆ (ಎಸ್‌ಡಬ್ಲ್ಯುಪಿ) ಜಾರಿಗೆ ಬಂದಲ್ಲಿ ಚಂದಾದಾರರಿಗೆ ತಮ್ಮ ಹಣವನ್ನು ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ಅಥವಾ ವರ್ಷಕ್ಕೊಮ್ಮೆ ಹಿಂದಕ್ಕೆ ಪಡೆಯುವ ಅವಕಾಶ ಸಿಗುತ್ತದೆ. ಅವರು ತಮಗೆ 75 ವರ್ಷ ಆಗುವವರೆಗೆ ಹೀಗೆ ವ್ಯವಸ್ಥಿತವಾಗಿ ಹಣವನ್ನು ಹಿಂದಕ್ಕೆ ಪಡೆಯಬಹುದು.

'ಎನ್‌ಪಿಎಸ್ ಖಾತೆಯಲ್ಲಿ ಇರುವ ಹಣವನ್ನು ಅಲ್ಲಿಯೇ ಏಕೆ ಉಳಿಸಿಕೊಳ್ಳಬಾರದು ಎಂಬ ಪ್ರಶ್ನೆಯನ್ನು ಹಲವರು ಕೇಳುತ್ತಿದ್ದಾರೆ. ಎನ್‌ಪಿಎಸ್ ಹೂಡಿಕೆಯಿಂದ ಒಳ್ಳೆಯ ಲಾಭ ಬರುತ್ತಿರುವಾಗ, ಪಿಂಚಣಿ ಯೋಜನೆಯನ್ನು ಖರೀದಿಸುವುದೇಕೆ ಎಂಬುದು ಅವರ ಪ್ರಶ್ನೆ. ಹಣವನ್ನು ಎನ್‌ಪಿಎಸ್‌ನಲ್ಲಿಯೇ ಉಳಿಸಿ, ಅದನ್ನು ತಿಂಗಳಿಗೊಮ್ಮೆ ಅಥವಾ ಮೂರು ತಿಂಗಳಿಗೊಮ್ಮೆ ಹಿಂದಕ್ಕೆ ಪಡೆಯಲು ಕೆಲವರು ಬಯಸುತ್ತಿದ್ದಾರೆ. ಆದರೆ ಈಗ ಅಂತಹ ಅವಕಾಶ ಇಲ್ಲ' ಎಂದು ಮೊಹಂತಿ ವಿವರಿಸಿದ್ದಾರೆ.

ಎನ್‌ಪಿಎಸ್ ಚಂದಾದಾರರು ಪಿಂಚಣಿ ಪಡೆಯಲು ವಿನಿಯೋಗ ಮಾಡಬೇಕಿಲ್ಲದ ಶೇ 60ರಷ್ಟು ಮೊತ್ತವನ್ನು ಎಸ್‌ಡಬ್ಲ್ಯುಪಿ ಮೂಲಕ ಹಿಂಪಡೆಯಲು ಅವಕಾಶ ಕಲ್ಪಿಸುವಂತೆ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅತ್ಯಾಚಾರ: ಭಾರತ ಮೂಲದ ವ್ಯಕ್ತಿಗೆ 18 ವರ್ಷ ಸಜೆ

ಲಂಡನ್ (ಪಿಟಿಐ): ಉದ್ಯೋಗದ ಆಮಿಷವೊಡ್ಡಿ ಮಹಿಳೆಯರನ್ನು ಸೆಳೆದು ಅತ್ಯಾಚಾರ ಎಸಗಿದ್ದ ಪ್ರಕರಣದಲ್ಲಿ ಭಾರತ ಮೂಲದ, ಮಸಾಜ್ ಪಾರ್ಲರ್‌ನ ಮಾಲೀಕನೊಬ್ಬನಿಗೆ ಸ್ಥಳೀಯ ವುಡ್ ಗ್ರೀನ್ ಕ್ರೌನ್ ನ್ಯಾಯಾಲಯ 18 ವರ್ಷದ ಸಜೆ ವಿಧಿಸಿದೆ.

50 ವರ್ಷದ ರಘು ಸಿಂಗಮನೇನಿ ಶಿಕ್ಷೆಗೊಳಗಾದ ವ್ಯಕ್ತಿ. ಉದ್ಯೋಗದ ಆಮಿಷವೊಡ್ಡಿ ನಾಲ್ವರು ಮಹಿಳೆಯರನ್ನು ಸೆಳೆದಿದ್ದ ಈತ ಅವರ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಎಸಗಿದ್ದ ಎಂದು ತನಿಖೆ ನಡೆಸಿದ್ದ ಸ್ಕಾಟ್‌ಲ್ಯಾಂಡ್‌ಯಾರ್ಡ್, ಕೋರ್ಟ್‌ಗೆ ಆರೋಪಪಟ್ಟಿ ಸಲ್ಲಿಸಿತ್ತು.

ವುಡ್‌ಗ್ರೀನ್ ಮತ್ತು ಐಲಿಂಗ್ಟನ್‌ನಲ್ಲಿ ರಘು ಎರಡು ಮಸಾಜ್ ಪಾರ್ಲರ್ ನಡೆಸುತ್ತಿದ್ದ. ಉದ್ಯೋಗಾವಕಾಶ ಕುರಿತು ಆ್ಯಪ್‌ನಲ್ಲಿ ಜಾಹೀರಾತು ನೀಡುತ್ತಿದ್ದ. ಉದ್ಯೋಗ ನಿರೀಕ್ಷಿಸಿ ಬಂದ ಮಹಿಳೆಯರ ಮೇಲೆ ದೌರ್ಜನ್ಯ ಎಸಗುತ್ತಿದ್ದ ಎಂದು ಮೆಟ್ರೊಪಾಲಿಟನ್ ಪೊಲೀಸರು ತಿಳಿಸಿದ್ದಾರೆ.

17 ವರ್ಷದ ಇಬ್ಬರು, 19 ಹಾಗೂ 23 ವರ್ಷದ ಒಬ್ಬರ ಮೇಲೆ ಹೀಗೆ ದೌರ್ಜನ್ಯ ಎಸಗಿದ್ದ. ಸಂತ್ರಸ್ತರ ಹೇಳಿಕೆ ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿದ್ದರು. ಅತ್ಯಾಚಾರ, ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಯತ್ನ ಆರೋಪ ಪ್ರಕರಣಗಳಲ್ಲಿ ಈತನಿಗೆ ಸಜೆ ವಿಧಿಸಲಾಗಿದೆ ಎಂದು ಕೋರ್ಟ್ ತಿಳಿಸಿದೆ.

ಚಾಕು ಇರಿದು ಭಾರತ ಮೂಲದ ವ್ಯಕ್ತಿ ಹತ್ಯೆ

ಲಂಡನ್ (ಪಿಟಿಐ): ಲಂಡನ್‌ನಲ್ಲಿ ಭಾರತೀಯ ಮೂಲದ 38 ವರ್ಷದ ವ್ಯಕ್ತಿಯನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಲಾಗಿದೆ. ಈಚೆಗೆ ಹೈದರಾಬಾದ್ ಮೂಲದ ಯುವತಿ ಹಾಗೂ ಮತ್ತೊಬ್ಬ ಯುವಕನನ್ನು ಹತ್ಯೆ ಮಾಡಲಾಗಿತ್ತು.

ಅರವಿಂದ ಶಶಿಕುಮಾರ್ ಹತ್ಯೆಯಾಗಿರುವ ವ್ಯಕ್ತಿ. ಇರಿತದ ಗಾಯಗಳೊಂದಿಗೆ ಆತನ ಶವ ಸೌತ್ ಆಂಪ್ಟನ್‌ವೇಯ ನಿವಾಸದಲ್ಲಿ ಪತ್ತೆಯಾಗಿದೆ.

ಪೊಲೀಸರು ಕೊಲೆ ಆರೋಪದ ಮೇಲೆ ಸಲ್ಮಾನ್ ಸಲೀಂ ಎಂಬಾತನನ್ನು ವಶಕ್ಕೆ ಪಡೆದಿದ್ದಾರೆ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.12,000 - 17,000. 8951315839, 9880120052

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Book Your Classifieds Ads

Online Log in to dhclassifieds.com

Contact :

9845114560 : 9731810277

9901641752 : 9886213331

080 - 45557163 / 164

ವಾಹನ

Four Wheelers Selling

Toyota

LAND CRUISER CAR FOR SALE Year 2014, Top Model, 1.39 Lakh km done, Well Maintained Condition. All Accessories Intact. Asking Price Rs. 65 Lakh (Negotiable). Only Genuine Buyers Contact : 9310206323, 9310739099

ಭವಿಷ್ಯ

Astrology

ಕೇರಳ ಮಂತ್ರವಾದಿ ಶ್ರೀನಿವಾಸ್ ಎಂ. ಮುಗ್ಗೋಳ್, ತೀರ್ಥಹಳ್ಳಿ. 9632545506, 7892446291 ನಿಮ್ಮೆಲ್ಲಾ ಕಠಿಣ ಗುಪ್ತ ಸಮಸ್ಯೆಗೆ ಪರಿಹಾರ ಮಾಡುತ್ತಾರೆ.

ಪ್ರವಾಸ

Travel

05/07/2023ರಿಂದ 12ದಿನಗಳ ವಿಮಾನ ಮತ್ತು AC ಬಸ್ಸಿನಲ್ಲಿ ಅಮರನಾಥ್, ಕಾಶ್ಮೀರ, ದಾಲ್ ಲೇಖ್, ವೈಷ್ಣೋದೇವಿ ಇತ್ಯಾದಿ ಹಾಗೂ 8/13/16 ದಿನಗಳ ಚಾರುಧಾಮ್, ಮುಕ್ತಿನಾಥ್, ಕಾಶಿ, ಪೋಕ್ರಾ, ಜನಕಪುರಿ ಯಾತ್ರೆಗಳಿಗೆ ವಿಚಾರಿಸಿ: ವಿಷ್ಣನ್ ಟ್ರಾವೆಲ್ ಲೈನ್ಸ್. ಆರ್.ವಿ.ರಸ್ತೆ: 8105657052/ 9480182865

★13.07.2023 8/13ದಿನ★ ದೆಹಲಿ, ಆಗ್ರಾ, ಪ್ರಯಾಗ, ಗಯ, ಕಾಶಿ ಪ್ರವಾಸ., 15.08.2023 10ದಿನ ಗುಜರಾತ್, ಉಜ್ಜಯಿನಿ, ಓಂಕಾರೇಶ್ವರ.31.08.2023 16ದಿನ 95ದಿವ್ಯದೇಶ ಪ್ರವಾಸ, 29.07.2023 ತಮಿಳುನಾಡು 12ದಿನ 36ಸುಬ್ರಹ್ಮಣ್ಯ ಪ್ರವಾಸ. ಆರ್.ಗಾಂಧಿ ಟೂರ್ಸ್. 9902433500/ 9945445809

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ

ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ

ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)

Nursery Teachers Training Course

Qual : PUC. ಈ ಕೋರ್ಸುಗಳಲ್ಲದೆ

Post Graduation Diploma in Information Technology

6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು

ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.

DIPLOMA IN COMPUTER DATA ENTRY OPERATOR

ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ

Sharing Computer Literacy with Govt. of India

Recognized by Govt. of Karnataka

Mob. 9008419955, 9901520055, 9449198555,

Email : info@thercss.com

Website : www.thercss.com

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇಂದು ಅಧ್ಯಕ್ಷ ಷಿ ಜಿನ್‌ಪಿಂಗ್ ಜೊತೆ ಭೇಟಿ ಸಾಧ್ಯತೆ

ಚೀನಾಗೆ ಬ್ಲಿಂಕನ್: ಸಂಘರ್ಷ ಶಮನ ಯತ್ನ

ಬೀಜಿಂಗ್ (ಎ.ಪಿ): ಚೀನಾ ಮತ್ತು ಅಮೆರಿಕದ ನಡುವಿನ ಉದ್ವಿಗ್ನತೆಯನ್ನು ಶಮನಗೊಳಿಸುವ ಗುರಿಯೊಂದಿಗೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಭಾನುವಾರ ಬೀಜಿಂಗ್‌ಗೆ ಬಂದಿಳಿದರು. ಉಭಯ ರಾಷ್ಟ್ರಗಳ ನಡುವಿನ ಸಂಘರ್ಷ ಬಿಗಡಾಯಿಸುತ್ತಿರುವ ಸಂದರ್ಭದಲ್ಲಿ ಈ ಭೇಟಿಯು ಮಹತ್ವದ್ದಾಗಿದೆ.

ಹಿರಿಯ ಅಧಿಕಾರಿಗಳ ಜೊತೆಗೆ ಚರ್ಚೆ ನಡೆಸುವ ಮೂಲಕ ಬ್ಲಿಂಕನ್ ಎರಡು ದಿನದ ಪ್ರವಾಸ ಆರಂಭಿಸಿದ್ದಾರೆ. ಜೋ ಬೈಡನ್ ಅಧ್ಯಕ್ಷರಾದ ಬಳಿಕ ಚೀನಾಕ್ಕೆ ಅಮೆರಿಕದ ಅತ್ಯುನ್ನತ ಅಧಿಕಾರಿಯ ಮೊದಲ ಭೇಟಿ ಇದಾಗಿದೆ. 5 ವರ್ಷಗಳಲ್ಲಿ ಭೇಟಿ ನೀಡುತ್ತಿರುವ ಮೊದಲ ವಿದೇಶಾಂಗ ಕಾರ್ಯದರ್ಶಿಯು ಇವರಾಗಿದ್ದಾರೆ.

ಬ್ಲಿಂಕನ್ ಅವರು ಈ ವರ್ಷದ ಫೆಬ್ರುವರಿಯಲ್ಲಿಯೇ ಭೇಟಿ ನೀಡಬೇಕಾಗಿತ್ತು. ಆದರೆ, ಆಗ ಅಮೆರಿಕದ ವಾಯುಗಡಿಯಲ್ಲಿ ಸಂಚರಿಸುತ್ತಿದ್ದ ಚೀನಾದ ಕಣ್ಗಾವಲು ಬಲೂನ್ ಅನ್ನು ಸೇನೆ ಹೊಡೆದುರುಳಿಸಿತ್ತು. ಈ ಹಿನ್ನೆಲೆಯಲ್ಲಿ ಭೇಟಿಯನ್ನು ಮುಂದೂಡಲಾಗಿತ್ತು.

ಭೇಟಿಯ ಅವಧಿಯಲ್ಲಿ ಭಾನುವಾರ ಬ್ಲಿಂಕನ್ ಅವರು ಚೀನಾದ ವಿದೇಶಾಂಗ ಸಚಿವ ಕ್ವಿನ್ ಗಾಂಗ್, ಉನ್ನತ

ಅಮೆರಿಕ ರಕ್ಷಣಾ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಮತ್ತು ಚೀನಾದ ವಿದೇಶಾಂಗ ಸಚಿವ ಕ್ವಿನ್ ಗಾಂಗ್ ಭಾನುವಾರ ಬೀಜಿಂಗ್‌ನಲ್ಲಿ ಭೇಟಿಯಾಗಿ ಚರ್ಚಿಸಿದರು —ಎಎಫ್‌ಪಿ ಚಿತ್ರ

ರಾಯಭಾರಿ ವಾಂಗ್ ಯಿ ಹಾಗೂ ಸೋಮವಾರದಂದು ಬಹುತೇಕ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನೂ ಭೇಟಿಯಾಗಲಿದ್ದಾರೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಬ್ಲಿಂಕನ್ ಭೇಟಿಗೆ ಕಳೆದ ವರ್ಷ ಬಾಲಿಯಲ್ಲಿ ಷಿ ಜಿನ್‌ಪಿಂಗ್ ಮತ್ತು ಬ್ಲಿಂಕನ್ ಅವರು ಸಮ್ಮತಿ ಸೂಚಿಸಿದ್ದರು. ತೈವಾನ್ ಜೊತೆಗಿನ ವ್ಯಾಪಾರ ವಹಿವಾಟು, ಹಾಂಗ್‌ಕಾಂಗ್‌ನಲ್ಲಿ ಮಾನವ ಹಕ್ಕುಗಳ ಸ್ಥಿತಿಗತಿ, ದಕ್ಷಿಣ ಸಮುದ್ರ ಭಾಗದಲ್ಲಿ ಚೀನಾ ಸೇನೆಯ ಅತಿಕ್ರಮಣ, ಉಕ್ರೇನ್ ಮೇಲೆ ರಷ್ಯಾದ ಯುದ್ಧ ಕುರಿತು ಹಲವು ವಿಷಯಗಳು ಚರ್ಚೆಗೆ ಬರಲಿವೆ.

ಬ್ಲಿಂಕನ್ ಅವರ ಚೀನಾ ಪ್ರವಾಸ ಆರಂಭಕ್ಕೂ ಮೊದಲು ಅಮೆರಿಕದ ಅಧಿಕಾರಿಗಳು, ಪ್ರವಾಸದ ವೇಳೆ ಈ ಎಲ್ಲ ವಿಷಯಗಳು ಚರ್ಚೆಗೆ ಬರಲಿವೆ ಎಂದು ಹೇಳಿದ್ದರು. ಆದರೆ, ಉಭಯ ರಾಷ್ಟ್ರಗಳು ಈ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ನಿಲುವನ್ನು ಸಡಿಲಗೊಳಿಸಿಲ್ಲ.

ಶುಕ್ರವಾರ ಈ ಕುರಿತು ಮಾತನಾಡಿದ್ದ ಬ್ಲಿಂಕನ್ ಅವರು, 'ಅಧ್ಯಕ್ಷ ಬೈಡನ್ ಮತ್ತು ಷಿ ಜಿನ್‌ಪಿಂಗ್ ಅವರು ಪರಸ್ಪರ ಸಂವಹನ ಹೆಚ್ಚಿಸುವ ಬದ್ಧತೆ ತೋರಿದ್ದಾರೆ. ಸಂಭವನೀಯ ಅಪಾರ್ಥ, ತಪ್ಪುಸಂವಹನ ತಪ್ಪಿಸಲು ಎಷ್ಟು ಸಾಧ್ಯವೋ ಅಷ್ಟು ಸಂವಹನ ನಡೆಸಬೇಕಿದೆ ಎಂದು ಬೈಡನ್ ತಿಳಿಸಿದ್ದರು' ಎಂದು ಹೇಳಿದರು.

ಈ ಮಧ್ಯೆ, ಉದ್ವಿಗ್ನ ಪರಿಸ್ಥಿತಿ ತಗ್ಗಿಸುವ ಇಂಗಿತವನ್ನು ಷಿ ಜಿನ್‌ಪಿಂಗ್ ಅವರೂ ನೀಡಿದ್ದಾರೆ. ಮೈಕ್ರೋಸಾಫ್ಟ್ ಕಾರ್ಪೊರೇಷನ್‌ನ ಸಹ ಸ್ಥಾಪಕ ಬಿಲ್ ಗೇಟ್ಸ್ ಜೊತೆಗೆ ಶುಕ್ರವಾರ ನಡೆದಿದ್ದ ಮಾತುಕತೆ ಸಂದರ್ಭದಲ್ಲೂ 'ಉಭಯ ರಾಷ್ಟ್ರಗಳಿಗೂ ಅನುಕೂಲವಾಗಲು ಪರಸ್ಪರ ಸಹಕಾರ ನೀಡಬೇಕಾಗಿದೆ' ಎಂದು ಜಿನ್‌ಪಿಂಗ್ ಹೇಳಿದ್ದರು.

'ಅಮೆರಿಕ –ಚೀನಾ ಬಾಂಧವ್ಯವು ಉಭಯ ರಾಷ್ಟ್ರಗಳ ಜನರನ್ನು ಅವಲಂಬಿಸಿದೆ. ಜಗತ್ತಿನ ಪ್ರಸ್ತುತ ಸಂದರ್ಭದಲ್ಲಿ ಉಭಯ ದೇಶಗಳು, ನಾಗರಿಕರು ಹಾಗೂ ಇಡೀ ಮನುಕುಲಕ್ಕೆ ನೆರವಾಗಲು ವಿವಿಧ ಚಟುವಟಿಕೆಗಳನ್ನು ಒಟ್ಟಿಗೆ ನಡೆಸಬೇಕಾಗಿದೆ' ಎಂದು ಷಿ ಜಿನ್‌ಪಿಂಗ್ ಅವರು ಬಿಲ್‌ಗೇಟ್ಸ್ ಅವರಿಗೆ ಹೇಳಿದ್ದರು.

ವಾಷಿಂಗ್ಟನ್: ಭಾರತ ಸಮುದಾಯವರ ಉದ್ದೇಶಿಸಿ ಪ್ರಧಾನಿ ಮೋದಿ ಭಾಷಣ

ನ್ಯೂಯಾರ್ಕ್ (ಪಿಟಿಐ): ಅಮೆರಿಕ ಪ್ರವಾಸದ ವೇಳೆ ಪ್ರಧಾನಿ ನರೇಂದ್ರ ಮೋದಿ, ವಾಷಿಂಗ್ಟನ್ ಡಿ.ಸಿ.ಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾರತೀಯ ಸಮುದಾಯದವರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

'ಬಿಡುವಿಲ್ಲದ ಕಾರ್ಯಕ್ರಮಗಳ ಕಾರಣ ಕೊನೆಗಳಿಗೆಯಲ್ಲಿ ಈ ಕಾರ್ಯಕ್ರಮ ನಿಗದಿಯಾಗಿದೆ. ಹೀಗಾಗಿ, ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮ ಸಂಘಟಿಸಲಾಗುತ್ತಿಲ್ಲ' ಎಂದು ಭಾರತ ಅಮೆರಿಕನ್ ಕಮ್ಯುನಿಟಿ ಫೌಂಡೇಷನ್‌ನ ಭರತ್ ಭರ್‍ಯೆ ಅವರು ತಿಳಿಸಿದರು.

'ಮೊದಲು ಷಿಕಾಗೊದಲ್ಲಿ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿತ್ತು. ಪ್ರವಾಸ ಸಮಯ ಬದಲಾದ್ದರಿಂದ ಆಗಲಿಲ್ಲ. ಈಗ ವಾಷಿಂಗ್ಟನ್ ಡಿ.ಸಿ.ಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಆಯ್ದ ಸುಮಾರು 1000 ಜನರಿಗೆ ಪ್ರವೇಶ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಅನರ್ಹತೆ ಅವಧಿ ಗರಿಷ್ಠ 5 ವರ್ಷ: ಮಸೂದೆಗೆ ಪಾಕ್ ಸಂಸತ್ ಅಸ್ತು

ಇಸ್ಲಾಮಾಬಾದ್ (ಪಿಟಿಐ): ಚುನಾಯಿತ ಸದಸ್ಯರ ಅನರ್ಹತೆ ಅವಧಿಯನ್ನು ಗರಿಷ್ಠ 5 ವರ್ಷಗಳಿಗೆ ಸೀಮಿತಗೊಳಿಸುವ ಮಸೂದೆಯನ್ನು ಪಾಕಿಸ್ತಾನ ಸಂಸತ್ ಶುಕ್ರವಾರ ಅಂಗೀಕರಿಸಿತು. ಈ ಪ್ರಕಾರ, ಯಾವುದೇ ಜನಪ್ರತಿನಿಧಿಯನ್ನು ಜೀವಿತಾವಧಿಯವರೆಗೆ ಅನರ್ಹಗೊಳಿಸಲು ಅವಕಾಶ ಇರುವುದಿಲ್ಲ.

'ಕೋರ್ಟ್‌ನ ತೀರ್ಪಿನ ಪ್ರಕಾರ ವ್ಯಕ್ತಿ ಅನರ್ಹಗೊಂಡಲ್ಲಿ, ತೀರ್ಪು ಪ್ರಕಟಗೊಂಡ ದಿನದಿಂದ ಐದು ವರ್ಷಗಳಿಗೆ ಅನರ್ಹತೆ ಅನ್ವಯಿಸಲಿದೆ. ಕಾಯ್ದೆಯ ಪ್ರಕಾರ, ಅನರ್ಹತೆಯ ಅವಧಿಯೂ ಐದು ವರ್ಷಗಳನ್ನು ಮೀರುವಂತಿಲ್ಲ' ಎಂದು ಮಸೂದೆಯಲ್ಲಿ ಹೇಳಲಾಗಿದೆ. ಮಾಜಿ ಪ್ರಧಾನಿ ನವಾಜ್ ಷರೀಫ್ ದೇಶಕ್ಕೆ ಹಿಂದಿರುಗಿ ಚುನಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದು ಇದರ ಉದ್ದೇಶ ಎಂದು ವಿರೋಧಪಕ್ಷಗಳು ಟೀಕಿಸಿವೆ.

45 ದಿನ ಉರುಳಿದರೂ ನಿಲ್ಲದ ಹಿಂಸಾಚಾರ: 115 ಮಂದಿ ಸಾವು • 60 ಸಾವಿರ ಮಂದಿ ನಿರಾಶ್ರಿತರು

ಮಣಿಪುರ: ಶಾಂತಿ ಸ್ಥಾಪನೆ ಮರೀಚಿಕೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಣ ಹಿಂಸಾಚಾರ ಆರಂಭವಾಗಿ 45 ದಿನಗಳು ಉರುಳಿದರೂ ಇನ್ನೂ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿಲ್ಲ.

ಹಿಂಸಾಚಾರದಿಂದ ಇಲ್ಲಿಯವರೆಗೆ 115 ಜನರು ಪ್ರಾಣ ಕಳೆದುಕೊಂಡಿದ್ದು, 60 ಸಾವಿರ ಮಂದಿ ನೆಲೆ ಕಳೆದುಕೊಂಡಿದ್ದಾರೆ. ಶಾಂತಿ ಪುನರ್ ಸ್ಥಾಪನೆಗೆ ಭಾರತೀಯ ಸೇನೆ ಸೇರಿದಂತೆ 40 ಸಾವಿರಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿ ಮೊಕ್ಕಾಂ ಹೂಡಿದ್ದು, ಸಂಘರ್ಷ ನಿಯಂತ್ರಣಕ್ಕೆಹರಸಾಹಸಪಡುತ್ತಿದ್ದಾರೆ.

ಮತ್ತೊಂದೆಡೆ ಕೇಂದ್ರ ಮತ್ತು ಮಣಿಪುರದ ಬಿಜೆಪಿ ಸರ್ಕಾರವು ಯಥಾಸ್ಥಿತಿ ಕಾಯ್ದುಕೊಳ್ಳುವ ಸಂಬಂಧ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳುತ್ತಿವೆ. ಇದರ ಭಾಗವಾಗಿಯೇ ಮೈತೇಯಿ ಮತ್ತು ಕುಕಿ ಸಮುದಾಯದ ಬೇಡಿಕೆ ಈಡೇರಿಸುವುದಾಗಿ ಹೇಳಿದರೂ ಶಾಂತಿ ಸ್ಥಾಪನೆಯು ಮರೀಚಿಕೆಯಾಗಿದೆ.

ರಾಷ್ಟ್ರೀಯ ಪೌರತ್ವ ನೋಂದಣಿ ಜಾರಿಗೆ ಆಗ್ರಹಿಸಿ ಇಂಫಾಲ್‌ನಲ್ಲಿ ಶನಿವಾರ ರಾತ್ರಿ ನೂರಾರು ಮಹಿಳೆಯರು ಪಂಜು ಹಿಡಿದು ಪ್ರತಿಭಟನೆ ನಡೆಸಿದರು

ರಾಷ್ಟ್ರೀಯ ಪೌರತ್ವ ನೋಂದಣಿ-(ಎನ್‌ಆರ್‌ಸಿ) ಜಾರಿಗೆ ಅಸ್ಸಾಂ ಸರ್ಕಾರ ಒತ್ತಾಯಿಸುತ್ತಿದೆ. ಅದೇ ಮಾದರಿಯಲ್ಲಿ ಮಣಿಪುರದಲ್ಲೂ ಎನ್‌ಆರ್‌ಸಿ ಜಾರಿಗೊಳಿಸಿ ಅಕ್ರಮ ವಲಸಿಗರನ್ನು ಪತ್ತೆಹಚ್ಚಬೇಕು. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಜೊತೆಗೆ ಪರಿಶಿಷ್ಟ ಪಂಗಡದ ಸ್ಥಾನಮಾನ ನೀಡಬೇಕು ಎಂಬುದು ಮೈತೇಯಿ ಜನರ ಬೇಡಿಕೆ. ಈ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೇ 3ರಂದು ನಡೆದ ರ‍್ಯಾಲಿ ವೇಳೆ ಹಿಂಸಾಚಾರ ಭುಗಿಲೆದ್ದಿತ್ತು.

ಮತ್ತೊಂಡೆದೆ ಕುಕಿ–ಜೋಮಿ ಜನರ ಪ್ರಾಬಲ್ಯವಿರುವ ಪ್ರದೇಶದಲ್ಲಿ ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸಬೇಕು ಎಂದು ಕುಕಿ ಸಮುದಾಯ ಪ್ರತಿನಿಧಿಸುವ 10 ಶಾಸಕರು ಬೇಡಿಕೆ ಇಟ್ಟಿದ್ದಾರೆ. ಮುಖ್ಯಮಂತ್ರಿ ಎನ್. ಬಿರೆನ್ ಸಿಂಗ್ ಸರ್ಕಾರವು ಕುಕಿ ಜನರು ಹೆಚ್ಚಿರುವ ಪ್ರದೇಶಗಳ ಅಭಿವೃದ್ಧಿಗೆ ನಿರ್ಲಕ್ಷ್ಯ ತೋರಿದೆ. ಸರ್ಕಾರದ ಈ ತಾರತಮ್ಯ ನೀತಿ ತೊಲಗಿದರಷ್ಟೇ ಶಾಂತಿ ಸ್ಥಾಪನೆ ಸಾಧ್ಯ ಎನ್ನುವುದು ಅವರ ಒತ್ತಾಯ.

ಶಾಂತಿ, ಸೌಹಾರ್ದಕ್ಕೆ ಆರ್‌ಎಸ್‌ಎಸ್ ಮನವಿ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಖಂಡಿಸಿದೆ. ರಾಜ್ಯದಲ್ಲಿ ಶಾಂತಿ ಮರುಸ್ಥಾಪಿಸಲು ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರ, ಸ್ಥಳೀಯ ಆಡಳಿತ, ಪೊಲೀಸರು ಮತ್ತು ಭದ್ರತಾ ಪಡೆಗಳು ಸೇರಿ ಕೇಂದ್ರೀಯ ಸಂಸ್ಥೆಗಳಲ್ಲಿ ಮನವಿ ಮಾಡಿದೆ.

'ಶಾಂತಿ ಮತ್ತು ಸೌಹಾರ್ದಕ್ಕೆ ಕ್ರಮ ಕೈಗೊಳ್ಳುವ ಜೊತೆಗೆ ಹಿಂಸಾಚಾರದಿಂದ ನಲುಗಿ ಸ್ಥಳಾಂತರಗೊಂಡಿರುವ ಜನರಿಗೆ ಅಗತ್ಯ ಪರಿಹಾರ ಸಾಮಗ್ರಿಗಳನ್ನು ಒದಗಿಸಿ' ಎಂದು ಆರ್‌ಎಸ್‌ಎಸ್ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

'ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಹಿಂಸಾಚಾರ ಮತ್ತು ದ್ವೇಷಕ್ಕೆ ಜಾಗ ಇಲ್ಲ. ಉಭಯ ಸಮುದಾಯಗಳು ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಬೇಕು' ಎಂದು ಹೇಳಿದ್ದಾರೆ. ಹಿಂಸೆ ಮತ್ತು ಗಲಭೆ ನಿಯಂತ್ರಣಕ್ಕೆ ಪ್ರತಿಯೊಬ್ಬ ಪ್ರಜೆ, ರಾಜಕೀಯ ಗುಂಪುಗಳೂ ಸಾಧ್ಯವಾದ ಕ್ರಮ ವಹಿಸಬೇಕು ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ವ್ಯಂಗ್ಯ: ಆರ್‌ಎಸ್‌ಎಸ್ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್, 'ಸಂಘರ್ಷ ಆರಂಭವಾಗಿ 45 ದಿನಗಳಾಗಿವೆ. ಕೊನೆಗೂ ಆರ್‌ಎಸ್‌ಎಸ್ ಶಾಂತಿ, ಸೌಹಾರ್ದ ಬಯಸಿ ಜನರಲ್ಲಿ ಮನವಿ ಮಾಡಿದೆ. ಆರ್‌ಎಸ್‌ಎಸ್‌ನ ಇಬ್ಬಾಗ ಮತ್ತು ಧ್ರುವೀಕರಣ ನೀತಿ ಈಶಾನ್ಯ ರಾಜ್ಯದ ವೈವಿಧ್ಯಮಯ ಸ್ವರೂಪವನ್ನು ಕದಡಿದೆ' ಎಂದು ಆರೋಪಿಸಿದೆ.

ಎನ್‌ಆರ್‌ಸಿಗೆ ಒತ್ತಾಯ

ಇಂಫಾಲ್‌ನಲ್ಲಿ ಶನಿವಾರ ರಾತ್ರಿ ಮೈತೇಯಿ ಸಮುದಾಯಕ್ಕೆ ಸೇರಿದ ನೂರಾರು ಮಹಿಳೆಯರು ಪಂಜಿನ ಮೆರವಣಿಗೆ ನಡೆಸಿದರು. ಮಾನವ ಸರಪಳಿ ನಿರ್ಮಿಸಿ ಎನ್‌ಆರ್‌ಸಿ ಜಾರಿಗೆ ಆಗ್ರಹಿಸಿದರು.

ಕುಕಿ ಬಂಡುಕೋರರ ವಿರುದ್ಧದ ಕಾರ್ಯಾಚರಣೆ ಒಪ್ಪಂದವನ್ನು ಅಮಾನತಿನಲ್ಲಿ ಇಟ್ಟಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಕುಕಿ ಜನಸಂಖ್ಯೆ ಹೆಚ್ಚುತ್ತಿದೆ. ಅವರ ಪ್ರಾಬಲ್ಯದಿಂದ ನಮಗೆ ರಕ್ಷಣೆ ಇಲ್ಲದಂತಾಗಿದೆ. ಎನ್‌ಆರ್‌ಸಿ ಜಾರಿಯಿಂದ ಮಾತ್ರವಷ್ಟೇ ಮೈತೇಯಿ ಜನರ ಸುರಕ್ಷತೆ ಸಾಧ್ಯ ಎಂದು ಆಗ್ರಹಿಸಿದರು.

ಇದಕ್ಕೆ ಕುಕಿಗಳು ಆಕ್ಷೇಪವ್ಯಕ್ತಪಡಿಸಿದ್ದು, 'ಹಲವು ವರ್ಷಗಳಿಂದ ಮಣಿಪುರದಲ್ಲಿ ವಾಸಿಸುತ್ತಿದ್ದೇವೆ. ಆದರೆ, ನಮ್ಮನ್ನು ಅಕ್ರಮ ವಾಸಿಗಳೆಂದು ಬಿಂಬಿಸುವ ಪ್ರಯತ್ನ ನಡೆದಿದೆ' ಎಂದು ದೂರಿದ್ದಾರೆ.

ಜೆಇಇ– ಅಡ್ವಾನ್ಸ್‌ಡ್ 2023 ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ದೇಶದಾದ್ಯಂತ ಐಐಟಿಗಳ ಪ್ರವೇಶಾತಿಗಾಗಿ ನಡೆದ 2023ನೇ ಸಾಲಿನ ಜೆಇಇ– ಅಡ್ವಾನ್ಸ್‌ಡ್ ಪರೀಕ್ಷೆಯ ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, ಹೈದರಾಬಾದ್ ವಲಯದ ವಾವಿಲಾಲ ಚಿದ್ವಿಲಾಸ್ ರೆಡ್ಡಿ ಪ್ರಥಮ ರ‍್ಯಾಂಕ್ ಪಡೆದಿದ್ದಾರೆ.

ಈ ವರ್ಷ ಜೆಇಇ ಅಡ್ವಾನ್ಸ್‌ಡ್ ಪರೀಕ್ಷೆ ಆಯೋಜಿಸಿದ್ದ ಐಐಟಿ ಗುವಾಹಟಿಯ ಪ್ರಕಾರ, ಚಿದ್ವಿಲಾಸ್ ರೆಡ್ಡಿ ಅವರು ಒಟ್ಟು 360 ಅಂಕಗಳ ಪೈಕಿ 341 ಅಂಕ ಗಳಿಸಿದ್ದಾರೆ. ವಿದ್ಯಾರ್ಥಿನಿಯರ ಪೈಕಿ ಐಐಟಿ ಹೈದರಾಬಾದ್ ವಲಯದ ನಯಕಾಂತಿ ನಾಗ ಭವ್ಯಶ್ರೀ ಅವರು 298 ಅಂಕ ಗಳಿಸಿ ಟಾಪರ್ ಎನಿಸಿಕೊಂಡಿದ್ದಾರೆ.

ಮೊದಲ ಹತ್ತು ರ‍್ಯಾಂಕ್ ಪಡೆದವರಲ್ಲಿ ಆರು ವಿದ್ಯಾರ್ಥಿಗಳು ಐಐಟಿ ಹೈದರಾಬಾದ್ ವಲಯದವರು. ಮೇಶ್ ಸೂರ್ಯ ತೇಜ (ಹೈದರಾಬಾದ್ ವಲಯ) ಮತ್ತು ರಿಷಿ ಕಲ್ರಾ (ರೂರ್ಕಿ ವಲಯ) ಎರಡನೇ ಸ್ಥಾನ ಪಡೆದಿದ್ದಾರೆ.

ರಾಘವ್ ಗೋಯಲ್ (ರೂರ್ಕಿ), ಅಡ್ಡಗಡ ವೆಂಕಟ ಶಿವರಾಮ್ (ಹೈದರಾಬಾದ್), ಪ್ರಭಾವ್ ಖಂಡೇಲ್‌ವಾಲ್ (ದೆಹಲಿ), ಬಿಕ್ಕಿನ ಅಭಿನವ್ ಚೌಧರಿ (ಹೈದರಾಬಾದ್), ಮಲಯ್ ಕೇಡಿಯಾ (ದೆಹಲಿ), ನಾಗಿರೆಡ್ಡಿ ಬಾಲಾಜಿ ರೆಡ್ಡಿ (ಹೈದರಾಬಾದ್) ಮತ್ತು ಯಕಂಟಿ ಪಾಣಿ ವೆಂಕಟ ಮಣಿಧರ್ ರೆಡ್ಡಿ (ಹೈದರಾಬಾದ್) ನಂತರದ ಸ್ಥಾನಗಳನ್ನು ಪಡೆದಿದ್ದಾರೆ.

ಐಐಟಿ ಹೈದರಾಬಾದ್, ಐಐಟಿ ದೆಹಲಿ ಮತ್ತು ಐಐಟಿ ಬಾಂಬೆ ವಲಯಗಳಿಂದ ಗರಿಷ್ಠ ಸಂಖ್ಯೆಯ ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಟಾಪ್ 500 ಅಭ್ಯರ್ಥಿಗಳಲ್ಲಿ, 174 ಐಐಟಿ ಹೈದರಾಬಾದ್ ವಲಯ, ನಂತರ 120 ಐಐಟಿ ದೆಹಲಿ ವಲಯದಿಂದ ಮತ್ತು 103 ಐಐಟಿ ಬಾಂಬೆ ವಲಯದಿಂದ ಅರ್ಹತೆ ಪಡೆದುಕೊಂಡಿದ್ದಾರೆ.

13 ವಿದೇಶಿ ಅಭ್ಯರ್ಥಿಗಳು ಹಾಗೂ 155 ಭಾರತೀಯ ಸಾಗರೋತ್ತರ ನಾಗರಿಕರು (ಒಸಿಐ) ಸಹ ಅರ್ಹತೆ ಪಡೆದಿದ್ದಾರೆ.

ಜೂನ್ 4ರಂದು ನಡೆದಿದ್ದ ಐಐಟಿ– ಜೆಇಇ ಅಡ್ವಾನ್ಸ್‌ಡ್ ಪರೀಕ್ಷೆಗಳಿಗೆ ಒಟ್ಟು 1,80,372 ಮಂದಿ ಹಾಜರಾಗಿದ್ದು, ಅವರಲ್ಲಿ 43,773 ಮಂದಿ ಅರ್ಹತೆ ಪಡೆದಿದ್ದಾರೆ. ಅರ್ಹತೆ ಪಡೆದವರಲ್ಲಿ 36,204 ವಿದ್ಯಾರ್ಥಿಗಳು ಮತ್ತು 7,509 ವಿದ್ಯಾರ್ಥಿನಿಯರು. ಸೀಟು ಹಂಚಿಕೆಯ ಕೌನ್ಸೆಲಿಂಗ್ ಪ್ರಕ್ರಿಯೆಯು ಸೋಮವಾರದಿಂದ ಆರಂಭವಾಗಲಿದೆ.

'ಬಾಹುಬಲಿ ಸಮೋಸ': ಅರ್ಧ ತಾಸಲ್ಲಿ 30ದರೆ ₹71 ಸಾವಿರ ಬಹುಮಾನ

ಮೀರತ್ (ಪಿಟಿಐ): ಕೇಕ್ ಬದಲಾಗಿ 12 ಕೆ.ಜಿ ತೂಕದ ಸಮೋಸ ಕತ್ತರಿಸಿ ಜನ್ಮದಿನ ಆಚರಿಸಲು ಬಯಸುತ್ತೀರೊ ಅಥವಾ 30 ನಿಮಿಷಗಳಲ್ಲಿ ಸಮೋಸ ತಿಂದು ₹71 ಸಾವಿರ ಬಹುಮಾನ ಗೆಲ್ಲಲು ಬಯಸುತ್ತೀರೊ? ಹೀಗೊಂದು ವಿಶಿಷ್ಟ ಆಹ್ವಾನವನ್ನು ಉತ್ತರ ಪ್ರದೇಶದ ಮೀರತ್‌ನ 'ಕೌಶಲ್ ಸ್ವೀಟ್ಸ್' ಸಿಹಿ ಅಂಗಡಿಯು ಗ್ರಾಹಕರಿಗೆ ನೀಡುತ್ತಿದೆ.

ಅಂಗಡಿ ಮಾಲೀಕ ಶುಭಂ ಕೌಶಲ್ ಅವರ ಹೊಸ ಪ್ರಯೋಗವೇ 12 ಕೆ.ಜಿ ತೂಕದ 'ಬಾಹುಬಲಿ ಸಮೋಸ'. ಸಮೋಸ ತಿನಿಸನ್ನು ಮತ್ತಷ್ಟು ಪ್ರಚುರಪಡಿಸುವುದಕ್ಕಾಗಿ ಹೊಸ ಪ್ರಯೋಗ

ಮಾಡಬೇಕು ಎಂದು ಯೋಚಿಸುತ್ತಿದ್ದ ವೇಳೆ ಹೊಳೆದಿದ್ದೇ 'ಬಾಹುಬಲಿ ಸಮೋಸ'. ಇದನ್ನು ತಯಾರಿಸಲು ಬಾಣಸಿಗರಿಗೆ ಆರು ತಾಸು ಬೇಕಾಗುತ್ತದೆ ಎಂದು ಶುಭಂ ಹೇಳಿದ್ದಾರೆ.

ಇದಲ್ಲದೇ ಈ ಸಮೋಸವನ್ನು 30 ನಿಮಿಷದಲ್ಲಿ ತಿಂದು ಮುಗಿಸುವ ಸ್ಪರ್ಧೆಯನ್ನು ಅವರು ನಡೆಸುತ್ತಿದ್ದಾರೆ. ಗೆದ್ದವರಿಗೆ ₹71 ಸಾವಿರ ಬಹುಮಾನ ನೀಡುವುದಾಗಿ ಘೋಷಿಸಿದ್ದಾರೆ.

'ನಾವು ತಯಾರಿಸುವ ಬಾಹುಬಲಿ ಸಮೋಸ ಸಾಮಾಜಿಕ ಮಾಧ್ಯಮ ಇನ್‌ಫ್ಲುಯೆನ್ಸರ್‌ಗಳು ಮತ್ತು ಆಹಾರ ಬ್ಲಾಗರ್‌ಗಳ ಗಮನ ಸೆಳೆದಿದೆ. ಮುಂಗಡವಾಗಿ ಆರ್ಡರ್ ನೀಡಿದರೆ ಮಾತ್ರ ಸಮೋಸ ತಯಾರಿಸಿ ಕೊಡಲಾಗುತ್ತದೆ' ಎಂದು ಶುಭಂ ತಿಳಿಸಿದ್ದಾರೆ.

'12 ಕೆ.ಜಿ ತೂಕವುಳ್ಳ ಒಂದು ಸಮೋಸ ಬೆಲೆ ₹1,500. ದೇಶದಲ್ಲೇ ನಾವು ಬೃಹತ್ ಗಾತ್ರದ ಸಮೋಸ ತಯಾರಕರು' ಎಂದು ಅವರು ಹೇಳಿಕೊಳ್ಳುತ್ತಾರೆ.

ಮತ್ಸ್ಯ ಭರಾಟೆ ಮೀನುಗಾರಿಕೆಗೆ ಹೇರಿದ್ದ ನಿಷೇಧವನ್ನು ಹಿಂಪಡೆದ ನಂತರ ಬಂಗಾಳಕೊಲ್ಲಿಯಲ್ಲಿ ಹಿಡಿದ ಮೀನುಗಳನ್ನು ಚೆನ್ನೈನ ಕಾಸಿಮೇಡು ಮೀನುಗಾರಿಕಾ ಬಂದರಿನಲ್ಲಿ ಸಂಗ್ರಹಿಸಿಟ್ಟಿದ್ದರು –ಪಿಟಿಐ ಚಿತ್ರ

ಜನತಂತ್ರ ರಕ್ಷಕರಿಗೆ ನೀಡಿದ ಚಿತ್ರಹಿಂಸೆ ಮರೆಯಲು ಸಾಧ್ಯವಿಲ್ಲ: ಪ್ರಧಾನಿ ಮೋದಿ

'ತುರ್ತುಸ್ಥಿತಿ ಚರಿತ್ರೆಯ ಕರಾಳ ಯುಗ'

ನವದೆಹಲಿ (ಪಿಟಿಐ): 'ದೇಶದ ಪ್ರಜಾಪ್ರಭುತ್ವವಾದಿಗಳ ಮೇಲೆ ದೌರ್ಜನ್ಯದಿಂದ ಹೇರಿದ ತುರ್ತು ಪರಿಸ್ಥಿತಿಯು ಭಾರತೀಯ ಚರಿತ್ರೆಯಲ್ಲಿ ಕರಾಳ ಯುಗವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ಲೇಷಿಸಿದ್ದಾರೆ.

ಮೋದಿ ಅಮೆರಿಕ ಪ್ರವಾಸ ಕೈಗೊಳ್ಳುವ ಕಾರಣ ಒಂದು ವಾರ ಮೊದಲೇ ಭಾನುವಾರ ಬಿತ್ತರಗೊಂಡ ಮನದ ಮಾತು (ಮನ್ ಕಿ ಬಾತ್) ಮಾಸಿಕ ರೇಡಿಯೊ ಕಾರ್ಯಕ್ರಮದ 102ನೇ ಸಂಚಿಕೆಯಲ್ಲಿ ಅವರು ಮಾತನಾಡಿದರು.

ಇಂತಹ ಅಪರಾಧ ಕೃತ್ಯಗಳು ಭಾರತದ ಸ್ವಾತಂತ್ರ್ಯಕ್ಕೆ ಹೇಗೆ ಅಪಾಯಕಾರಿಯಾಗಿವೆ ಎಂಬುದರತ್ತ ಯುವಪೀಳಿಗೆ ನೋಟ ಹರಿಸಬೇಕಿದೆ. ಆಗಷ್ಟೇ ಜನತಂತ್ರದ ಮಹತ್ವ ಅರ್ಥವಾಗುತ್ತದೆ ಎಂದರು.

'ಭಾರತ ಪ್ರಜಾಪ್ರಭುತ್ವದ ತಾಯಿ ಬೇರು. ನಾವು ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಸಂವಿಧಾನದ ಆಶಯಗಳನ್ನು ಎತ್ತಿಹಿಡಿದಿದ್ದೇವೆ. ಆದರೆ, ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರು 1975ರ ಜೂನ್ 25ರಂದು ಘೋಷಿಸಿದ ತುರ್ತು ಪರಿಸ್ಥಿತಿಯ ದಿನವನ್ನು ಮರೆಯಲು ಸಾಧ್ಯವಿಲ್ಲ' ಎಂದು ಹೇಳಿದರು.

ತುರ್ತು ಪರಿಸ್ಥಿತಿ ವಿರೋಧಿಸಿದ್ದ ಲಕ್ಷಾಂತರ ಭಾರತೀಯರು ಚಿತ್ರಹಿಂಸೆಗೆ ಒಳಗಾದರು. ಆ ಬಗ್ಗೆ ಈಗ ನೆನಪಿಸಿಕೊಂಡರೂ ಮೈಯಲ್ಲಿ ನಡುಕ ಹುಟ್ಟುತ್ತದೆ ಎಂದರು.

'ಆ ವೇಳೆ ಪೊಲೀಸರು ಮತ್ತು ಅಧಿಕಾರಶಾಹಿ ಎಸಗಿದ ದೌರ್ಜನ್ಯ, ಚಿತ್ರಹಿಂಸೆ ಬಗ್ಗೆ ಹಲವು ಪುಸ್ತಕಗಳು ಪ್ರಕಟವಾಗಿವೆ. ನಾನು ಕೂಡ ಆಗ 'ಗುಜರಾತ್‌ನಲ್ಲಿ ಸಂಘರ್ಷ' ಎಂಬ ಪುಸ್ತಕ ಬರೆದಿದ್ದೆ. ಬಳಿಕ 'ಟಾರ್ಚರ್ ಆಫ್ ಪೊಲಿಟಿಕಲ್ ಪ್ರಿಸನರ್ಸ್ ಇನ್ ಇಂಡಿಯಾ' ಎಂಬ ಪುಸ್ತಕ ಮುದ್ರಣ ಕಂಡಿತು. ಜನತಂತ್ರದ ರಕ್ಷಕರನ್ನು ಹೇಗೆ ಚಿತ್ರಹಿಂಸೆಗೆ ಗುರಿಪಡಿಸಲಾಯಿತು ಎಂಬುದನ್ನು ಇದರಲ್ಲಿ ದಾಖಲಿಸಲಾಗಿದೆ' ಎಂದು ಹೇಳಿದರು.

> **ನ್ಯೂಯಾರ್ಕ್‌ನಲ್ಲಿ ಮೇ 21ರಂದು ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಅವಕಾಶ ದೊರೆತಿದೆ. ಯೋಗಾಭ್ಯಾಸವು ದೇಶದ ಜನರ ದಿನಚರಿಯ ಭಾಗವಾಗಬೇಕಿದೆ**
> **ನರೇಂದ್ರ ಮೋದಿ,** ಪ್ರಧಾನಿ

ನೈಸರ್ಗಿಕ ವಿಕೋಪ ನಿರ್ವಹಣೆ:

ಬಿಪೊರ್‌ಜಾಯ್ ಚಂಡಮಾರುತದಿಂದ ದಿಕ್ಕೆಟ್ಟಿರುವ ಗುಜರಾತ್‌ನ ಕಛ್ ತೀರದ ಜನರು ಬಹುಬೇಗ ಚೇತರಿಸಿಕೊಳ್ಳಲಿದ್ದಾರೆ ಎಂದು ಮೋದಿ ಹೇಳಿದರು. ಎರಡು ದಶಕದ ಹಿಂದೆ ಇಲ್ಲಿ ಪ್ರಬಲ ಭೂಕಂಪ ಸಂಭವಿಸಿತ್ತು. ಆ ಆಘಾತದಿಂದ ಅಲ್ಲಿನವರು ಚೇತರಿಸಿಕೊಳ್ಳುವ ಬಗ್ಗೆ ಹಲವರು ಅನುಮಾನ ವ್ಯಕ್ತಪಡಿಸಿದ್ದರು. ಆದರೆ, ಅಲ್ಲಿನ ಜನರು ವಿಪತ್ತಿನಿಂದ ಚೇತರಿಸಿಕೊಂಡರು ಎಂದು ಸ್ಮರಿಸಿದರು. ಪ್ರಾಕೃತಿಕ ವಿಕೋಪ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ, ಅದರ ನಿರ್ವಹಣೆಯಲ್ಲಿ ಭಾರತ ಸಶಕ್ತವಾಗಿದೆ ಎಂದರು.

ಜಲ ಸಂರಕ್ಷಣೆಯ ಸಾಹಸಗಾಥೆ

ಹಿಂದಿನ ಸಂಚಿಕೆಗಳಲ್ಲೂ ಪ್ರಸ್ತಾಪಿಸಿದ್ದ ಜಲ ಸಂರಕ್ಷಣೆ ಕಾರ್ಯಗಳ ಬಗ್ಗೆ ಹಲವು ಮಂದಿ ಪತ್ರ ಬರೆದಿದ್ದಾರೆ ಎಂದು ಹೇಳಿದ ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶದ ಬಂದಾ ಜಿಲ್ಲೆಯ ತುಳಸಿರಾಮ್ ಯಾದವ್ ಅವರ ಜಲ ಸಂರಕ್ಷಣಾ ಸಾಹಸಗಾಥೆಯನ್ನು ತೆರೆದಿಟ್ಟರು.

ಬಂದಾ ಮತ್ತು ಬುಂದೇಲ್‌ಖಂಡ್ ಭಾಗದಲ್ಲಿ ನೀರಿನ ಸಮಸ್ಯೆ ಸರ್ವೇ ಸಾಮಾನ್ಯ. ಇದು ತುಳಸಿರಾಮ್‌ಗೆ ಸವಾಲಾಗಿತ್ತು. ಇದರ ನಿವಾರಣೆಗೆ ಮುಂದಾದ ಅವರು ಗ್ರಾಮಸ್ಥರ ನೆರವಿನಲ್ಲಿ 40 ಕೆರೆಗಳನ್ನು ನಿರ್ಮಿಸಿದರು. ಹೊಲ, ಗ್ರಾಮಗಳಲ್ಲಿ ಸುರಿಯುವ ಮಳೆ ನೀರನ್ನು ಅಲ್ಲಿಯೇ ಇಂಗಿಸುವ ಬಗ್ಗೆ ಅವರು ಆರಂಭಿಸಿದ ಅಭಿಯಾನ ಇಂದು ಫಲ ಕೊಟ್ಟಿದೆ. ಅವರ ಗ್ರಾಮದಲ್ಲಿ ಅಂತರ್ಜಲ ಮಟ್ಟ ವೃದ್ಧಿಸಿದೆ ಎಂದರು.

ಮನದ ಮಾತು ಮುಗಿದರೂ ಮೌನವೇಕೆ: ಕಾಂಗ್ರೆಸ್ ಟೀಕೆ

ಮೋದಿ ಅವರ ಮತ್ತೊಂದು ಮನದ ಮಾತು ಮುಗಿದಿದೆ. ಆದರೂ, ಮಣಿಪುರ ಹಿಂಸಾಚಾರದ ಬಗ್ಗೆ ಅವರ ಮೌನ ಮುಂದುವರಿದಿದೆ ಎಂದು ಕಾಂಗ್ರೆಸ್ ಟೀಕಿಸಿದೆ.

'ಪ್ರಧಾನಿ ಅವರು ನೈಸರ್ಗಿಕ ವಿಕೋಪದ ನಿರ್ವಹಣೆ ಸಂಬಂಧ ಭಾರತದ ಸಾಮರ್ಥ್ಯದ ಬಗ್ಗೆ ಹೆಮ್ಮೆಯಿಂದ ಹೇಳುತ್ತಾರೆ. ಆದರೆ, ಮಾನವ ಪ್ರೇರಿತ ಕೃತ್ಯದಿಂದ ನಲುಗುತ್ತಿರುವ ಮಣಿಪುರ ಕುರಿತು ಮಾತನಾಡುತ್ತಿಲ್ಲ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ(ಸಂವಹನ) ಜೈರಾಮ್ ರಮೇಶ್ ಟ್ವೀಟ್ ಮೂಲಕ ಟೀಕಿಸಿದ್ದಾರೆ.

'ಶಾಂತಿ ಕಾಪಾಡುವಂತೆ ಜನರಿಗೆ ಮೋದಿ ಇಂದಿಗೂ ಮನವಿ ಮಾಡಿಲ್ಲ. ಪ್ರಧಾನ ಮಂತ್ರಿ ಪರಿಹಾರ ನಿಧಿಯಿಂದ ಬಿಡಿಗಾಸು ಕೂಡ ನೀಡಿಲ್ಲ. ಅವರು ಕಣಿವೆ ರಾಜ್ಯದ ಸುರಕ್ಷತೆಗೆ ಕ್ರಮಕೈಗೊಳ್ಳುತ್ತಾರೆಯೇ ಎಂಬ ಅನುಮಾನ ಮೂಡಿದೆ' ಎಂದಿದ್ದಾರೆ.

ಶಿವಾಜಿ ಸ್ಮರಣೆ: 'ಶಿವಾಜಿ ಮಹಾರಾಜ್ ಅವರ ಆಡಳಿತ ಕೌಶಲದಿಂದ ಸಾಕಷ್ಟು ಕಲಿತಿದ್ದೇನೆ. ಜಲ ನಿರ್ವಹಣೆ ಮತ್ತು ನೌಕಾಪಡೆ ನಿರ್ಮಾಣದಲ್ಲಿ ಅವರೇ ನಮಗೆ ಪ್ರೇರಣೆ. ಸಮುದ್ರದಲ್ಲಿ ಕೋಟೆ ನಿರ್ಮಾಣದ ಅವರ ಕೌಶಲ ಜ್ಞಾನ ಭಾರತೀಯ ಚರಿತ್ರೆಯ ಗತ ವೈಭವಕ್ಕೆ ಸಾಕ್ಷಿಯಾಗಿದೆ' ಎಂದರು.

ಕ್ಷಯ ಮುಕ್ತ ಭಾರತ ಗುರಿ: 2025ರ ವೇಳೆಗೆ ಕ್ಷಯರೋಗ ಮುಕ್ತ ಭಾರತ ನಿರ್ಮಾಣವು ಕೇಂದ್ರ ಸರ್ಕಾರದ ಗುರಿಯಾಗಿದೆ. ಈ ಸಂಬಂಧ ರೂಪಿಸಿರುವ ನಿಕ್ಷಯ್ ಮಿತ್ರಾ ಯೋಜನೆ ಸಹಕಾರಿಯಾಗಿದೆ. ಇದರಡಿ 10 ಲಕ್ಷ ರೋಗಿಗಳನ್ನು ದತ್ತು ಪಡೆದು ಅವರಿಗೆ ಅಗತ್ಯ ನೆರವು ನೀಡಲಾಗುತ್ತಿದೆ ಎಂದರು.

ರಥಯಾತ್ರೆ ಸ್ಮರಣೆ: ಒಡಿಶಾದ ಪುರಿ ಜಗನ್ನಾಥ ರಥಯಾತ್ರೆ ಸ್ಮರಿಸಿದ ಮೋದಿ, 'ಈ ಯಾತ್ರೆಯು ಏಕ ಭಾರತ; ಶ್ರೇಷ್ಠ ಭಾರತ ತತ್ವಕ್ಕೆ ಸ್ಫೂರ್ತಿಯಾಗಿದೆ. ದೇಶದ ವಿವಿಧ ರಾಜ್ಯಗಳಲ್ಲಿ ಜಗನ್ನಾಥ ದೇವರ ಭಕ್ತರಿದ್ದು, ಇದೇ 20ರಂದು ಐತಿಹಾಸಿಕ ರಥೋತ್ಸವ ಜರುಗಲಿದೆ' ಎಂದು ಹೇಳಿದರು.

ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಜನರ ಸಾಧನೆಯನ್ನು ಮೆಲುಕು ಹಾಕಿದರು. 'ಅಲ್ಲಿ ಕೃಷಿಯೇ ಪ್ರಧಾನವಾಗಿದೆ. ಹಾಲಿನ ಸಮಸ್ಯೆ ಎದುರಿಸುತ್ತಿದ್ದ ಅಲ್ಲಿನವರು ಹೈನುಗಾರಿಕೆಗೆ ಒತ್ತು ನೀಡಿದರು. ಕಳೆದ ಮೂರು ವರ್ಷಗಳಲ್ಲಿ ಅಲ್ಲಿ 500 ಹಾಲು ಉತ್ಪಾದನಾ ಘಟಕಗಳು ಸ್ಥಾಪನೆಯಾಗಿವೆ. ಇದು ಹೊಸ ಶ್ವೇತ ಕ್ರಾಂತಿಯ ಸಂಕೇತವಾಗಿದೆ' ಎಂದರು.

ಜಪಾನ್‌ನ ಮಿಯಾವಾಕಿ ಫಾರೆಸ್ಟ್ ಮಾದರಿಯು ಭಾರತದಲ್ಲಿಯೂ ಜನಪ್ರಿಯವಾಗುತ್ತಿರುವ ಬಗ್ಗೆ ಪ್ರಧಾನಿ ಪ್ರಸ್ತಾಪಿಸಿದರು.

ಪಶ್ಚಿಮ ಬಂಗಾಳ: ಬಿಜೆಪಿ ಅಭ್ಯರ್ಥಿ ಮೈದುನನ ಕೊಲೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಜುಲೈ 8ರಂದು ಪಂಚಾಯಿತಿ ಚುನಾವಣೆ ನಡೆಯಲಿದೆ. ಈ ಮಧ್ಯೆ ಕೂಚ್‌ಬಿಹಾರ್ ಜಿಲ್ಲೆಯಲ್ಲಿ ಬಿಜೆಪಿ ಅಭ್ಯರ್ಥಿಯ ಮೈದುನನನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ಸಂಭು ದಾಸ್ (30) ಮೃತ ವ್ಯಕ್ತಿ. ಶನಿವಾರ ರಾತ್ರಿ ದುಷ್ಕರ್ಮಿಗಳು ದಾಸ್ ಅವರನ್ನು ಮನೆಯಿಂದ ಹೊರಬರುವಂತೆ ಕರೆದಿದ್ದರು. ಕೆಲ ಗಂಟೆಗಳ ನಂತರ ಸಮೀಪದ ಕೆರೆಯೊಂದರಲ್ಲಿ ಇವರ ಮೃತದೇಹ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿಸಿತ್ ಪ್ರಮಾಣಿಕ್ ಅವರು ದಾಸ್ ನಿವಾಸಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಬಳಿಕ ಮಾತನಾಡಿದ ಅವರು, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಬೆಂಬಲಿತ ದುಷ್ಕರ್ಮಿಗಳು ಈ ಕೃತ್ಯ ಎಸಗಿದ್ದಾರೆ. ಇಂಥ ಘಟನೆಗಳು ನಡೆದಾಗಲೆಲ್ಲಾ, ಪೊಲೀಸರು ಮತ್ತು ಆಡಳಿತಾರೂಢ ಪಕ್ಷದ ಬೆಂಬಲಿಗರು ಪ್ರೀತಿ ಮತ್ತು ಅನೈತಿಕ ಸಂಬಂಧದ ಕತೆ ಕಟ್ಟುತ್ತಾರೆ' ಎಂದು ಹೇಳಿದರು.

ಬಿಸಿಗಾಳಿ: 3 ದಿನಗಳಲ್ಲಿ 54 ಸಾವು

ಬಲಿಯಾ (ಉತ್ತರಪ್ರದೇಶ) (ಪಿಟಿಐ): ಕಳೆದ ಮೂರು ದಿನಗಳಲ್ಲಿ ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ 54 ರೋಗಿಗಳು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಜಿಲ್ಲಾ ಆಸ್ಪತ್ರೆಯ ದಾಖಲೆಗಳ ಪ್ರಕಾರ, ಮೃತಪಟ್ಟ 54 ರೋಗಿಗಳ ಪೈಕಿ ಶೇ 40ರಷ್ಟು ರೋಗಿಗಳು ಜ್ವರದಿಂದ ಬಳಲುತ್ತಿದ್ದರೆ, ಶೇ 60ರಷ್ಟು ರೋಗಿಗಳು ಇತರ ಕಾಯಿಲೆಗಳಿಂದ ಬಳಲುತ್ತಿದ್ದರು. ಬಲಿಯಾ ಜಿಲ್ಲೆಯಲ್ಲಿ ಬಿಸಿಗಾಳಿಯ ಆಘಾತದಿಂದ ಇದುವರೆಗೆ ಇಬ್ಬರು ಮಾತ್ರ ಸಾವಿಗೀಡಾಗಿದ್ದಾರೆ' ಎಂದು ಮುಖ್ಯ ವೈದ್ಯಾಧಿಕಾರಿ (ಸಿಎಂಒ) ಡಾ. ಜಯಂತ್ ಕುಮಾರ್ ಮಾಹಿತಿ ನೀಡಿದ್ದಾರೆ.

'ಆಸ್ಪತ್ರೆಯಲ್ಲಿ ನಿತ್ಯವೂ 125ರಿಂದ 135 ರೋಗಿಗಳು ದಾಖಲಾಗುತ್ತಿದ್ದು, ಸಿಬ್ಬಂದಿ ಮೇಲೆ ಒತ್ತಡವುಂಟಾಗುತ್ತಿದೆ' ಎಂದು ಮುಖ್ಯ ವೈದ್ಯಕೀಯ ಅಧೀಕ್ಷಕ ಡಾ. ಎಸ್.ಕೆ. ಯಾದವ್ ಹೇಳಿದ್ದಾರೆ.

'ಜೂನ್ 15ರಂದು ಜಿಲ್ಲಾ ಆಸ್ಪತ್ರೆಯಲ್ಲಿ ಒಟ್ಟು 154 ರೋಗಿಗಳು ದಾಖಲಾಗಿದ್ದರು. ಇದರಲ್ಲಿ ವಿವಿಧ ಕಾರಣಗಳಿಂದ ಅಂದೇ 23 ರೋಗಿಗಳು ಮೃತಪಟ್ಟಿದ್ದಾರೆ. ಜೂನ್ 16ರಂದು 20 ರೋಗಿಗಳು ಹಾಗೂ ಜೂನ್ 17ರಂದು 11 ರೋಗಿಗಳು ಸಾವಿಗೀಡಾಗಿದ್ದಾರೆ. ಮೃತರೆಲ್ಲರೂ 60 ವಯಸ್ಸಿಗಿಂತ ಮೇಲ್ಪಟ್ಟವರು' ಎಂದೂ ಅವರು ತಿಳಿಸಿದ್ದಾರೆ.

'ಆಸ್ಪತ್ರೆಯಲ್ಲಿ ಜೂನ್ 15ರಿಂದ 17ರವರೆಗೆ ಒಟ್ಟು 400 ರೋಗಿಗಳು ದಾಖಲಾಗಿದ್ದು, ನಿತ್ಯವೂ ಏಳರಿಂದ ಒಂಬತ್ತು ಮಂದಿ ಮೃತಪಡುತ್ತಿದ್ದಾರೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಲಖನೌದಿಂದ ಆರೋಗ್ಯ ಇಲಾಖೆತ ತಂಡವೊಂದು ಬಲಿಯಾಕ್ಕೆ ಭೇಟಿ ನೀಡಿ, ಪರೀಕ್ಷೆಗಳನ್ನು ನಡೆಸಲಿದ್ದು, ಬಳಿಕ ಸಾವಿಗೆ ನಿಖರ ಕಾರಣ ತಿಳಿದುಬರಲಿದೆ' ಎಂದು ಆರೋಗ್ಯ ಇಲಾಖೆಯ ಆಜಂಘಡದ ವಿಭಾಗೀಯ ಹೆಚ್ಚುವರಿ ನಿರ್ದೇಶಕ ಒ.ಪಿ. ತಿವಾರಿ ಶನಿವಾರ ತಿಳಿಸಿದ್ದರು.

'ಬಹುಶಃ ಯಾವುದಾದರೂ ಕಾಯಿಲೆ ಇರಬಹುದು. ಅದನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲ. ಸದ್ಯಕ್ಕೆ ಹೊರಗೆ ಉಷ್ಣಾಂಶ ಕೂಡಾ ಹೆಚ್ಚಿದೆ. ಬೇಸಿಗೆ ಮತ್ತು ಚಳಿಗಾಲದಲ್ಲಿ ಮಧುಮೇಹ ರೋಗಿಗಳು, ಉಸಿರಾಟದ ತೊಂದರೆ ಇರುವವರು ಹಾಗೂ ರಕ್ತದೊತ್ತಡ ಇರುವ ರೋಗಿಗಳಲ್ಲಿ ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇರುತ್ತದೆ' ಎಂದೂ ಅವರು ವಿಶ್ಲೇಷಿಸಿದ್ದಾರೆ.

'ಜಿಲ್ಲಾ ಆಸ್ಪತ್ರೆಯ ರೋಗಿಗಳಿಗೆ ಯಾವುದೇ ಸಮಸ್ಯೆ ಆಗಬಾರದು. ಅವರಿಗೆ ಏರ್ ಕೂಲರ್, ಫ್ಯಾನ್ ಮತ್ತು ಎ.ಸಿಗಳ ವ್ಯವಸ್ಥೆ ಮಾಡಬೇಕು. ಇದರ ಜತೆಗೆ ಆಸ್ಪತ್ರೆಯಲ್ಲಿ 15 ಹಾಸಿಗೆಗಳನ್ನು ಹೆಚ್ಚಳ ಮಾಡಿ' ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ರವೀಂದ್ರ ಕುಮಾರ್ ಆದೇಶ ಹೊರಡಿಸಿದ್ದಾರೆ.

ವೈದ್ಯಕೀಯ ಅಧೀಕ್ಷಕ ಬದಲು:

ಈ ಮಧ್ಯೆ, ಸಾವಿಗೀಡಾದವರ ಕುರಿತು ನಿರ್ಲಕ್ಷ್ಯದ ಹೇಳಿಕೆ ನೀಡಿರುವ ಬಲಿಯಾ ಜಿಲ್ಲಾ ಆಸ್ಪತ್ರೆಯ ಮುಖ್ಯ ವೈದ್ಯಕೀಯ ಅಧೀಕ್ಷಕ ಡಾ. ದಿವಾಕರ್ ಸಿಂಗ್ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ, ಆಂಜಂಘಡಕ್ಕೆ ಕಳುಹಿಸಲಾಗಿದೆ. ಡಾ.ಎಸ್.ಕೆ. ಯಾದವ್ ಅವರನ್ನು ಮುಖ್ಯ ವೈದ್ಯಕೀಯ ಅಧೀಕ್ಷಕ ಸ್ಥಾನಕ್ಕೆ ಉಸ್ತುವಾರಿ ನೀಡಲಾಗಿದೆ' ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಗ್ಯ ಖಾತೆಯನ್ನೂ ಹೊಂದಿರುವ ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಅವರು, ಆಸ್ಪತ್ರೆಗಳಿಗೆ ದಾಖಲಾಗುವ ಪ್ರತಿ ರೋಗಿಯ ತಪಾಸಣೆ ನಡೆಸಿ ಅವರಿಗೆ ಸೂಕ್ತ ಚಿಕಿತ್ಸೆ ನೀಡಬೇಕೆಂದು ಮುಖ್ಯ ವೈದ್ಯಾಧಿಕಾರಿಗಳು ಹಾಗೂ ವೈದ್ಯಕೀಯ ಅಧೀಕ್ಷಕರಿಗೆ ಸೂಚನೆ ನೀಡಿದ್ದಾರೆ.

ಜಾರ್ಖಂಡ್: ಜೂನ್ 21ರವರೆಗೆ ಬೇಸಿಗೆ ರಜೆ ಮತ್ತೆ ವಿಸ್ತರಣೆ

ರಾಂಚಿ (ಪಿಟಿಐ): ಬಿಸಿಗಾಳಿಯ ವಾತಾವರಣದ ಕಾರಣ, ಜಾರ್ಖಂಡ್ ಸರ್ಕಾರವು 8ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಬೇಸಿಗೆ ರಜೆಯನ್ನು ಜೂನ್ 21ರವರೆಗೆ ಪುನಃ ವಿಸ್ತರಿಸಿದೆ. ಈ ವರ್ಷ ರಾಜ್ಯ ಸರ್ಕಾರವು ವಿದ್ಯಾರ್ಥಿಗಳಿಗೆ ಮೂರನೇ ಬಾರಿಗೆ ಬೇಸಿಗೆ ರಜೆಯನ್ನು ವಿಸ್ತರಿಸಿದೆ. ಈ ಹಿಂದೆ ಜೂನ್ 11 ಮತ್ತು ಜೂನ್ 14ರಂದು ಸರ್ಕಾರವು ಈ ರಜೆಯನ್ನು ವಿಸ್ತರಿಸಿತ್ತು. ಬೇಸಿಗೆ ರಜೆಯ ಬಳಿಕ ಜೂನ್ 19ರಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗೆ ಶಾಲೆ ಆರಂಭವಾಗಬೇಕಿತ್ತು.

ಶಿವಾಜಿ ವಿರುದ್ಧ ಖುಷ್ಬೂ ಆಕ್ರೋಶ

ಚೆನ್ನೈ (ಪಿಟಿಐ): ಡಿಎಂಕೆ ನಾಯಕ ಶಿವಾಜಿ ಕೃಷ್ಣಮೂರ್ತಿ ಅವರು ತಮ್ಮ ಬಗ್ಗೆ ನೀಡಿರುವ ಹೇಳಿಕೆಯನ್ನು ಬಿಜೆಪಿ ನಾಯಕಿ ಖುಷ್ಬೂ ಸುಂದರ್ ಅವರು ಭಾನುವಾರ ವಿರೋಧಿಸಿದ್ದಾರೆ. ಶಿವಾಜಿ ಅವರ ಹೇಳಿಕೆಯು ಕೀಳುಮಟ್ಟದ ಅಭಿರುಚಿಯಿಂದ ಕೂಡಿದೆ ಎಂದಿದ್ದಾರೆ.

ಶಿವಾಜಿ ಅವರು ಸಾರ್ವಜನಿಕ ಸಭೆಯೊಂದರಲ್ಲಿ ಖುಷ್ಬೂ ಕುರಿತಂತೆ ಅವಹೇಳನಕಾರಿ ಹೇಳಿಕೆ ನೀಡಿದ್ದರು. ಕಾರ್ಯಕ್ರಮದ ವಿಡಿಯೊ ತುಣುಕನ್ನು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿರುವ ಖುಷ್ಬೂ, 'ಶಿವಾಜಿಯ ಕೀಳು ಅಭಿರುಚಿಯ ಹೇಳಿಕೆಗಳು ಡಿಎಂಕೆಯ ರಾಜಕೀಯ ಸಂಸ್ಕೃತಿಯನ್ನು ತೋರುತ್ತದೆ. ಆ ಪಕ್ಷದಲ್ಲಿ ಶಿವಾಜಿಯಂಥವರು ಸಾಕಷ್ಟು ಜನರಿದ್ದಾರೆ' ಎಂದು ಹೇಳಿದರು.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಟ್ವೀಟ್ ಟ್ಯಾಗ್ ಮಾಡಿರುವ ಅವರು, 'ಶಿವಾಜಿ ನನ್ನನ್ನು ಮಾತ್ರ ನಿಂದಿಸಿಲ್ಲ. ನಿಮ್ಮನ್ನು ಮತ್ತು ನಿಮ್ಮ ತಂದೆ (ಎಂ. ಕರುಣಾನಿಧಿ) ಅವರನ್ನೂ ನಿಂದಿಸಿದ್ದಾರೆ. ಶಿವಾಜಿಗೆ ಹೆಚ್ಚು ಅವಕಾಶ ನೀಡಿದಷ್ಟೂ ನಿಮ್ಮ ರಾಜಕೀಯ ಅವಕಾಶಗಳು ಕಡಿಮೆ ಆಗುತ್ತವೆ' ಎಂದಿದ್ದಾರೆ.

'ಕೇಂದ್ರದಿಂದ ಯುವಜನರ ಕನಸು ನುಚ್ಚುನೂರು'

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಾರ್ವಜನಿಕ ವಲಯದ ಉದ್ಯಮಗಳ (ಪಿಎಸ್‌ಯು) ಎರಡು ಲಕ್ಷ ಉದ್ಯೋಗಗಳನ್ನು ಕಡಿತಗೊಳಿಸಿದೆ. ಮೀಸಲಾತಿ ವ್ಯವಸ್ಥೆಯನ್ನು ಕೈಬಿಟ್ಟು ಗುತ್ತಿಗೆ ನೌಕರಿಗಳ ಸಂಖ್ಯೆಯನ್ನು ಹೆಚ್ಚಿಸಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಆರೋಪಿಸಿದರು.

ಆಡಳಿತಾರೂಢ ಬಿಜೆಪಿ, ಕೆಲವೇ ಕೆಲವು ಕೋಟ್ಯಧಿಪತಿಗಳ ಅನುಕೂಲಕ್ಕಾಗಿ ಲಕ್ಷಾಂತರ ಯುವಜನರ ಕನಸನ್ನು ನುಚ್ಚುನೂರು ಮಾಡುತ್ತಿದೆ. ಭಾರತದ ಹೆಮ್ಮೆಯಾಗಿರುವ ಮತ್ತು ಪ್ರತಿಯೊಬ್ಬ ಯುವಕ, ಯುವತಿಯೂ ಉದ್ಯೋಗ ಪಡೆಯಬೇಕೆಂಬ ಕನಸು ಕಾಣುವ ಸಾರ್ವಜನಿಕ ವಲಯದ ಉದ್ದಿಮೆಗಳು ಸರ್ಕಾರದ ಆದ್ಯತೆಯಾಗಿ ಉಳಿದಿಲ್ಲ ಎಂದು ಹೇಳಿದರು.

ಈ ಕುರಿತಂತೆ ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, 'ದೇಶದ ಪಿಎಸ್‌ಯುಗಳಲ್ಲಿನ ಉದ್ಯೋಗಗಳ ಸಂಖ್ಯೆ 2014ರಲ್ಲಿ 16.9 ಲಕ್ಷ ಇತ್ತು. 2022ರಲ್ಲಿ 14.6 ಲಕ್ಷಕ್ಕೆ ಇಳಿಕೆಯಾಗಿದೆ. ಉದ್ಯೋಗಾವಕಾಶಗಳು ಕಡಿಮೆಯಾಗುವುದು ದೇಶದ ಪ್ರಗತಿಯ ಸಂಕೇತವೇ' ಎಂದಿದ್ದಾರೆ.

'ವಾರ್ಷಿಕ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ ಹೊರತಾಗಿಯೂ ಸರ್ಕಾರ ಎರಡು ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಕಡಿತಗೊಳಿಸಿದೆ. ಈ ಮಧ್ಯೆ ಈ ಸಂಸ್ಥೆಗಳಲ್ಲಿನ ಗುತ್ತಿಗೆ ನೌಕರಿಗಳ ಸಂಖ್ಯೆಯನ್ನು ಬಹುತೇಕ ದ್ವಿಗುಣಗೊಳಿಸಿದೆ. ಇದು ಸಂವಿಧಾನಾತ್ಮಕ ಮೀಸಲಾತಿ ಹಕ್ಕನ್ನು ಕಸಿದುಕೊಳ್ಳುವ ಮಾರ್ಗವೇ? ಈ ಸಂಸ್ಥೆಗಳನ್ನು ಖಾಸಗೀಕರಣ ಮಾಡುವ ಹುನ್ನಾರವೇ' ಎಂದು ಪ್ರಶ್ನಿಸಿದ್ದಾರೆ. ಪಿಎಸ್‌ಯುಗಳಲ್ಲಿನ ಉದ್ಯೋಗಗಳನ್ನು ಕಸಿದುಕೊಂಡು, ಕೈಗಾರಿಕೋದ್ಯಮಿಗಳ ಸಾಲವನ್ನು ಮನ್ನಾ ಮಾಡಲಾಗಿದೆ. 'ಇದೆಂಥ ಅಮೃತಕಾಲ?' ಎಂದು ಟೀಕಿಸಿದ್ದಾರೆ. 'ಸರ್ಕಾರವು ಪಿಎಸ್‌ಯುಗಳಿಗೆ ಸರಿಯಾದ ಪ್ರೋತ್ಸಾಹ ಮತ್ತು ಬೆಂಬಲ ನೀಡಿದಲ್ಲಿ ಅವು ಆರ್ಥಿಕತೆ ಸುಧಾರಿಸುವ ಮತ್ತು ಉದ್ಯೋಗಗಳ ಸಂಖ್ಯೆ ಹೆಚ್ಚಿಸುವ ಸಾಮರ್ಥ್ಯ ಹೊಂದಿವೆ. ಸಾರ್ವಜನಿಕ ವಲಯದ ಉದ್ದಿಮೆಗಳು ಈ ದೇಶದ ಆಸ್ತಿ' ಎಂದು ಹೇಳಿದ್ದಾರೆ.

ಬಿಪೊರ್‌ಜಾಯ್ ಪರಿಣಾಮ: ಪಾಲಿ ಜಿಲ್ಲೆಯಲ್ಲಿ ಆರು ಜನರ ರಕ್ಷಣೆ

ರಾಜಸ್ಥಾನದ 3 ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ

ಜೈಪುರ (ಪಿಟಿಐ): ಬಿಪೊರ್‌ಜಾಯ್ ಚಂಡಮಾರುತದ ಪರಿಣಾಮ ರಾಜಸ್ಥಾನದ ಜಲೋರ್, ಸಿರೋಹಿ ಮತ್ತು ಬಾಡ್ಮೇರ್ ಜಿಲ್ಲೆಗಳಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಪ್ರವಾಹ ಪರಿಸ್ಥಿತಿ ಎದುರಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಪಾಲಿ ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಜಲಾವೃತವಾದ ಪ್ರದೇಶಗಳಲ್ಲಿ ಸಿಲುಕಿದ್ದ ಆರು ಜನರನ್ನು ರಾಜ್ಯ ವಿಪತ್ತು ನಿರ್ವಹಣಾ ಪಡೆ ರಕ್ಷಣೆ ಮಾಡಿದೆ. ಇದುವರೆಗೆ ಯಾವುದೇ ಜೀವ ಹಾನಿ ಸಂಭವಿಸಿಲ್ಲ. ಯಾವುದೇ ಸಂಭವನೀಯ ಅಪಾಯ ಎದುರಿಸಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ರಕ್ಷಣಾ ಪಡೆಗಳನ್ನು ಸನ್ನದ್ಧ ಸ್ಥಿತಿಯಲ್ಲಿರಿಸಲಾಗಿದೆ ಎಂದು ರಾಜ್ಯ ವಿಪತ್ತು ಮತ್ತು ಪರಿಹಾರ ಕಾರ್ಯದರ್ಶಿ ಪಿ.ಸಿ. ಕಿಶನ್ ಹೇಳಿದ್ದಾರೆ.

ರಾಜಸ್ಥಾನದ ಜಲೋರ್ ಜಿಲ್ಲೆಯ ಭಿನ್ಮಲ್ ಗ್ರಾಮದ ತಗ್ಗು ಪ್ರದೇಶಗಳಲ್ಲಿ ಪ್ರವಾಹದ ನಡುವೆ ಸಿಲುಕಿದ್ದ ಜನರನ್ನು ಎಸ್‌ಡಿಆರ್‌ಎಫ್ ಸಿಬ್ಬಂದಿ ಭಾನುವಾರ ರಕ್ಷಣೆ ಮಾಡಿದರು – ಪಿಟಿಐ ಚಿತ್ರ

ಬಾಡ್ಮೇರ್ ಜಿಲ್ಲೆಯಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ನದಿಗಳಲ್ಲಿ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ನಾಲ್ಕೈದು ಸಣ್ಣ ಅಣೆಕಟ್ಟೆಗಳಿಗೆ ಹಾನಿಯಾಗಿದೆ. ಪಿಂಡವಾಡ, ಆಬು ರೋಡ್ ಮತ್ತು ರೇವದರ್‌ನಲ್ಲಿ ದೊಡ್ಡ ಅಣೆಕಟ್ಟುಗಳು ಭರ್ತಿಯಾಗಿದ್ದು, ಜಲಾಶಯಗಳಿಂದ ನೀರು ಹೊರ ಬಿಡಲಾಗುತ್ತಿದೆ.

ಹವಾಮಾನ ಇಲಾಖೆಯ ಪ್ರಕಾರ, ದಕ್ಷಿಣ ರಾಜಸ್ಥಾನ ಮತ್ತು ನೆರೆಹೊರೆಯ ಪ್ರದೇಶಗಳಲ್ಲಿ ಬಿಪೊರ್‌ಜಾಯ್ ಚಂಡಮಾರುತವು ಬೆಳಿಗ್ಗೆ 10 ಕಿ.ಮೀ ವೇಗದಲ್ಲಿ ಪೂರ್ವ–ಈಶಾನ್ಯ ದಿಕ್ಕಿನತ್ತ ಸಾಗಿತ್ತು. ಜೋಧ್‌ಪುರ, ಅಜ್ಮೀರ್, ಜೈಪುರ, ಕೋಟಾ ವಿಭಾಗಗಳಲ್ಲಿ ಭಾರಿ ಮಳೆಯಾಗುವ ಸೂಚನೆ ಇದೆ. ಮುಂದಿನ 24 ತಾಸುಗಳಲ್ಲಿ ರಾಜಸ್ಥಾನದ ಪೂರ್ವ ಮತ್ತು ಪಶ್ಚಿಮದ ಕೆಲವು ಭಾಗಗಳಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆ ಇದೆ.

ಎಲ್ಲೆಲ್ಲಿ ಎಷ್ಟು ಮಳೆ: ಭಾನುವಾರ ಬೆಳಿಗ್ಗೆ 9.30ಕ್ಕೆ ಕೊನೆಗೊಂಡಂತೆ ಕಳೆದ 24 ತಾಸುಗಳಲ್ಲಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದೆ. ಜಲೋರ್ ಜಿಲ್ಲೆಯ ಅಹೋರ್‌ನಲ್ಲಿ 471 ಮಿ.ಮೀ, ಜಲೋರ್‌ನಲ್ಲಿ 456 ಮಿ.ಮೀ, ಮೌಂಟ್ ಅಬುನಲ್ಲಿ 360 ಮಿ.ಮೀ, ಚಿತಲ್‌ವಾನಾದಲ್ಲಿ 338 ಮಿ.ಮೀ, ಜಸ್ವಂತಪುರ 332 ಮಿ.ಮೀ, ರಾಣಿವಾಡಾ 322 ಮಿ.ಮೀ, ಶಿವಗಂಜ್ 315 ಮಿ.ಮೀ, ಸುಮೇರ್‌ಪುರ 270 ಮಿ.ಮೀ, ರಾಣಿಯಲ್ಲಿ 249 ಮಿ.ಮೀ ಹಾಗೂ ಬಾಳಿ ಪಟ್ಟಣದಲ್ಲಿ240 ಮಿ.ಮೀ ಮಳೆ ದಾಖಲಾಗಿದೆ ಎಂದು ವಿಪತ್ತು ನಿರ್ವಹಣಾ ಇಲಾಖೆ ತಿಳಿಸಿದೆ.

ಲಕ್ಷ ಜನರ ಸ್ಥಳಾಂತರ

ನವದೆಹಲಿ (ಪಿಟಿಐ): ಗುಜರಾತ್‌ನ ಕಛ್ ಮತ್ತು ಸೌರಾಷ್ಟ್ರ ಪ್ರದೇಶಕ್ಕೆ ಬಿಪೊರ್‌ಜಾಯ್ ಚಂಡಮಾರುತವು ಅಪ್ಪಳಿಸುವ ಮೂರು ದಿನಗಳ ಮೊದಲು ಲಕ್ಷಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿತ್ತು. ಇದರಿಂದಾಗಿ ಈವರೆಗೆ ಯಾವುದೇ ಸಾವು–ನೋವು ಉಂಟಾಗಲಿಲ್ಲ. ಇದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವಣ ಉತ್ತಮ ಸಮನ್ವಯಕ್ಕೆ ಸಾಕ್ಷಿ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬಿಪೊರ್‌ಜಾಯ್ ಚಂಡಮಾರುತವನ್ನು ನಿಭಾಯಿಸಿದ ರೀತಿಯು ವಿಪತ್ತು ನಿರ್ವಹಣೆಗೆ ಒಂದು ಅತ್ಯುತ್ತಮ ಉದಾಹರಣೆ ಎಂದೂ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಚಂಡಮಾರುತದ ಹಾನಿ ತಡೆಯುವ ಸಿದ್ಧತೆಗಳ ಮೇಲ್ವಿಚಾರಣೆಗಾಗಿಯೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಲಾ ಒಬ್ಬ ಸಚಿವರನ್ನು ನಿಯೋಜಿಸಿದ್ದವು. ಪ್ರಧಾನಿ ಮೋದಿ ಅವರು ಪರಿಸ್ಥಿತಿ ಖುದ್ದು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದರು' ಎಂದು ಅವರು ಹೇಳಿದ್ದಾರೆ.

ಗೀತಾ ಪ್ರೆಸ್‌ಗೆ ಗಾಂಧಿ ಶಾಂತಿ ಪ್ರಶಸ್ತಿ

ಒಂದನೇ ಪುಟದಿಂದ...

ಗಾಂಧೀಜಿ ಜತೆಗೆ ಭಿನ್ನಾಭಿಪ್ರಾಯ: ಹನುಮಾನ್ ಪ್ರಸಾದ್ ಪೋದ್ದಾರ್ ಅವರು ಗಾಂಧೀಜಿಯ ನಿಕಟವರ್ತಿ ಯಾಗಿದ್ದರು. ದಶಕಗಳ ಕಾಲ ಅವರು ಗಾಂಧಿ ಜತೆಗೆ ಪತ್ರ ವ್ಯವಹಾರ ಹೊಂದಿದ್ದರು. ಬಳಿಕ, ಗಾಂಧಿ ಜತೆಗೆ ಬಿನ್ನಾಭಿಪ್ರಾಯ ತಳೆದರು. ಅಷ್ಟೇ ಅಲ್ಲ, ದೇವಾಲಯಗಳಲ್ಲಿ ದಲಿತರ ಪ್ರವೇಶ ಮತ್ತು ಪಾಕಿಸ್ತಾನ ಸ್ಥಾಪನೆಯಂಥ ವಿಷಯಗಳಲ್ಲೂ ಪೋದ್ದಾರ್ ಭಿನ್ನಾಭಿಪ್ರಾಯ ಹೊಂದಿದ್ದರು.

ಈ ಪ್ರಶಸ್ತಿ ನೀಡುವುದು 'ದೊಡ್ಡ ವ್ಯಂಗ್ಯ' ಎಂದು 'ಗೀತಾ ಪ್ರೆಸ್' ಹಾಗೂ 'ಮೇಕಿಂಗ್ ಆಫ್ ಹಿಂದೂ ಇಂಡಿಯಾ' ಕೃತಿಗಳ ಲೇಖಕ ಅಕ್ಷಯ ಮುಕುಲ್ ಅಭಿಪ್ರಾಯಪಟ್ಟಿದ್ದಾರೆ.

'ಗೀತಾ ಪ್ರೆಸ್'ನ ಸಂಸ್ಥಾಪಕ ಸಂಪಾದಕರು ಮೊದಲು ಗಾಂಧಿ ಅವರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು ಎಂಬುದು ನಿಜ. ಅಷ್ಟೇ ಅಲ್ಲ ಪ್ರಕಟಣೆಯ ವಿಚಾರಕ್ಕೆ ಸಂಬಂಧಿಸಿದಂತೆ ಜಾಹೀರಾತು ಪಡೆಯಬಾರದು ಎನ್ನುವ ಗಾಂಧಿ ಅವರ ಸಲಹೆಯನ್ನೂ ಪಾಲಿಸಿದ್ದರು. ಗಾಂಧೀಜಿ ಕೂಡಾ 'ಗೀತಾಪ್ರೆಸ್'ನ ಮಾಸಿಕ ಪತ್ರಿಕೆ 'ಕಲ್ಯಾಣ್'ದಲ್ಲಿ ಕೆಲ ಲೇಖನಗಳನ್ನೂ ಬರೆದಿದ್ದರು. ಆದರೆ 1930– 1940ರನಡುವೆ ಇಬ್ಬರ ಸಂಬಂಧವು ಹದಗೆಟ್ಟಿತು. ದೇಶ ವಿಭಜನೆಗೂ ಮುನ್ನ ಗಾಂಧೀಜಿ ಅವರ ಮೇಲೆ 'ಗೀತಾಪ್ರೆಸ್' ನಿರ್ದಯವಾಗಿ ದಾಳಿ ಮಾಡಿತು' ಎಂದೂ ಮುಕಲ್ ಹೇಳಿದ್ದಾರೆ.

ಭಾರತದ ಜೋಡಿಗೆ ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್ ಡಬಲ್ಸ್ ಸೂಪರ್ 1000 ಕಿರೀಟ

ಸಾತ್ವಿಕ್–ಚಿರಾಗ್ ಚಾರಿತ್ರಿಕ ಸಾಧನೆ

ಜಕಾರ್ತ (ಪಿಟಿಐ): 'ವಿಶ್ವ ಚಾಂಪಿಯನ್ ಆಟಗಾರರಾಗಿರುವ ಆರನ್ ಚಿಯಾ ಮತ್ತು ಸೊಹ ವೂಯಿ ಯೀಕಾ ಅವರನ್ನು ಮಣಿಸಿರುವುದು ಈ ಟೂರ್ನಿ ಜಯಿಸಿದ್ದಕ್ಕಿಂತಲೂ ದೊಡ್ಡ ಸಾಧನೆ'

ಭಾನುವಾರ ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್ ಪುರುಷರ ಡಬಲ್ಸ್ ಪ್ರಶಸ್ತಿ ಜಯಿಸಿದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಅವರ ಹೆಮ್ಮೆಯ ನುಡಿಗಳಿವು.

ಈ ಜೋಡಿಯು ಫೈನಲ್ ಪಂದ್ಯದಲ್ಲಿ 21–17, 21–18ರ ನೇರ ಗೇಮ್‌ಗಳಲ್ಲಿ ಮಲೇಷ್ಯಾದ ಆರನ್ ಚಿಯಾ ಮತ್ತು ಸೊಹ ವೂಯಿ ಯೀಕಾ ವಿರುದ್ಧ ಜಯಗಳಿಸಿತು.

ಇದರೊಂದಿಗೆ ಸೂಪರ್ 1000 ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿ ಜಯಿಸಿದ ಭಾರತದ ಮೊದಲ ಜೋಡಿ ಎಂಬ ಚಾರಿತ್ರಿಕ ಸಾಧನೆ ಮಾಡಿತು.

ಸಾತ್ವಿಕ್ ಮತ್ತು ಚಿರಾಗ್ ಜೋಡಿಯು ವಿಶ್ವ ರ‍್ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿದೆ. ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನ ಜಯಿಸಿದ್ದರು. ಹೋದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಸಾಧನೆ ಮಾಡಿದ್ದರು. ಥಾಮಸ್ ಕಪ್ ಟೂರ್ನಿಯಲ್ಲಿ ಗೆದ್ದ ಭಾರತ ತಂಡದಲ್ಲಿಯೂ ಇದ್ದರು. ಈಚೆಗೆ ದುಬೈನಲ್ಲಿ ನಡೆದಿದ್ದ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರು.

ಟೂರ್ನಿಯ ಸೆಮಿಫೈನಲ್‌ನಲ್ಲಿ ಸಾತ್ವಿಕ್ ಮತ್ತು ಚಿರಾಗ್ ಅವರು ಕೊರಿಯಾದ ಕಾಂಗ್ ಮಿನ್ ಯೂಕ್ ಮತ್ತು ಸಿಯೊ ಸೆಂಗ್ ಜೇ ವಿರುದ್ಧ ಜಯಿಸಿದ್ದರು.

ಬಿಡಬ್ಲ್ಯುಎಫ್ (ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್) ವಿಶ್ವ ಟೂರ್ ಸರಣಿಯನ್ನು ಆರು ಹಂತಗಳಲ್ಲಿ ವಿಂಗಡಿಸಿದೆ. ಅದರಲ್ಲಿ ವಿಶ್ವ ಟೂರ್ ಫೈನಲ್ಸ್, ನಾಲ್ಕು ಸೂಪರ್ 1000, ಆರು ಸೂಪರ್ 750, ಏಳು ಸೂಪರ್ 500 ಮತ್ತು 11 ಸೂಪರ್ 300 ಟೂರ್ನಿಗಳನ್ನು ನಡೆಸಲಾಗುತ್ತದೆ. ಅಲ್ಲದೇ ಇನ್ನೊಂದು ವಿಭಾಗವಾದ ಬಿಡಬ್ಲ್ಯುಎಫ್ ಟೂರ್ ಸೂಪರ್ 100 ಹಂತದಲ್ಲಿಯೂ ರ‍್ಯಾಂಕಿಂಗ್ ಪಾಯಿಂಟ್ಸ್‌ಗಳನ್ನು ನೀಡಲಾಗುತ್ತದೆ.

ಈ ಪ್ರತಿಯೊಂದು ಟೂರ್ನಿಗೂ ಪ್ರತ್ಯೇಕ ಅಂಕಗಳು ಹಾಗೂ ನಗದು ಪ್ರಶಸ್ತಿ ನೀಡಲಾಗುತ್ತದೆ. ಇವೆಲ್ಲದರ ಪೈಕಿ ಸೂಪರ್ 1000 ಹಂತವು ಉನ್ನತವಾದದ್ದು.

ಚಿರಾಗ್ ಶೆಟ್ಟಿ– ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿಯ ಸಂಭ್ರಮ –ಎಪಿ ಚಿತ್ರ

ಸಿಂಗಲ್ಸ್‌ನಲ್ಲಿ ವಿಕ್ಟರ್, ಚೆನ್‌ಗೆ ಪ್ರಶಸ್ತಿ

ವಿಕ್ಟರ್ ಆಕ್ಸೆಲ್‌ಸನ್

ಜಕಾರ್ತ (ಎಎಫ್‌ಪಿ): ವಿಶ್ವದ ಅಗ್ರಕ್ರಮಾಂಕದ ಆಟಗಾರ, ಡೆನ್ಮಾರ್ಕ್‌ನ ವಿಕ್ಟರ್ ಆಕ್ಸೆಲ್‌ಸನ್ ಅವರು ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಮೂರನೇ ಬಾರಿ ಚಾಂಪಿಯನ್ ಆದರು.

ಫೈನಲ್‌ನಲ್ಲಿ ವಿಕ್ಟರ್ ಅವರು ವಿಶ್ವದ ಎರಡನೇ ರ‍್ಯಾಂಕ್ ಆಟಗಾರ, ಆತಿಥೇಯ ದೇಶದ ಆಂಥನಿ ಸಿನಿಸುಕ ಗಿಂಟಿಂಗ್ ಅವರನ್ನು 21–14, 21–13ರಿಂದ ಮಣಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಚೀನಾದ ಚೆನ್ ಯು ಫಿ ಅವರು ಸ್ಪೇನ್ ದೇಶದ ಕರೋಲಿನಾ ಮರಿನ್ ಅವರನ್ನು 21–18, 21–19 ನೇರ ಗೇಮ್‌ಗಳಿಂದ ಮಣಿಸಿ ಪ್ರಶಸ್ತಿ ಗೆದ್ದರು.

ಮಹಿಳೆಯರ ಡಬಲ್ಸ್‌ನಲ್ಲಿ ದಕ್ಷಿಣ ಕೊರಿಯಾದ ಬೇಕ್ ಹಾ ನಾ ಮತ್ತು ಲೀ ಸೊ ಹೀ ಜೋಡಿಯು 22-20, 21-10ರಿಂದ ಜಪಾನ್‌ನ ಸಯಾಕ ಹಿರೋಟಾ ಮತ್ತು ಯುಕಿ ಫುಕುಶಿಮಾ ಅವರನ್ನು ಸೋಲಿಸಿ ಚಾಂಪಿಯನ್ ಆಯಿತು.

ಮಿಶ್ರ ಡಬಲ್ಸ್‌ನಲ್ಲಿ ಚೀನಾದ ಜುವಾಂಗ್ ಯಾಕಿಯಾಂಗ್ ಮತ್ತು ಝೆಂಗ್ ಸಿ ವೇ ಜೋಡಿಯು 21–14, 21–11ರಿಂದ ಜಪಾನಿನ ಯುಟಾ ವಟನಾಬೆ ಮತ್ತು ಅರಿಸಾ ಹಿಗಾಶಿನೊ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದಿತು.

ಇಂಟರ್‌ಕಾಂಟಿನೆಂಟಲ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದ ಭಾರತ ತಂಡ –ಎಐಎಫ್‌ಎಫ್ ಟ್ವಿಟರ್ ಚಿತ್ರ

ಭಾರತದ ಮುಡಿಗೆ ಕಿರೀಟ

ಇಂಟರ್‌ಕಾಂಟಿನೆಂಟಲ್ ಕಪ್ ಫುಟ್‌ಬಾಲ್ ಟೂರ್ನಿ

ಭುವನೇಶ್ವರ (ಪಿಟಿಐ): ಫಿಫಾ ರ‍್ಯಾಂಕಿಂಗ್‌ನಲ್ಲಿ ತನಗಿಂತ ಮೇಲಿನ ಸ್ಥಾನದಲ್ಲಿರುವ ಲೆಬನಾನ್ ತಂಡವನ್ನು 2–0 ಗೋಲುಗಳಿಂದ ಮಣಿಸಿದ ಭಾರತ ತಂಡ, ಇಂಟರ್‌ಕಾಂಟಿನೆಂಟಲ್ ಕಪ್ ಫುಟ್‌ಬಾಲ್ ಟೂರ್ನಿಯನ್ನು ಗೆದ್ದುಕೊಂಡಿತು.

ಕಳಿಂಗಾ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಕಿಕ್ಕಿರಿದಿದ್ದ ಪ್ರೇಕ್ಷಕರ ಮುಂದೆ ನಡೆದ ಫೈನಲ್‌ನಲ್ಲಿ ಗೋಲು ಗಳಿಸಿದ ನಾಯಕ ಸುನಿಲ್ ಚೆಟ್ರಿ (46ನೇ ನಿ.) ಮತ್ತು ಲಾಲ್‌ಲಿಯಾನ್‌ಜುವಾಲ ಚಾಂಗ್ಟೆ (66ನೇ ನಿ.) ಅವರು ಆತಿಥೇಯ ತಂಡದ ಗೆಲುವಿನ ರೂವಾರಿ ಎನಿಸಿಕೊಂಡರು.

ನಾಲ್ಕು ರಾಷ್ಟ್ರಗಳು ಪಾಲ್ಗೊಂಡಿದ್ದ ಟೂರ್ನಿಯಲ್ಲಿ ಅಜೇಯ ಸಾಧನೆಯೊಂದಿಗೆ ಭಾರತ ಕಿರೀಟ ಮುಡಿಗೇರಿಸಿಕೊಂಡಿದೆ.

ಇಂಟರ್‌ಕಾಂಟಿನೆಂಟಲ್ ಕಪ್‌ನಲ್ಲಿ ಭಾರತಕ್ಕೆ ಲಭಿಸಿದ ಎರಡನೇ ಟ್ರೋಫಿ ಇದು. ಈ ಹಿಂದೆ 2018 ರಲ್ಲಿ ಚೊಚ್ಚಲ ಟೂರ್ನಿಯನ್ನು ಗೆದ್ದುಕೊಂಡಿತ್ತು. ಫಿಫಾ ರ‍್ಯಾಂಕಿಂಗ್‌ನಲ್ಲಿ ಭಾರತ ಮತ್ತು ಲೆಬನಾನ್ ತಂಡಗಳು ಕ್ರಮವಾಗಿ 101 ಹಾಗೂ 99ನೇ ಸ್ಥಾನ ಹೊಂದಿವೆ. ಈ ಟೂರ್ನಿ ಗೆದ್ದದ್ದರಿಂದ ನೂತನ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರತ 100ರ ಒಳಗಿನ ಸ್ಥಾನ ಪಡೆಯಲಿದೆ.

ಜಿದ್ದಾಜಿದ್ದಿನ ಹೋರಾಟ ನಡೆದ ಪಂದ್ಯದ ಮೊದಲ ಅವಧಿ ಗೋಲು ರಹಿತವಾಗಿತ್ತು. ಉಭಯ ತಂಡ ಗಳಿಗೆ ಗೋಲು ಗಳಿಸಲು ಸಮಾನ ಅವಕಾಶ ಗಳು ಲಭಿಸಿದ್ದರೂ, ಯಶಸ್ಸು ಸಿಗಲಿಲ್ಲ.

ಆದರೆ ಎರಡನೇ ಅವಧಿಯಲ್ಲಿ ಆತಿಥೇಯರು ಆಕ್ರಮಣಕಾರಿ ಆಟವಾಡಿ ಎದುರಾಳಿಗಳನ್ನು ತಬ್ಬಿಬ್ಬುಗೊಳಿಸಿದರು. 46ನೇ ನಿಮಿಷದಲ್ಲಿ ನಿಖಿಲ್ ಪೂಜಾರಿ ಅವರ ಪಾಸ್‌ನಿಂದ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ಚಾಂಗ್ಟೆ, ಎದುರಾಳಿ ಡಿಫೆಂಡರ್‌ಗಳನ್ನು ತಪ್ಪಿಸಿ ಚೆಟ್ರಿ ಅವರತ್ತ ಒದ್ದರು. ಲೆಬನಾನ್ ಗೋಲ್‌ಕೀಪರ್ ಅಲಿ ಸಬೇಹ್ ಅವರನ್ನು ತಪ್ಪಿಸಿದ ಭಾರತ ತಂಡದ ನಾಯಕ, ಚೆಂಡನ್ನು ಗುರಿ ಸೇರಿಸಿದರು. ಚೆಟ್ರಿ ಅವರು ಅಂತರ ರಾಷ್ಟ್ರೀಯ ಪಂದ್ಯಗಳಲ್ಲಿ ತಮ್ಮ ಗೋಲುಗಳ ಸಂಖ್ಯೆಯನ್ನು 87ಕ್ಕೆ ಹೆಚ್ಚಿಸಿಕೊಂಡರು.

ಇದಾದ 20 ನಿಮಿಷಗಳಲ್ಲಿ ಭಾರತ ಎರಡನೇ ಗೋಲು ಗಳಿಸಿತು. ನೊರೆಮ್ ಮಹೇಶ್ ಅವರು ಗೋಲುಪೋಸ್ಟ್ ಗುರಿಯಾಗಿಸಿ ಒದ್ದ ಚೆಂಡನ್ನು ಸಬೇಹ್ ತಡೆದರೂ, ಚೆಂಡನ್ನು ಹಿಡಿದಿಟ್ಟುಕೊಳ್ಳಲು ವಿಫಲರಾದರು. ರಿಬೌಂಡ್ ಆಗಿ ಬಂದ ಚೆಂಡನ್ನು ಅಲ್ಲೇ ಇದ್ದ ಚಾಂಗ್ಟೆ ಗುರಿ ಸೇರಿಸಿದರು. ಆ ಬಳಿಕ ಲೆಬನಾನ್ ತಂಡ ನಡೆಸಿದ ಮರುಹೋರಾಟವನ್ನು ಭಾರತದ ಡಿಫೆಂಡರ್‌ಗಳು ಬದಿಗೊತ್ತುವಲ್ಲಿ ಯಶಸ್ವಿಯಾದರು.

ಅಭಿಷೇಕ್ ವರ್ಮಾ

ವಿಶ್ವಕಪ್ ಆರ್ಚರಿ: ಅಭಿಷೇಕ್‌ಗೆ ಚಿನ್ನ

ಮೆಡೆಲಿನ್, ಕೊಲಂಬಿಯ (ಪಿಟಿಐ): ಭಾರತದ ಅಭಿಷೇಕ್ ವರ್ಮಾ ಅವರು ವಿಶ್ವಕಪ್ ಆರ್ಚರಿ ಸ್ಟೇಜ್–3 ಸ್ಪರ್ಧೆಯ ಪುರುಷರ ವೈಯಕ್ತಿಕ ಕಾಂಪೌಂಡ್ ವಿಭಾಗದಲ್ಲಿ ಚಿನ್ನ ಗೆದ್ದರು.

ಶನಿವಾರ ನಡೆದ ಫೈನಲ್‌ನಲ್ಲಿ ಅಭಿಷೇಕ್ 148–146 ರಲ್ಲಿ ಅಮೆರಿಕದ ಜೇಮ್ಸ್ ಲುಟ್ಜ್ ಅವರನ್ನು ಮಣಿಸಿದರು. ಇದರೊಂದಿಗೆ ಭಾರತವು ಈ ಕೂಟ ದಲ್ಲಿ 1 ಚಿನ್ನ ಮತ್ತು 3 ಕಂಚು ಸೇರಿದಂತೆ ಒಟ್ಟು 4 ಪದಕ ಗೆದ್ದಂತಾಗಿದೆ.

ವಿಶ್ವಕಪ್‌ನ ಮೊದಲ ಎರಡು ಸ್ಟೇಜ್ ಟೂರ್ನಿಗಳಲ್ಲಿ ಪಾಲ್ಗೊಳ್ಳದೇ ಇದ್ದ 33 ವರ್ಷದ ಅಭಿಷೇಕ್ ಅವರು ಆರಂಭಿಕ ಸುತ್ತಿನಲ್ಲಿ ವಿಶ್ವದ ಅಗ್ರ ರ‍್ಯಾಂಕ್‌ನ ಸ್ಪರ್ಧಿ ನೆದರ್ಲೆಂಡ್ಸ್‌ನ ಮೈಕ್ ಶ್ಲೋಸೆರ್‌ಗೆ ಆಘಾತ ನೀಡಿದ್ದರು. ಇಬ್ಬರೂ 148–148 ರಲ್ಲಿ ಸಮಬಲ ಸಾಧಿಸಿದ್ದರಿಂದ ಶೂಟ್‌ಆಫ್ ಮೊರೆಹೋಗಲಾಗಿತ್ತು. ಎಂಟನೇ ಶ್ರೇಯಾಂಕ ಹೊಂದಿದ್ದ ಅಭಿಷೇಕ್, ಶೂಟ್‌ಆಫ್‌ನಲ್ಲಿ ಗೆದ್ದು ಸೆಮಿಫೈನಲ್ ತಲುಪಿದ್ದರು.

ನಾಲ್ಕರಘಟ್ಟದ ಹಣಾಹಣಿಯಲ್ಲಿ ಅವರು ಬ್ರೆಜಿಲ್‌ನ ಲುಕಾಸ್ ಅಬ್ರೆಯು ವಿರುದ್ಧ ಜಯಿಸಿ ಫೈನಲ್‌ನಲ್ಲಿ ಸ್ಥಾನ ಗಳಿಸಿದ್ದರು.

ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಕೂಟದ ಲಾಂಗ್‌ಜಂಪ್‌ನಲ್ಲಿ ಸಾಧನೆ

ವಿಶ್ವ ಚಾಂಪಿಯನ್‌ಷಿಪ್‌ಗೆ ಶ್ರೀಶಂಕರ್ ಅರ್ಹತೆ

ಭುವನೇಶ್ವರ (ಪಿಟಿಐ): ಕೇರಳದ ಮುರಳಿ ಶ್ರೀಶಂಕರ್ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಕೂಟದ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ 8.41 ಮೀ. ದೂರ ಜಿಗಿದು, ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದುಕೊಂಡರು.

ಭಾನುವಾರ ನಡೆದ ಅರ್ಹತಾ ಸುತ್ತಿನ ಮೊದಲ ಪ್ರಯತ್ನದಲ್ಲೇ ಅವರು ಈ ದೂರವನ್ನು ಸಾಧಿಸಿದರು. ಹಂಗರಿಯ ಬುಡಾಪೆಸ್ಟ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ನಿಗದಿಪಡಿಸಿರುವ ಅರ್ಹತಾ ಪಟ್ಟ 8.25 ಮೀ. ಆಗಿದೆ.

24 ವರ್ಷದ ಶ್ರೀಶಂಕರ್ ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನ ಇದಾಗಿದೆ. ರಾಷ್ಟ್ರೀಯ ದಾಖಲೆ ಹೊಂದಿರುವ ಜೆಸ್ವಿನ್ ಆಲ್ಡ್ರಿನ್ (8.42 ಮೀ.) ಅವರ ಸಾಧನೆ ಸರಿಗಟ್ಟುವ ಅವಕಾಶವನ್ನು ಕೇವಲ 1 ಸೆಂ.ಮೀ. ಅಂತರದಿಂದ ಕಳೆದುಕೊಂಡರು.

ಆಲ್ಡ್ರಿನ್ ಅವರು 7.83 ಮೀ. ಸಾಧನೆಯೊಂದಿಗೆ ಅರ್ಹತಾ ಹಂತದಲ್ಲಿ ಎರಡನೆಯವರಾದರೆ, ಮುಹಮ್ಮದ್ ಅನೀಸ್ ಯಹ್ಯಾ (7.71 ಮೀ.) ಮೂರನೇ ಸ್ಥಾನದಲ್ಲಿ ಕಾಣಿಸಿಕೊಂಡರು. ಒಟ್ಟು 12 ಸ್ಪರ್ಧಿಗಳು ಸೋಮವಾರ ನಡೆಯಲಿರುವ ಫೈನಲ್‌ಗೆ ಅರ್ಹತೆ ಗಳಿಸಿದ್ದಾರೆ.

ಶ್ರೀಶಂಕರ್ ಹೊರತುಪಡಿಸಿ, ಕಣದಲ್ಲಿದ್ದ ಇತರರಿಗೆ ಏಷ್ಯನ್ ಕ್ರೀಡಾಕೂಟದ ಅರ್ಹತಾ ಮಟ್ಟ ಕೂಡಾ ತಲುಪಲು ಆಗಲಿಲ್ಲ. ಚೀನಾದ ಹಾಂಗ್‌ಜೌನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೆ, ಭಾರತ ಅಥ್ಲೆಟಿಕ್ ಫೆಡರೇಷನ್ ನಿಗದಿಪಡಿಸಿರುವ ಅರ್ಹತಾ ಮಟ್ಟ 7.95 ಮೀ. ಆಗಿದೆ. ಅರ್ಹತೆ ಪಡೆಯಲು ಸೋಮವಾರದ ಫೈನಲ್ ಮತ್ತೊಂದು ಅವಕಾಶವಾಗಿದೆ.

ಮಹಿಳೆಯರ ಲಾಂಗ್‌ಜಂಪ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಕೇರಳದ ಆನ್ಸಿ ಸೋಜನ್ (6.49 ಮೀ.) ಅವರು ಅಗ್ರಸ್ಥಾನ ಪಡೆದು ಫೈನಲ್ ಪ್ರವೇಶಿಸಿದರಲ್ಲದೆ, ಏಷ್ಯನ್ ಕ್ರೀಡಾಕೂಟದ ಅರ್ಹತಾ ಮಟ್ಟ (6.45 ಮೀ.) ಸಾಧಿಸಿದರು. ಕೇರಳದ ನಯನಾ ಜೇಮ್ಸ್ (6.31 ಮೀ.) ಮತ್ತು ಉತ್ತರ ಪ್ರದೇಶದ ಶೈಲಿ ಸಿಂಗ್ (6.27 ಮೀ.) ಅವರೂ ಫೈನಲ್‌ನಲ್ಲಿ ಸ್ಥಾನ ಪಡೆದರು.

ಪುರುಷರ ಶಾಟ್‌ಪಟ್‌ನಲ್ಲಿ ತಜಿಂದರ್‌ಪಾಲ್ ಸಿಂಗ್ ತೂರ್ 18.91 ಮೀ. ಸಾಧನೆಯೊಂದಿಗೆ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದರು. ಅವರಿಗೆ ಏಷ್ಯನ್ ಕ್ರೀಡಾಕೂಟದ ಅರ್ಹತಾಮಟ್ಟ (19 ಮೀ.) ತಲುಪಲು ಆಗಲಿಲ್ಲ.

ಪುರುಷರ ಜಾವೆಲಿನ್ ಥ್ರೋನಲ್ಲಿ ಮೂವರು ಅಥ್ಲೀಟ್‌ಗಳು ಏಷ್ಯನ್ ಕ್ರೀಡಾಕೂಟದ ಅರ್ಹತಾಮಟ್ಟ (78.23 ಮೀ.) ಸಾಧಿಸಿದರು. ಒಡಿಶಾದ ಕಿಶೋರ್ ಕುಮಾರ್ ಜೆನಾ (79.96 ಮೀ.) ಅಗ್ರಸ್ಥಾನದಲ್ಲಿ ಕಾಣಿಸಿಕೊಂಡರೆ, ಉತ್ತರ ಪ್ರದೇಶದ ಶಿವಪಾಲ್ ಸಿಂಗ್ (79.35 ಮೀ.) ಮತ್ತು ರಾಜಸ್ಥಾನದ ಅನುಜ್ (79.04 ಮೀ.) ಅವರೂ ಅರ್ಹತಾ ಮಟ್ಟ ತಲುಪಿ, ಫೈನಲ್ ಪ್ರವೇಶಿಸಿದರು.

ಪುರುಷರ 1,500 ಮೀ. ಓಟದಲ್ಲಿ ಫೈನಲ್ ಪ್ರವೇಶಿಸಿದ ನಾಲ್ವರು ಏಷ್ಯನ್ ಕ್ರೀಡಾಕೂಟದ ಅರ್ಹತೆಗೆ ನಿಗದಿಪಡಿಸಿದ್ದ 3 ನಿ.47.84 ಸೆ. ಸಮಯವನ್ನು ಯಶಸ್ವಿಯಾಗಿ ಮುಟ್ಟಿದರು. ಆದರೆ ಏಷ್ಯನ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಇಬ್ಬರಿಗೆ ಮಾತ್ರ ಅವಕಾಶವಿದೆ.

ಉತ್ತರ ಪ್ರದೇಶದ ಅಜಯ್ ಕುಮಾರ್ (3 ನಿ. 44.13 ಸೆ.), ಯೂನುಸ್ ಶಾ (3 ನಿ. 44.22 ಸೆ.), ಉತ್ತರಾಖಂಡದ ಸಚ್ಚೇಲಾಲ್ ಪಟೇಲ್ (3 ನಿ. 44.33 ಸೆ.) ಹಾಗೂ ರಾಜಸ್ಥಾನದ ರಾಹುಲ್ (3 ನಿ. 46.73 ಸೆ.) ಅವರು ಅರ್ಹತೆ ಪಡೆದ ಅಥ್ಲೀಟ್‌ಗಳು. ರಾಷ್ಟ್ರೀಯ ದಾಖಲೆ ಹೊಂದಿರುವ ಕೇರಳದ ಜಿನ್ಸನ್ ಜಾನ್ಸನ್ (3 ನಿ. 48.83 ಸೆ.) ಅವರೂ ಫೈನಲ್‌ನಲ್ಲಿ ಸ್ಥಾನ ಪಡೆದರು.

ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದ ಮುರಳಿ ಶ್ರೀಶಂಕರ್

ಸ್ಯಾಂಪಲ್ ನೀಡಿದ ಶ್ರೀಶಂಕರ್

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದ ಬೆನ್ನಲ್ಲೇ ಮುರಳಿ ಶ್ರೀಶಂಕರ್, ಉದ್ದೀಪನ ಮದ್ದು ಪರೀಕ್ಷೆಗಾಗಿ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕದ (ನಾಡಾ) ಅಧಿಕಾರಿಗಳಿಗೆ ಸ್ವಯಂಪ್ರೇರಣೆಯಿಂದ ಸ್ಯಾಂಪಲ್‌ಅನ್ನು ನೀಡಿದ್ದಾರೆ.

'ಇದು ಫೈನಲ್ ಆಗಿಲ್ಲದ ಕಾರಣ, ಸ್ಯಾಂಪಲ್ ನೀಡುವಂತೆ ನಾಡಾ ಅಧಿಕಾರಿಗಳು ಶ್ರೀಶಂಕರ್ ಅವರನ್ನು ಕೇಳಿರಲಿಲ್ಲ. ಆದರೂ ತನ್ನ ಸಾಧನೆ ಬಗ್ಗೆ ಯಾರೂ ಅನುಮಾನಪಡಬಾರದು ಎಂಬ ಕಾರಣ ಸ್ವಯಂಪ್ರೇರಣೆಯಿಂದ ಉದ್ದೀಪನ ಮದ್ದು ಪರೀಕ್ಷೆಗಾಗಿ ಸ್ಯಾಂಪಲ್ ನೀಡಿದರು. ಅದನ್ನು ಅವರು (ನಾಡಾ ತಂಡ) ಪಡೆದುಕೊಂಡರು' ಎಂದು ಶ್ರೀಶಂಕರ್ ಅವರ ತಂದೆ ಮತ್ತು ಕೋಚ್ ಕೂಡಾ ಆಗಿರುವ ಎಸ್.ಮುರಳಿ ತಿಳಿಸಿದರು.

ಆ್ಯಷಸ್: ಇಂಗ್ಲೆಂಡ್‌ಗೆ ಅಲ್ಪ ಮುನ್ನಡೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆ್ಯಷಸ್ ಸರಣಿಯ ಮೊದಲ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ಆತಿಥೇಯ ಇಂಗ್ಲೆಂಡ್ ಏಳು ರನ್‌ಗಳ ಅಲ್ಪ ಮುನ್ನಡೆ ಪಡೆಯುವಲ್ಲಿ ಯಶಸ್ವಿಯಾಯಿತು.

ಪಂದ್ಯದ ಮೂರನೇ ದಿನವಾದ ಭಾನುವಾರ ಆಸ್ಟ್ರೇಲಿಯಾ ತಂಡವು 116.1 ಓವರ್‌ಗಳಲ್ಲಿ 386 ರನ್ ಗಳಿಸಿ ಎಲ್ಲ ವಿಕೆಟ್‌ಗಳನ್ನೂ ಕಳೆದುಕೊಂಡಿತು. ಇಂಗ್ಲೆಂಡ್ ತಂಡವು ಮೊದಲ ದಿನವೇ 8 ವಿಕೆಟ್‌ಗಳಿಗೆ 393 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು.

ಎರಡನೇ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡ 10.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 28 ರನ್ ಗಳಿಸಿತು. ಈ ಸಂದರ್ಭದಲ್ಲಿ ಮಳೆ ಸುರಿದ ಕಾರಣ ದಿನದ ಆಟವನ್ನು ಸ್ಥಗಿತಗೊಳಿಸಲಾಯಿತು.

ಎರಡನೇ ದಿನದಾಟದಲ್ಲಿ ದೊಡ್ಡ ಮುನ್ನಡೆ ಗಳಿಸುವ ಆತಿಥೇಯ ತಂಡದ ಯೋಜನೆಗೆ ಶತಕ ಗಳಿಸಿದ ಉಸ್ಮಾನ್ ಖ್ವಾಜಾ ಮತ್ತು ಅರ್ಧಶತಕ ಹೊಡೆದ ಅಲೆಕ್ಸ್ ಕ್ಯಾರಿ ಅಡ್ಡಿಯಾದರು. ಭಾನುವಾರವೂ ತಮ್ಮ ಆಟ ಮುಂದುವರಿಸಿದ ಉಸ್ಮಾನ್ ತಂಡಕ್ಕೆ ಆಸರೆಯಾದರು. ದೊಡ್ಡ ಅಂತರದ ಹಿನ್ನಡೆಯನ್ನು ತಪ್ಪಿಸಿದರು. ಇಂಗ್ಲೆಂಡ್ ತಂಡದ ಸ್ಟುವರ್ಟ್ ಬ್ರಾಡ್, ಒಲೀ ರಾಬಿನ್ಸನ್ ತಲಾ ಮೂರು ವಿಕೆಟ್ ಗಳಿಸಿದರು.

ಮೋಯಿನ್ ಅಲಿಗೆ ದಂಡ: ಇಂಗ್ಲೆಂಡ್ ತಂಡದ ಆಟಗಾರ ಮೋಯಿನ್ ಅಲಿ ಅವರಿಗೆ ಪಂದ್ಯ ಶುಲ್ಕದ ಶೇ 25ರಷ್ಟು ಮೊತ್ತದ ದಂಡ ವಿಧಿಸಲಾಗಿದೆ.

ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಪಂದ್ಯದಲ್ಲಿ ಅವರು ತಾವು ಬೌಲಿಂಗ್ ಮಾಡುವ ಬಲಗೈ ಬೆರಳುಗಳಿಗೆ ದ್ರಾವಣವೊಂದನ್ನು ಸಿಂಪಡಿಸಿಕೊಂಡಿದ್ದರು. ಇನಿಂಗ್ಸ್‌ನ 89ನೇ ಓವರ್ ನಡೆಯುತ್ತಿದ್ದ ಸಂದರ್ಭದಲ್ಲಿ ಬೌಂಡರಿಲೈನ್‌ನಲ್ಲಿ ಫೀಲ್ಡಿಂಗ್ ಮಾಡುತ್ತಿದ್ದ ಅಲಿ ಈ ದ್ರಾವಣವನ್ನು ತಮ್ಮ ಕೈಬೆರಳುಗೆ ಸಿಂಪಡಿಸಿಕೊಂಡಿದ್ದು ಟಿವಿಯಲ್ಲಿ ಪ್ರಸಾರವಾಗಿತ್ತು. ಪೂರ್ವಾನುಮತಿ ಇಲ್ಲದೇ ಈ ರೀತಿಯ ದ್ರಾವಣಗಳನ್ನು ಬಳಸುವಂತಿಲ್ಲ.

ಸಂಕ್ಷಿಪ್ತ ಸ್ಕೋರು: ಪ್ರಥಮ ಇನಿಂಗ್ಸ್: ಇಂಗ್ಲೆಂಡ್; 8ಕ್ಕೆ393 ಡಿಕ್ಲೇರ್ಡ್. ಆಸ್ಟ್ರೇಲಿಯಾ: 116.1 ಓವರ್‌ಗಳಲ್ಲಿ 386 (ಉಸ್ಮಾನ್ ಖ್ವಾಜಾ 141, ಅಲೆಕ್ಸ್ ಕ್ಯಾರಿ 66, ಪ್ಯಾಟ್ ಕಮಿನ್ಸ್ 38, ಸ್ಟುವರ್ಟ್ ಬ್ರಾಡ್ 68ಕ್ಕೆ3, ಒಲೀ ರಾಬಿನ್ಸನ್ 55ಕ್ಕೆ3, ಮೋಯಿನ್ ಅಲಿ 147ಕ್ಕೆ2) ಎರಡನೇ ಇನಿಂಗ್ಸ್: ಇಂಗ್ಲೆಂಡ್: 10 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 28 (ಬೆನ್ ಡಕೆಟ್ 19, ಜ್ಯಾಕ್ ಕ್ರಾಲಿ 7, ಪ್ಯಾಟ್ ಕಮಿನ್ಸ್ 9ಕ್ಕೆ1, ಸ್ಕಾಟ್ ಬೊಲಾಂಡ್ 1ಕ್ಕೆ 1)

ಇಂಗ್ಲೆಂಡ್ ತಂಡದ ಬೌಲರ್ ಸ್ಟುವರ್ಟ್ ಬ್ರಾಡ್ (ಮಧ್ಯ) ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಎಫ್‌ಪಿ ಚಿತ್ರ

ದುಲೀಪ್ ಟ್ರೋಫಿಗೆ ಸಕ್ಸೇನಾಗಿಲ್ಲ ಸ್ಥಾನ: ವೆಂಕಟೇಶ್ ಪ್ರಸಾದ್ ಟೀಕೆ

ನವದೆಹಲಿ (ಪಿಟಿಐ): ಭಾರತದ ಕ್ರಿಕೆಟ್‌ನಲ್ಲಿ 'ಹಾಸ್ಯಾಸ್ಪದ ಸಂಗತಿ'ಗಳು ನಡೆಯುತ್ತಿದೆ. ಇದೀಗ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಗೆ ಕೇರಳದ ಜಲಜ್ ಸಕ್ಸೇನಾ ಅವರನ್ನು ಆಯ್ಕೆ ಮಾಡದಿರುವುದೂ ಅಂತಹದೇ ವಿಷಯ ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ವೆಂಕಟೇಶ್ ಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ಇದೇ 28ರಿಂದ ದುಲೀಪ್ ಟ್ರೋಫಿ ಟೂರ್ನಿಯು ಆರಂಭವಾಗಲಿದೆ. ಕಳೆದ ರಣಜಿ ಋತುವಿನಲ್ಲಿ ಕೇರಳ ತಂಡವನ್ನು ಪ್ರತಿನಿಧಿಸಿದ್ದ ಜಲಜ್ 50 ವಿಕೆಟ್ ಗಳಿಸಿದ್ದರು. ಇದಕ್ಕೂ ಮುನ್ನ ಅವರು ಮಧ್ಯಪ್ರದೇಶ ಹಾಗೂ ಭಾರತ ಎ ತಂಡವನ್ನೂ ಪ್ರತಿನಿಧಿಸಿರುವ ಆಟಗಾರ.

'ರಣಜಿ ಟ್ರೋಫಿಯಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಆಟಗಾರನನ್ನು ದಕ್ಷಿಣ ವಲಯ ತಂಡಕ್ಕೆ ಆಯ್ಕೆ ಮಾಡದಿರುವುದು ನಗು ತರಿಸುತ್ತದೆ. ಇದರಿಂದಾಗಿ ರಣಜಿ ಟ್ರೋಫಿಯು ನಿರುಪಯುಕ್ತ ಎಂದು ಹೇಳಿದಂತಾಯಿತಲ್ಲವೇ. ಇದು ನಾಚಿಕೆಗೇಡು' ಎಂದು ಪ್ರಸಾದ್ ಟ್ವೀಟ್ ಮಾಡಿದ್ದಾರೆ.

36 ವರ್ಷದ ಜಲಜ್ 133 ಪ್ರಥಮ ದರ್ಜೆ, 104 ಲಿಸ್ಟ್ ಎ ಹಾಗೂ 66 ಟಿ20 ಪಂದ್ಯಗಳಲ್ಲಿ ಆಡಿದ್ದಾರೆ.

ವೆಂಕಟೇಶ್ ಪ್ರಸಾದ್ ಅವರು ಈ ಹಿಂದೆ ಬಿಸಿಸಿಐ ಜೂನಿಯರ್ ಆಯ್ಕೆ ಸಮಿತಿಯ ಮುಖ್ಯಸ್ಥರಾಗಿದ್ದರು. ಇತ್ತೀಚೆಗೆ ಕೆ.ಎಲ್. ರಾಹುಲ್ ಸತತ ವೈಫಲ್ಯ ಅನುಭವಿಸುತ್ತಿದ್ದ ಸಂದರ್ಭದಲ್ಲಿ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದನ್ನೂ ಪ್ರಶ್ನಿಸಿದ್ದರು.

ಜಲಜ್ ಸಕ್ಸೇನಾ

ಬ್ಯಾಂಕ್ ಆಫ್ ಬರೋಡಾ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾ ಬ್ಯಾಸ್ಕೆಟ್‌ಬಾಲ್ ತಂಡವು ಬೆಂಗಳೂರು ಓಪನ್ 3x3 ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದು, ಐಎನ್‌ಬಿಎಲ್‌ಗೆ (ಇಂಡಿಯನ್ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಲೀಗ್) ಅರ್ಹತೆ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟೂರ್ನಿಯ ಫೈನಲ್‌ನಲ್ಲಿ ಬ್ಯಾಂಕ್ ಆಫ್ ಬರೋಡಾ ತಂಡವು 19–17ರಲ್ಲಿ ಸೈ ಬ್ಯಾಸ್ಕೆಟ್‌ಬಾಲ್ ತಂಡವನ್ನು ಮಣಿಸಿತು.

ಸೆಮಿಫೈನಲ್‌ನಲ್ಲಿ ವಿ ಟುಕ್ ಬಾಲರ್ಸ್ ತಂಡವನ್ನು 21–15ರಲ್ಲಿ, ಕ್ವಾರ್ಟರ್ ಫೈನಲ್‌ನಲ್ಲಿ ಹಸ್ಟ್ರೀಸ್ ತಂಡವನ್ನು 22–14ರಲ್ಲಿ ಮಣಿಸಿತ್ತು.

ಮಹಿಳೆಯರ ವಿಭಾಗದಲ್ಲಿ ಬೀಗಲ್ಸ್ ಬಿಸಿ ತಂಡ ಚಾಂಪಿಯನ್ ಆಯಿತು.

ಬ್ಯಾಂಕ್ ಆಫ್ ಬರೋಡಾ ಬ್ಯಾಸ್ಕೆಟ್‌ಬಾಲ್ ತಂಡದ ಮುಫೀಜ್ ಅಹಮ್ಮದ್, ಕ್ಲಿಂಟನ್ ಆಂಡ್ರೊ, ಅನಿಲ್ ಕುಮಾರ್, ಸಂಜಯರಾಜ್, ಕೋಚ್ ಸ್ಟಾಲಿನ್, ಮ್ಯಾನೇಜರ್ ನಾಗರಾಜ್ ಮತ್ತು ಸುಕೇಶ್

ಕೌಂಟಿಯಲ್ಲಿ ಲೆಸ್ಟರ್‌ಷೈರ್ ಪರ ಆಡಲಿರುವ ರಹಾನೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಬ್ಯಾಟರ್ ಅಜಿಂಕ್ಯ ರಹಾನೆ ಅವರು ವೆಸ್ಟ್ ಇಂಡೀಸ್ ಪ್ರವಾಸದ ಬಳಿಕ ಇಂಗ್ಲೆಂಡ್‌ನ ಕೌಂಟಿ ಕ್ರಿಕೆಟ್‌ನಲ್ಲಿ ಲೆಸ್ಟರ್‌ಷೈರ್ ತಂಡದ ಪರ ಆಡಲಿದ್ದಾರೆ.

ರಹಾನೆ ಅವರು ಲೆಸ್ಟರ್‌ಷೈರ್ ಪರ ಆಡುವುದಕ್ಕೆ ಜನವರಿಯಲ್ಲಿ ಒಪ್ಪಂದ ಮಾಡಿಕೊಂಡಿದ್ದರು. ಐಪಿಎಲ್ ಬಳಿಕ ಅವರು ತಂಡ ವನ್ನು ಸೇರಿಕೊಳ್ಳಬೇಕಿತ್ತು. ಆದರೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆದದ್ದರಿಂದ ಅವರಿಗೆ ಕೌಂಟಿ ತಂಡವನ್ನು ಸೇರಿಕೊಳ್ಳಲು ಆಗಿಲ್ಲ. ವೆಸ್ಟ್ ಇಂಡೀಸ್ ವಿರುದ್ಧದ 2 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಅವರು ಭಾರತ ತಂಡದಲ್ಲಿ ಆಡುವ ಸಾಧ್ಯತೆ ಇದೆ. ಈ ಪ್ರವಾಸದ ಬಳಿಕ (ಜುಲೈ 24ರ ನಂತರ) ಅವರು ನೇರವಾಗಿ ಇಂಗ್ಲೆಂಡ್‌ಗೆ ಪ್ರಯಾಣಿಸಲಿದ್ದು, ಲೆಸ್ಟರ್ ಷೈರ್ ತಂಡವನ್ನು ಸೇರಿಕೊಳ್ಳಲಿದ್ದಾರೆ.

ರಣಜಿ ಟ್ರೋಫಿ: ಒಂದೇ ಗುಂಪಿನಲ್ಲಿ ಕರ್ನಾಟಕ, ತಮಿಳುನಾಡು ತಂಡಗಳು

ಬೆಂಗಳೂರು: ದೇಶಿ ಕ್ರಿಕೆಟ್‌ನ ಕಟ್ಟಾ ಎದುರಾಳಿಗಳಾದ ಕರ್ನಾಟಕ ಮತ್ತು ತಮಿಳುನಾಡು ತಂಡಗಳು 2023–24ರ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಒಂದೇ ಗುಂಪಿನಲ್ಲಿ ಕಣಕ್ಕಿಳಿಯಲಿವೆ.

2024ರ ಜ. 5ರಿಂದ ಮಾರ್ಚ್ 14ರವರೆಗೆ ರಣಜಿ ಟ್ರೋಫಿ ಟೂರ್ನಿ ನಡೆಯಲಿದೆ. ಕರ್ನಾಟಕ ಹಾಗೂ ತಮಿಳುನಾಡು ತಂಡಗಳು ಎಲೀಟ್ ವಿಭಾಗದ ಸಿ ಗುಂಪಿನಲ್ಲಿ ಆಡಲಿವೆ.

ಬಿಸಿಸಿಐನ ಪ್ರಧಾನ ವ್ಯವಸ್ಥಾಪಕ ಅಬೇ ಕುರುವಿಲಾ ಶನಿವಾರ ಸಂಜೆ ರಾಜ್ಯ ಸಂಸ್ಥೆಗಳಿಗೆ ಈ ಬಾರಿಯ ದೇಶಿ ಕ್ರಿಕೆಟ್ ಋತುವಿನ ಸಂಪೂರ್ಣ ವೇಳಾಪಟ್ಟಿಯನ್ನು ಕಳಿಸಿದೆ ಎಂದು ವಿಶ್ವಾಸನೀಯ ಮೂಲಗಳು ಖಚಿತಪಡಿಸಿವೆ.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ (ಟಿ20 ಮಾದರಿ)	
ಗುಂಪು ಎ	ಮುಂಬೈ, ಹರಿಯಾಣ, ಛತ್ತೀಸಗಡ, ಹೈದರಾಬಾದ್, ಬರೋಡಾ, ಮೇಘಾಲಯ, ಜಮ್ಮು–ಕಾಶ್ಮೀರ, ಮಿಜೋರಾಂ
ಗುಂಪು ಬಿ	ಹಿಮಾಚಲಪ್ರದೇಶ, ಕೇರಳ, ಸರ್ವಿಸಸ್, ಅಸ್ಸಾಂ, ಚಂಡೀಗಡ, ಒಡಿಶಾ, ಬಿಹಾರ್, ಸಿಕ್ಕಿಂ
ಗುಂಪು ಸಿ	ಪಂಜಾಬ್, ಸೌರಾಷ್ಟ್ರ, ಗುಜರಾತ್, ಗೋವಾ, ರೈಲ್ವೆಸ್, ಆಂಧ್ರ, ಮಣಿಪುರ, ಅರುಣಾಚಲಪ್ರದೇಶ
ಗುಂಪು ಡಿ	ವಿದರ್ಭ, ಬಂಗಾಳ, ಉತ್ತರಾಖಂಡ, ಮಹಾರಾಷ್ಟ್ರ, ರಾಜಸ್ಥಾನ, ಜಾರ್ಖಂಡ್, ಪುದುಚೇರಿ
ಗುಂಪು ಇ	ಕರ್ನಾಟಕ, ದೆಹಲಿ, ತಮಿಳುನಾಡು, ಉತ್ತರಪ್ರದೇಶ, ಮಧ್ಯಪ್ರದೇಶ, ತ್ರಿಪುರ, ನಾಗಾಲ್ಯಾಂಡ್.
	* 2023ರ ಅಕ್ಟೋಬರ್ 16ರಿಂದ ನವೆಂಬರ್ 6

ವಿಜಯ್ ಹಜಾರೆ ಟ್ರೋಫಿ (ಏಕದಿನ ಮಾದರಿ)	
ಗುಂಪು ಎ	ಸೌರಾಷ್ಟ್ರ, ಕೇರಳ, ಮುಂಬೈ, ರೈಲ್ವೆಸ್, ತ್ರಿಪುರ, ಪುದುಚೇರಿ, ಒಡಿಶಾ, ಸಿಕ್ಕಿಂ
ಗುಂಪು ಬಿ	ಮಹಾರಾಷ್ಟ್ರ, ಜಾರ್ಖಂಡ್, ಹೈದರಾಬಾದ್, ಛತ್ತೀಸಗಢ, ವಿದರ್ಭ, ಸರ್ವಿಸಸ್, ಮೇಘಾಲಯ, ಮಣಿಪುರ
ಗುಂಪು ಸಿ	ಕರ್ನಾಟಕ, ಜಮ್ಮು–ಕಾಶ್ಮೀರ, ಚಂಡೀಗಡ, ಹರಿಯಾಣ, ದೆಹಲಿ, ಉತ್ತರಾಖಂಡ, ಬಿಹಾರ್, ಮಿಜೋರಾಂ
ಗುಂಪು ಡಿ	ಅಸ್ಸಾಂ, ಉತ್ತರಪ್ರದೇಶ, ಆಂಧ್ರ, ರಾಜಸ್ಥಾನ, ಗುಜರಾತ್, ಹಿಮಾಚಲಪ್ರದೇಶ, ಅರುಣಾಚಲಪ್ರದೇಶ.
ಗುಂಪು ಇ	ಪಂಜಾಬ್, ತಮಿಳುನಾಡು, ಮಧ್ಯಪ್ರದೇಶ, ಬಂಗಾಳ, ಬರೋಡಾ, ಗೋವಾ, ನಾಗಾಲ್ಯಾಂಡ್
	* 2023ರ ನವೆಂಬರ್ 23 ರಿಂದ ಡಿಸೆಂಬರ್ 16

ರಣಜಿ ಟ್ರೋಫಿ	
ಗುಂಪು ಎ	ಸೌರಾಷ್ಟ್ರ, ಜಾರ್ಖಂಡ್, ಮಹಾರಾಷ್ಟ್ರ, ರಾಜಸ್ಥಾನ, ವಿದರ್ಭ, ಹರಿಯಾಣ, ಸರ್ವಿಸಸ್, ಮಣಿಪುರ
ಗುಂಪು ಬಿ	ಬಂಗಾಳ, ಆಂಧ್ರ, ಮುಂಬೈ, ಕೇರಳ, ಛತ್ತೀಸಗಡ, ಉತ್ತರಪ್ರದೇಶ, ಅಸ್ಸಾಂ, ಬಿಹಾರ್
ಗುಂಪು ಸಿ	ಕರ್ನಾಟಕ,ಪಂಜಾಬ್, ರೈಲ್ವೆಸ್, ತಮಿಳುನಾಡು, ಗೋವಾ, ಗುಜರಾತ್, ತ್ರಿಪುರ, ಚಂಡೀಗಡ
ಗುಂಪು ಡಿ	ಮಧ್ಯಪ್ರದೇಶ, ಉತ್ತರಾಖಂಡ, ಹಿಮಾಚಲಪ್ರದೇಶ, ಬರೋಡಾ, ದೆಹಲಿ, ಒಡಿಶಾ, ಪುದುಚೇರಿ, ಜಮ್ಮು–ಕಾಶ್ಮೀರ
ಪ್ಲೇಟ್	ನಾಗಾಲ್ಯಾಂಡ್, ಹೈದರಾಬಾದ್, ಮೇಘಾಲಯ, ಸಿಕ್ಕಿಂ, ಮಿಜೋರಾಂ, ಅರುಣಾಚಲಪ್ರದೇಶ.
	* 2024ರ ಜ 5ರಿಂದ ಮಾರ್ಚ್ 14

ಎನ್‌ಸಿಎಗೆ ಇಶಾನ್ ಕಿಶನ್

ಮುಂಬೈ (ಪಿಟಿಐ): ಭಾರತ ತಂಡದ ವಿಕೆಟ್‌ಕೀಪರ್ ಇಶಾನ್ ಕಿಶನ್ ಅವರು ಸ್ಟ್ರೆಂಥ್ ಮತ್ತು ಕಂಡಿಷನಿಂಗ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಮುಂದಿನ ವಾರ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಸೇರಲಿದ್ದಾರೆ.

ಭಾರತ ತಂಡವು ಜುಲೈ 3ರಂದು ವೆಸ್ಟ್ ಇಂಡೀಸ್‌ಗೆ ತೆರಳಲಿದೆ. 12ರಿಂದ ಸರಣಿ ಆರಂಭವಾಗಲಿದೆ. ಎರಡು ಟೆಸ್ಟ್, ಮೂರು ಏಕದಿನ ಹಾಗೂ ಐದು ಟಿ20 ಪಂದ್ಯಗಳಲ್ಲಿ ಆಡಲಿದೆ. ಇಶಾನ್ ಕಿಶನ್ ಕೂಡ ಭಾರತ ತಂಡದಲ್ಲಿದ್ದಾರೆ.

ಎರಡು ಅಂತರರಾಷ್ಟ್ರೀಯ ಸರಣಿಗಳ ನಡುವಿನ ಬಿಡುವಿನಲ್ಲಿ ಮತ್ತು ಯಾವುದೇ ದೇಶಿ ಟೂರ್ನಿಯಲ್ಲಿ ಆಡದಿದ್ದರೆ ಎನ್‌ಸಿಎಗೆ ಕರೆಸಿ ಫಿಟ್‌ನೆಸ್ ಸ್ಥಿತಿಗತಿಯನ್ನು ಅವಲೋಕಿಸಲಾಗುತ್ತದೆ.

ಜೂನ್ 28ರಿಂದ ಬೆಂಗಳೂರಿನಲ್ಲಿ ದುಲೀಪ್ ಟ್ರೋಫಿ ಟೂರ್ನಿ ನಡೆಯಲಿದೆ. ಜುಲೈ 12 ರಿಂದ 16ರವರೆಗೆ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಫೈನಲ್ ಕೂಡ ನಡೆಯಲಿದೆ. ಆದರೆ ಇಶಾನ್ ಈ ಟೂರ್ನಿಯಲ್ಲಿ ಆಡುತ್ತಿಲ್ಲ.

ಇಶಾನ್ ಕಿಶನ್

ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್; ವೀಸಾ ಸಮಸ್ಯೆ

ಪಾಕ್ ತಂಡದ ಆಗಮನ ವಿಳಂಬ

ಬೆಂಗಳೂರು (ಪಿಟಿಐ): ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಬರಬೇಕಿದ್ದ ಪಾಕಿಸ್ತಾನ ತಂಡದ ಪ್ರಯಾಣ, ವೀಸಾ ಸಮಸ್ಯೆಯಿಂದಾಗಿ ವಿಳಂಬವಾಗಿದೆ.

ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ಕಂಠೀರವ ಕ್ರೀಡಾಂಗಣದಲ್ಲಿ ಜೂನ್ 21 ರಂದು ನಡೆಯಲಿದೆ.

ಪಾಕ್ ತಂಡ ಭಾನುವಾರ ಮಾರಿಷಸ್‌ನಿಂದ ಬೆಂಗಳೂರಿಗೆ ಬಂದಿಳಿಯಬೇಕಿತ್ತು. ಮಾರಿಷಸ್‌ನಲ್ಲಿ ನಡೆದ ನಾಲ್ಕು ರಾಷ್ಟ್ರಗಳ ಫುಟ್‌ಬಾಲ್ ಟೂರ್ನಿಯಲ್ಲಿ ಪಾಲ್ಗೊಂಡ ತಂಡ ಅಲ್ಲಿಂದ ನೇರವಾಗಿ ಬೆಂಗಳೂರಿಗೆ ಪ್ರಯಾಣಿಸಲಿದೆ. ಭಾನುವಾರ ಬೆಳಗ್ಗಿನ ವಿಮಾನದಲ್ಲಿ ಪ್ರಯಾಣಿಸಬೇಕಿದ್ದ ತಂಡ, ವೀಸಾ ಲಭ್ಯವಾಗದ ಕಾರಣ ಅಲ್ಲೇ ಉಳಿದುಕೊಂಡಿದೆ.

'ಗೃಹ ಸಚಿವಾಲಯದ ಕಚೇರಿಗೆ ವಾರಾಂತ್ಯದಲ್ಲಿ ರಜೆ ಇರುವುದರಿಂದ ವೀಸಾ ಪ್ರಕ್ರಿಯೆ ವಿಳಂಬವಾಗಿದೆ. ಪಾಕ್ ತಂಡದ ಸದಸ್ಯರ ವೀಸಾ ಅರ್ಜಿ ಮಾರಿಷಸ್‌ನಲ್ಲಿರುವ ಭಾರತ ರಾಯಭಾರ ಕಚೇರಿಯ ಬಳಿಯಲ್ಲಿದೆ. ಪಾಕ್ ಆಟಗಾರರಿಗೆ ಸೋಮವಾರ ವೀಸಾ ಲಭಿಸುವ ಸಾಧ್ಯತೆಯಿದ್ದು, ಅದೇ ದಿನ ರಾತ್ರಿ ಅಥವಾ ಮಂಗಳವಾರ ಬೆಂಗಳೂರಿಗೆ ತಲುಪಲಿದ್ದಾರೆ. ಜೂನ್ 21ರ ಪಂದ್ಯ ನಿಗದಿತ ವೇಳಾಪಟ್ಟಿಯಂತೆ ನಡೆಯಲಿದೆ' ಎಂದು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಮೂಲಗಳು ತಿಳಿಸಿವೆ.

'ಎ' ಗುಂಪಿನಲ್ಲಿರುವ ಪಾಕಿಸ್ತಾನ ತಂಡ ತನ್ನ ಇತರ ಪಂದ್ಯಗಳಲ್ಲಿ ಕುವೈತ್ (ಜೂನ್ 24) ಮತ್ತು ನೇಪಾಳ (ಜೂನ್ 27) ವಿರುದ್ಧ ಆಡಲಿದೆ. ಸ್ಯಾಫ್ ಚಾಂಪಿಯನ್‌ಷಿಪ್‌ಗೆ ಸಜ್ಜಾಗಲು ಪಾಕ್ ತಂಡ ಮಾರಿಷಸ್‌ನಲ್ಲಿ ನಡೆದ ಟೂರ್ನಿಯಲ್ಲಿ ಪಾಲ್ಗೊಂಡಿತ್ತು. ಅಲ್ಲಿ ಆಡಿದ ಮೂರೂ ಪಂದ್ಯಗಳನ್ನು ಸೋತಿದೆ.

ಆಟಗಾರರ ಭಾರತ ಪ್ರಯಾಣಕ್ಕೆ ಅನುಮತಿ ನೀಡಲು ಪಾಕ್ ಕ್ರೀಡಾ ಸಚಿವಾಲಯ ವಿಳಂಬ ಧೋರಣೆ ಅನುಸರಿಸಿತ್ತು ಎಂದು ಪಾಕಿಸ್ತಾನ ಫುಟ್‌ಬಾಲ್ ಫೆಡರೇಷನ್ (ಪಿಎಫ್‌ಎಫ್) ಆರೋಪಿಸಿತ್ತು. ಇದಕ್ಕೆ ತಿರುಗೇಟು ನೀಡಿದ್ದ ಸಚಿವಾಲಯ, 'ಪಿಎಫ್‌ಎಫ್ ದಾಖಲೆಗಳನ್ನು ನಿಗದಿತ ಸಮಯದೊಳಗೆ ಒದಗಿಸಿರಲಿಲ್ಲ' ಎಂದು ದೂರಿತ್ತು.

ಬಾಂಗ್ಲಾದೇಶ ತಂಡದ ಆಟಗಾರರು ಭಾನುವಾರ ಅಭ್ಯಾಸ ನಡೆಸಿದರು

ತಂಡಗಳ ಅಭ್ಯಾಸ

ಬೆಂಗಳೂರು: ಸ್ಯಾಫ್ ಟೂರ್ನಿಯಲ್ಲಿ ಪಾಲ್ಗೊಳ್ಳಲಿರುವ ಬಾಂಗ್ಲಾದೇಶ, ನೇಪಾಳ ಮತ್ತು ಮಾಲ್ಡೀವ್ಸ್ ತಂಡಗಳ ಆಟಗಾರರು ಈಗಾಗಲೇ ಇಲ್ಲಿಗೆ ಬಂದಿದ್ದು, ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ಅಭ್ಯಾಸ ನಡೆಸಿದರು. ಕುವೈತ್ ಮತ್ತು ಭೋಪಾಲ್ ತಂಡಗಳು ಸೋಮವಾರ ತಲುಪಲಿವೆ. ಭಾರತ ಹಾಗೂ ಲೆಬನಾನ್ ತಂಡಗಳು ಭುವನೇಶ್ವರದಲ್ಲಿ ಭಾನುವಾರ ಇಂಟರ್‌ಕಾಂಟಿನೆಂಟಲ್ ಕಪ್ ಟೂರ್ನಿಯ ಫೈನಲ್‌ನಲ್ಲಿ ಆಡಿದ್ದು, ಸೋಮವಾರ ಬೆಂಗಳೂರಿಗೆ ಬರಲಿವೆ.